ಏಕಾಂಕ
ನಾಟಕಗಳು

ಗೌರೀಶ ಕಾಯ್ಕಿಣಿ

Dearest Darling
Anu

ಆಕಾಶ ನಾಟಕಗಳು

(ನಾಟಕಗಳು)

With love and
blessings
Papa
5 5 82

ಗೌರೀಶ ಕಾಯ್ಕಿಣಿ

ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ

AAKAASHA NAATAKAGALU (Kannada) a collection of Radio Plays by Gaurisha Kaykini, Gokarna, Printed at Abhinava Mudrana and Published by Akshara Prakashana, both at Sagar-577 401 (Karnataka) ; First impression Feb. 1982 ; 750 Copies. ೬+66 pages, Price Rs. 5-00.

ಬೆಲೆ : ಐದು ರೂಪಾಯಿಗಳು

ಮುನ್ನುಡಿ

ಉತ್ತರಕನ್ನಡಜಿಲ್ಲೆಯ ಸಾಹಿತ್ಯಕ್ಷೇತ್ರದಲ್ಲಿ ದೀರ್ಘಕಾಲದಿಂದ ವ್ಯವಸಾಯ ಮಾಡುತ್ತ ಬಂದವರು ಈ ಸಂಕಲನದ ಲೇಖಕರಾದ ಗೌರೀಶ ಕಾಯ್ಕಿಣಿಯವರು. ಅವರು ಬಹಳ ಹಿಂದಿನಿಂದಲೂ ಪತ್ರಿಕೆಗಳಿಗೆ ವಿಶೇಷ ಬರಹಗಳನ್ನು ಕಳುಹಿಸುತ್ತಿದ್ದಂತೆ ಸಾಹಿತ್ಯವನ್ನೂ ಕುರಿತು ಅಭ್ಯಾಸಪೂರ್ಣವಾದ ವಿಮರ್ಶೆಗಳನ್ನು ಬರೆಯುತ್ತ ಬಂದಿದ್ದಾರೆ. ವಿವಿಧ ವಿಷಯಗಳನ್ನು ಕುರಿತು ಅಭ್ಯಾಸಶೀಲ ಜೀವನ ಅವರದ್ದು.

ಅವರು ಬರೆದ ಹಲವಾರು ಕೃತಿಗಳಲ್ಲಿ, ಬಾನುಲಿಯ ಸಲುವಾಗಿ ಅವರು ರಚಿಸಿರುವ ಕೆಲವೊಂದು ಕಿರುನಾಟಕಗಳು ಪ್ರಕಟವಾಗದೆ ಉಳಿದಿವೆ. ಈಗ ಅವನ್ನು ಒಂದು ಸಂಕಲನವಾಗಿ ಸಾಗರದ ಅಕ್ಷರ ಪ್ರಕಾಶನ ಸಂಸ್ಥೆಯವರು ಪ್ರಕಟಿಸಲು ಮುಂದೆ ಬಂದದ್ದು ಸಂತೋಷದ ವಿಷಯ. ನಾಟಕಪ್ರಿಯರು, ಈ ಸಂಕಲನವನ್ನು ಸ್ವಾಗತಿಸಬಹುದೆಂಬ ಅಪೇಕ್ಷೆ ನನ್ನದು.

ತಾ. 31-1-1982 | ಇತಿ,
ಸಾಲಿಗ್ರಾಮ, ದಕ್ಷಿಣ ಕನ್ನಡ | ಶಿವರಾಮ ಕಾರಂತ

ಮನೋಗತ

ಕಳೆದ ವರ್ಷ ಪ್ರಿಯಮಿತ್ರ ಶ್ರೀ ವಿಷ್ಣುನಾಯಕರು ತಮ್ಮ ಜನಪ್ರಿಯ ರಾಘವೇಂದ್ರ ಪ್ರಕಾಶನದಲ್ಲಿ ನನ್ನ ನಾಲ್ಕು ರೇಡಿಯೋ ರೂಪಕಗಳನ್ನು ಪ್ರಕಟಿಸಲು ಒಪ್ಪಿಕೊಂಡಾಗ ಇನ್ನೂ ಕೆಲವು ಉಳಿದುಕೊಂಡವು. ಅವುಗಳಲ್ಲಿ ಐದು ಗದ್ಯ ರೂಪಕಗಳನ್ನು ಇದೀಗ ಬೆಳಕಿಗೆ ತರುತ್ತಿದ್ದೇನೆ.

ಇವೆಲ್ಲವೂ ಕಾಲಕಾಲಕ್ಕೆ ಬಾನುಲಿಯಲ್ಲಿ ಬಿತ್ತರಿಸಲಾದವು; ಅಷ್ಟೇ ಅಲ್ಲ. ಪ್ರತಿಯೊಂದೂ ಬಾನುಲಿಯವರು ಕೇಳಿಕೊಂಡಾಗಲೇ ಅವರಿಗಾಗಿಯೆ ಬರೆಯಲಾದವು. ಅಂದರೆ, ಇದು ಒತ್ತಾಯದಿಂದ ಹಿಂಡಿತೆಗೆದ ರಸವೆಂದು ಅಲ್ಲ. ಪ್ರತಿಯೊಂದು ಕೃತಿಯ ಬೀಜ ಬಾನುಲಿ ಕಛೇರಿಯಿಂದ ಬಂದದ್ದು. ಅದನ್ನು ಬಿತ್ತಿ ರಸಿಕರ ಸವಿಗೆ ಸೊಗಸಾಗುವಂತೆ ಒಂದೊಂದು ಫಲವಾಗಿ ಬೆಳೆಯಿಸಿ ಕೊಟ್ಟವನು ನಾನು. (ಇದೊಂದೇ ಅಲ್ಲ ನನ್ನ ಈ ಹಿಂದಿನ, ಎಂದೆಂದಿನ ಗೀತ ಗದ್ಯ ರೂಪಕಗಳೆಲ್ಲ ಆಕಾಶವಾಣಿಯ ಆದೇಶದಿಂದಲೇ ರೂಪಗೊಂಡಂಥವು)

ಆದರೆ ಈ ಸಲ ನನ್ನ ಭಾಗ್ಯ ಹಿರಿದು. ಪೂಜ್ಯ ಡಾ. ಶಿವರಾಮಕಾರಂತರು ಅನುಗ್ರಹಿಸಿ ಇವುಗಳ ಪ್ರಕಾಶನಕ್ಕಾಗಿ ಒಂದು ಅವಕಾಶ ಒದಗಿಸಿಕೊಟ್ಟರು. ಈ ಉಪಕಾರಕ್ಕಾಗಿ ನಾನು ಡಾ. ಕಾರಂತರಿಗೆ ಅನನ್ಯ ಋಣಿ.

ಈ ಕೃತಿಗಳಲ್ಲಿ "ನ್ಯೂಟನನ ಮೂರನೆಯ ನಿಯಮ" ಅಂತಾರಾಷ್ಟ್ರೀಯ ಮಹಿಳಾ ವರ್ಷದ ನಿಮಿತ್ತ ಮೂಡಿಬಂದದ್ದು. ನನಗೆ ನೆನಪಿರುವ ಮಟ್ಟಿಗೆ ಉಳಿದವೆಲ್ಲ ಅದಕ್ಕೂ ಹಿಂದಿನ, ಮುಂಚಿನ ಕೃತಿಗಳು.

"ಸಂಕ್ರಾಂತಿ" ಒಂದು ಐವತ್ತರ ದಶಕದಲ್ಲಿಯೇ ಮುಂಬಯಿ ಆಕಾಶವಾಣಿಯಲ್ಲಿ ಪ್ರಸಾರಗೊಂಡಿತ್ತು. (1947ರ ದೀಪಾವಳಿಗೂ ಅಲ್ಲಿಂದಲೇ ನನ್ನ ಪ್ರಪ್ರಥಮ

ರೇಡಿಯೋ ರೂಪಕ ಚಿತ್ರಿಸಲಾಗಿತ್ತು. ಆದರೆ ಅದರ ಹಸ್ತಲಿಖಿತ ಕಳೆದು ಹೋಗಿದೆ. ಆದರೆ ಆ "ದೀಪಾವಳಿ" ಮತ್ತು ಈ "ಸಂಕ್ರಾಂತಿ" ಅಂದಿನ ಧಾರವಾಡದ 'ಜಯಂತಿ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದವು)

"ಕಿಸಾಗೋತಮಿ" ರೂಪಕ ಬರೆಯಲು ಧಾರವಾಡದ ಆಕಾಶವಾಣಿಯವರು ಕೇಳಿಕೊಂಡಾಗ ನಾನು ಬಹಳ ಗಾಬರಿಯಾದೆ. ಪೂಜ್ಯ ಕಾರಂತರು ಹಿಂದೆಯೇ ಇದೇ ವಸ್ತುವಿನಿಂದ ತಮ್ಮ ಸುಪ್ರಸಿದ್ಧ ಗೀತರೂಪಕವನ್ನೊಂದು ರಚಿಸಿದ್ದು ಸಾರ್ವತ್ರಿಕ ಪ್ರಸಿದ್ಧಿ ಮತ್ತು ಪ್ರಸಾರವನ್ನು ಪಡೆದದ್ದು ನನ್ನ ಕಣ್ಣೆದುರಿಗೆ ಇತ್ತು. ಅಂದಾಗ ಅದೇ ವಸ್ತುವನ್ನು ನನ್ನಂಥವನು ಅಳವಡಿಸಿಕೊಂಡು ಮತ್ತೆ ನಿರೂಪಿಸುವುದು ದೊಡ್ಡ ದುಡುಕಿನಷ್ಟೇ ಧಿಮಾಕಿನ ಕೆಲಸವೂ ಅನಿಸಿತು. ಆದರೆ ಈ ಕೃತಿ ಗದ್ಯದಲ್ಲಿ ಕಾರಂತರ ಆ ಅಪೂರ್ವ ಕಲಾಕೃತಿಯಂತಲ್ಲ–ಎಂಬ ಒಂದೇ ಭಾವನೆ ನನಗೆ ಧೈರ್ಯಕೊಟ್ಟಿತು.

ಈ ರೂಪಕಗಳಲ್ಲಿ ಕೇವಲ ರೇಡಿಯೋ ಮಾಧ್ಯಮಕ್ಕೇ ಒಗ್ಗುವ ಕಲೆ "ಸಂಕ್ರಾಂತಿ" ಉಳಿದವೆಲ್ಲ ನಾಟ್ಯರಂಗದಲ್ಲಿಯೂ ಅಭಿನಯಿಸಲು ಸಾಧ್ಯ–ತಕ್ಕ ರಂಗತಂತ್ರದಿಂದ.

ನನ್ನ ಈ ಸಂಕಲನಕ್ಕೆ ಪೂಜ್ಯ ಕಾರಂತರು ನನ್ನ ಆಗ್ರಹದ ವಿನಂತಿಗೆ ಕರಗಿ ಒಂದು ಅಮೂಲ್ಯ ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಅದಕ್ಕಾಗಿ ಕೃತಜ್ಞತೆಯನ್ನು ಹೇಗೆ ಸಲ್ಲಿಸದಿರಲಿ? ಹೇಗೆ ಸಲ್ಲಿಸಲಿ?

ಅದೇ ರೀತಿ ಈ ಪುಸ್ತಕವನ್ನು ಮುದ್ರಿಸಿದ ಅಭಿನವ ಮುದ್ರಣದವರಿಗೂ ಪ್ರಕಾಶನಗೊಳಿಸಿದ ಅಕ್ಷರ ಪ್ರಕಾಶನದವರಿಗೂ ನನ್ನ ಧನ್ಯವಾದಗಳನ್ನು ಆಭಾರಗಳನ್ನು ಸಲ್ಲಿಸುವುಕ್ಕೆ ನನಗೆ ತುಂಬ ಸಂತೋಷ.

ಮೂಲ ಪ್ರತಿಗಳನ್ನು ಹೀಗೆ ಪ್ರಕಟಿಸಲಿಕ್ಕೆ ತಮ್ಮ ಉದಾರ ಅನುಮತಿಯನ್ನಿತ್ತ ಧಾರವಾಡದ ಆಕಾಶವಾಣಿ ಕೇಂದ್ರದವರಿಗೂ ನನ್ನ ಆಭಾರವನ್ನು ಸಲ್ಲಿಸದೆ ಇರಲಾರೆ.

ಗೋಕರ್ಣ — ಇತಿ,

ಸ್ವಾತಂತ್ರ್ಯದಿನ, 1981 — ಗೌರೀಶ ಕಾಯ್ಕಿಣಿ

—ಸಮರ್ಪಣೆ—

ನನ್ನ ಸಾಹಿತ್ಯ ಮತ್ತು ಚಾರಿತ್ರ್ಯಗಳ ಶಿಲ್ಪಕ್ಕೆ
ಒಬ್ಬ ಆಚಾರ್ಯರೂ, ಆದರ್ಶರೂ ಆದ
ಡಾ. ಕೋ. ಶಿವರಾಮ ಕಾರಂತರಿಗೆ
ಪ್ರೀತ್ಯಾದರಪೂರ್ವಕ ಅರ್ಪಿಸಿದ್ದೇನೆ

—ಗೌರೀಶ ಕಾಯ್ಕಿಣಿ

ಪರಿವಿಡಿ

ಅಗ್ನಿಕನ್ಯಾ-ದ್ರೌಪದಿ

(ಬಾನುಲಿ ರೂಪಕ)

-: ಪಾತ್ರ ಪರಿಚಯ :-

ನಿವೇದಕ
ದ್ರುಪದ
ಯುಧಿಷ್ಠಿರ
ಪ್ರತಿಕಾಮಿ
ಯಾಜ
ಉಪಯಾಜ
ಕುಂತಿ
ಧೃಷ್ಟದ್ಯುಮ್ನ
ಭೀಮ
ಅರ್ಜುನ
ಕೃಷ್ಣ
ದುಃಶಾಸನ
ಶಕುನಿ
ದುರ್ಯೋಧನ
ಬ್ರಾಹ್ಮಣ
ಸಖಿ
ದ್ರುಪದನ ರಾಣಿ
ಸಭಾಧ್ವನಿಗಳು ೧, ೨, ೩, ೪,
ಗಂಡು, ಹೆಣ್ಣು

೧

ನಿವೇದಕ : ಅರಗಿನ ಮನೆಯಿಂದ ಪಾರಾಗಿ ಬಂದ ಪಂಚಪಾಂಡವರು ತಾಯಿ ಕುಂತಿ ದೇವಿಯೊಂದಿಗೆ ಬ್ರಾಹ್ಮಣರ ವೇಷದಲ್ಲಿ ಏಕಚಕ್ರನೆಂಬ ಪಟ್ಟಣದಲ್ಲಿ ವಾಸಿಸುತ್ತಿದ್ದಾರೆ. ಬಕಾಸುರನ ವಧೆ ಆದ ನಂತರ ಒಂದು ದಿನ ಪಾಂಚಾಲದೇಶಕ್ಕೆ ಹೊರಟ ಬ್ರಾಹ್ಮಣರೊಬ್ಬರು ಪಾಂಡವರ ಬಿಡಾರಕ್ಕೆ ಬಂದು ಅತಿಥಿ ಸತ್ಕಾರ ಪಡೆದು ತಮ್ಮ ಪಯಣದ ವಿಚಾರ ಕುಂತಿಯೊಡನೆ ಮಾತಾಡುತ್ತಾರೆ,

ಬ್ರಾಹ್ಮಣ : ಅಮ್ಮಾ, ಪಾಂಚಾಲದ ದೊರೆ ದ್ರುಪದನು ತನ್ನ ಮಗಳು ಯಾಜ್ಞಸೇನಿಯ ಸ್ವಯಂವರವನ್ನು ಏರ್ಪಡಿಸಿದ್ದಾನೆ. ನಾವು ಅಲ್ಲಿಗೆ ಹೊರಟಿವು. ನಿಮ್ಮ ಕುಮಾರರಿಗೂ ಬರಹೇಳಿ. ಭೂರಿ ದಕ್ಷಿಣೆ ಮೃಷ್ಟಾನ್ನ ಭೋಜನಕ್ಕೆ ಯಾವ ತೊಂದರೆಯೂ ಇಲ್ಲ. ತಿಳಿತ್ತೋ ಇಲ್ಲೋss !

ಕುಂತಿ : ಏನಂದಿರಿ ? ದ್ರುಪದನಿಗೆ ಮಗಳೇ ?

ಬ್ರಾಹ್ಮಣ : ಅರೇ, ನಿಮಗೆ ಗೊತ್ತೇ ಇಲ್ವೇ ! ಅದೊಂದು ದೊಡ್ಡ ಅದ್ಭುತ ಕಥೆ ಅಮ್ಮಾ ! ದ್ರುಪದ ಯಜ್ಞಸೇನನು, ತಿಳಿತ್ತೋ ಇಲ್ಲೋ ! ಗಂಗಾದ್ವಾರದಲ್ಲಿ. ಭಾರದ್ವಾಜ ಋಷಿಯ ಆಶ್ರಮದಲ್ಲಿ ಅವನ ಮಗ, ದ್ರೋಣಾಚಾರ್ಯನೊಡನೆ ಬ್ರಹ್ಮಚರ್ಯದಲ್ಲಿ ಹನ್ನೆರಡು ವರ್ಷ ಶಸ್ತ್ರಾಸ್ತ್ರ ವಿದ್ಯಾಭ್ಯಾಸ ಮಾಡಿದ.

ಕುಂತಿ : ಗೊತ್ತು ಬಿಡಿ, ವಿಪ್ರೋತ್ತಮರೇ. ಆಮೇಲೆ ದ್ರುಪದ ತಂದೆಯ ಪಟ್ಟಕ್ಕೆ ಬಂದಾಗ ಹಳೆಯ ಗೆಳೆಯನೆಂದು ಸಹಾಯಬೇಡಲು ಬಂದ ಬಡ ದ್ರೋಣನನ್ನು ಗುರುತಿಸಲೇ ಇಲ್ಲ.

ಬ್ರಾಹ್ಮಣ : ಹೌದು ತಾಯೀ, ಅದಕ್ಕಾಗಿ ದ್ರುಪದನಿಗೆ ಬುದ್ಧಿ ಕಲಿಸಿ ಕಣ್ಣು ತೆರೆಯಿಸಬೇಕೆಂದು ಪಂಥ ತೊಟ್ಟು ಮುಂದೆ ಹಸ್ತಿನಾಪುರವನ್ನು ಸೇರಿ ಕೌರವ-ಪಾಂಡವರಿಗೆ ಧನುರ್ವಿದ್ಯೆ ಕಲಿಸಿ ಗುರುದಕ್ಷಿಣೆಯೆಂದು ಅರ್ಜುನನಿಂದ ದ್ರುಪದನನ್ನು ಸೋಲಿಸಿ ಅರ್ಧರಾಜ್ಯ ಅವನಿಗೆ ಬಿಟ್ಟುಕೊಟ್ಟು ಅವನೊಂದಿಗೆ ಸಮಾನಸ್ಕಂದನಾದ, ತಿಳಿತ್ತೋ ಇಲ್ಲೋ

ಕುಂತಿ : ಹೂಂ. ಅದೂ ಗೊತ್ತು, ಮುಂದೆ ?

ಬ್ರಾಹ್ಮಣ : ಮುಂದೆ ಆ ದ್ರೋಣನನ್ನು ಗೆಲ್ಲುವ ಮಗನನ್ನು ಪಡೆಯಬೇಕೆಂದು ದ್ರುಪದ ಪ್ರತಿಜ್ಞೆ ಹೊತ್ತು ಯಜ್ಞ ಆರಂಭಿಸಿದನು.

[ಯಜ್ಞಶಾಲೆಯ ಕಲಕಲ. ಸ್ವಾಹಾಕಾರದ ಮಂತ್ರಘೋಷಗಳ ಹಿನ್ನೆಲೆಯಲ್ಲಿ ಮುಂದಿನ ಸಂಭಾಷಣೆ].

ದ್ರುಪದ : ಈ ದ್ರುಪದನ ಪ್ರತಿಜ್ಞೆ ಈಡೇರಬಹುದೇ ? ಏನು ಯಾಜೋಪ-ಯಾಜರೇ, ಯಜ್ಞ ಸಾಂಗವಾಗುವುದೇ ? ನನ್ನ ಕಾಮೇಷ್ಟಿ ಫಲಿಸೀತೇ ? ಏನು ಉಪಯಾಜರೇ.

ಉಪಯಾಜ : ದ್ರುಪದ ಮಹಾರಾಜಾ, ನಂಗೇನು ಕೇಳ್ತೀರಾ ? ನಮ್ಮಣ್ಣಂಗೇ ಎಲ್ಲ ಗೊತ್ತು. ಯಜಣ್ಣನಿಗೇ ಕೇಳಿ, ಅಣ್ಣ ಬಸವ, ನಾ ಬಾಲ. ಹೂಂ. ಈ ಪುತ್ರಕಾಮೇಷ್ಟಿ ನನ್ನ ಅಭಿಪ್ರಾಯವಲ್ಲ ! ಮಕ್ಕಳಿದ್ದ ಮಹಾರಾಜನಿಗೆ ಮತ್ತೆ ಪುತ್ರ ಕಾಮ ಅದಕ್ಕೆ ಮತ್ತೆ ಇಷ್ಟ.

ಯಾಜೋಪಯಜ : ಸಾಕು ಸುಮ್ಮನಿರು. ಸ್ವಾಹಾಕಾರ ನಡೆಯಿಸು ಅಗ್ನಯೇ ಸ್ವಾಹಾ. 'ಇದಂ ನಮಮ' ಹೇಳಿ ಮಹಾರಾಜರೇ.

ದ್ರುಪದ : ಇದಂ ನಮಮ. ಯಾಜಾಚಾರ್ಯರೇ....

ಯಾಜೋಪಯಾಜ : (ನಸ್ಯ ಏರಿಸುವ ದನಿಗೆ ಪಿಟೀಲು ಕಮಾನಿನ ದನಿ ಜೋಡಣೆ) ಮಹಾರಾಜರೇ, ಇದೀಗ ಪ್ರಧಾನ ಯಾಗ ಮುಗಿಯಿತು. ಆಮೇಲೆ ಪೂರ್ಣಾಹುತಿ. ಮಹಾರಾಣಿಯರನ್ನು ಕರೆಯಿರಿ ಇತ್ತ. ಮಹಾರಾಣಿಯವರೇ, ಇದು ಯಜ್ಞ ಶಿಷ್ಟ ಹವಿ. ಅಮೃತ ಪಾಯಸ. ಇದನ್ನು ಸ್ವೀಕರಿಸಿ, ಸೇವಿಸಿ. ಇಬ್ಬರು ಮಕ್ಕಳನ್ನು ಪಡೆಯುವಿರಿ !

ಮಹಾರಾಣಿ : ನಾ ಒಲ್ಲೆ, ಯಾಜಭಟ್ಟರೇ ನಾ ಒಲ್ಲೆ, ನನ್ನ ಮೈ ಕೈ ಬಾಯಿ ಎಲ್ಲ ಮೈಲಿಗೆ.

ಯಾಜ : (ನಸ್ಯ) ಹಾಗನ್ನಬೇಡಿ ಅಮ್ಮಾ, ಇದು ದಿವ್ಯ ಹವಿಸ್ಸು. ಬೇಡವೆನ್ನಬಾರದು. ಹೂಂ. ಬೇಡವಾದರೆ ಬಿಡಿ. ನಾನು ಅಗ್ನಿಕುಂಡಕ್ಕೇ ಚೆಲ್ಲುತ್ತೇನೆ. ಹೂಂ ಆದದ್ದಾಗಲಿ. ಹುತಾಶನಾಯ ಸ್ವಾಹಾ.

ದ್ರುಪದ : ಇದಂ ನಮಮಃ

(ಒಮ್ಮೆಲೆ ಕೋಲಾಹಲ ತೀವ್ರವಾಗುತ್ತದೆ)

ಎಲ್ಲರೂ ದನಿ ೧ : ಅಬ್ಬಾ, ಇದೇನು ಮಹಾಜ್ವಾಲೆ ! ಆಕಾಶಕ್ಕೆ ಮುಟ್ಟಿತು.

ದನಿ ೨ : ಅಗ್ನಿಯ ಅರ್ಭಟ ! ನಮೋ ನಮೋ ಅಗ್ನಿನಾರಾಯಣ !

ದನಿ ೩ : ಅರೆರೇ ಅದ್ಭುತ, ಯಜ್ಞ ಶಾಲೆ ಎಲ್ಲ ಕತ್ತಲು

ಯಾಜೋಪಯಾಜ : ಅಗ್ನಿದೇವಾ ಸಂಹರಿಸಿ, ಕೋಪವನ್ನು ಪರಿಹರಿಸು !
ದ್ರುಪದ : ಇದೇನು ಅಭದ್ರ ಬೊಗಳುವಿರಿ ? ಸಂಹಾರವೇನು ಬಂತು ಈ ಮಂಗಲ ಕಾರ್ಯದಲ್ಲಿ
ಯಾಜ : ಹಾಗಲ್ಲ ಮಹಾರಾಜಾ, ಸಂಹರಿಸು ಅಂದರೆ ಅಂಕೆಯಲ್ಲಿ ತಾ ಎಂದು. ಚಂಡಿಯು ಬಿಚ್ಚಿದ ಮಂಡೆಯಂತೆ ಅಗ್ನಿಜ್ವಾಲೆಗಳೂ ಚೆಲ್ಲಾಡುತ್ತಿವೆ. ಹೂಂ !
ದನಿ ೧ : ಇದೇನಾಶ್ಚರ್ಯ ! ಅಗ್ನಿಕುಂಡದಿಂದ ಈ ದಿವ್ಯ ಪುರುಷ !
ದನಿ ೨ : ಅಬ್ಬಬ್ಬಾ ಎಂಥ ಉಗ್ರ ಮುದ್ರೆ ! ಬೆಂಕಿಯ ಪಿಂಡ !
ದನಿ ೧ : ಕವಚ ಕುಂಡಲ ಕಿರೀಟ ಸಹಿತ ಎದ್ದು ಬಂದಾನೆ ಭದ್ರಾಕಾರ !
ದನಿ ೨ : ಖಡ್ಗ ತೂಣೀರ ಧನುರ್ಧಾರಿ ! ಯುದ್ಧ ಸನ್ನದ್ಧ !
ಎಲ್ಲರೂ : ಇವನಾರು ! ಇವನಾರು !
ಅಶರೀರವಾಣಿ : (ಗುಡುಗು ಮಿಂಚಿನೊಂದಿಗೆ) ದ್ರುಪದ ಮಹಾರಾಜ, ಇವನೇ ನಿನ್ನ ಮಗ ಧೃಷ್ಟದ್ಯುಮ್ನ. ಇವನಿಂದಲೇ ದ್ರೋಣಾಚಾರ್ಯನ ವಧೆ !
ದ್ರುಪದ : ಧನ್ಯೋಽಸ್ಮಿ, ಧನ್ಯೋಽಸ್ಮಿ, ನನ್ನ ಅಭೀಷ್ಟ ಫಲಿಸಿತು.
ಎಲ್ಲರೂ : ಇಲ್ಲ ಮಹಾರಾಜಾ, ಇಲ್ಲ, ಇಕೋ ಇನ್ನೊಂದು ದಿವ್ಯಾಕೃತಿ ಯಜ್ಞ ಕುಂಡದಿಂದ ಎದ್ದಿದೆ.
ದ್ರುಪದ : ಇವಳಾರು ಜ್ವಾಲಾಮಾಲಿನಿ.
ದನಿ ೧ : ಎಂಥ ತೇಜಸ್ವಿನಿ !
ದನಿ ೨ : ಕೃಷ್ಣ ಸುಂದರಿ !
ದನಿ ೩ : ಮೋಡದ ಮೈ, ಮಿಂಚಿನ ಕಾಂತಿ !
ಅಶರೀರವಾಣಿ : (ಹಿಂದಿನಂತೆ) ರಾಜಾ ಯಜ್ಞಸೇನಾ, ಇವಳು ನಿನ್ನ ಮಗಳು ದ್ರೌಪದಿ. ಅಗ್ನಿಕನ್ಯೆ ಯಾಜ್ಞಸೇನೀ. ಇವಳಿಂದ ಕ್ಷತ್ರಿಯ ಕುಲವು ನಾಶವಾಗುವುದು ! (ಗುಡುಗು ಮಿಂಚು)
ಎಲ್ಲರೂ : ಆಶ್ಚರ್ಯ, ಮಹದಾಶ್ಚರ್ಯ ! ಪರಮಾಶ್ಚರ್ಯ !

೨

ಕುಂತಿ : ಈ ದ್ರೌಪದಿ ಅಗ್ನಿಕನ್ಯೆ. ಅವಳ ಸ್ವಯಂವರವೇ ?
ಬ್ರಾಹ್ಮಣ : ಹೌದು ತಾಯಿ, ಅವಳು ಅರ್ಜುನನನ್ನೇ ವರಿಸಬೇಕೆಂದು ದ್ರುಪದ

ರಾಜನ ಇಚ್ಛೆ. ಆದರೆ ಅರ್ಜುನನೆಲ್ಲಿ ? ಅವನೂ ಉಳಿದ ಪಾಂಡವರೊಂದಿಗೆ ಅರಗಿನ ಮನೆಯಲ್ಲಿ ಸುಟ್ಟು ಸತ್ತಿರಬೇಕು. ಆದರೂ ಸ್ವಯಂವರಕ್ಕೆ ಸರ್ವ ದ್ವಿಜರಿಗೂ ಆಮಂತ್ರಣ. ನಿನ್ನ ಮಕ್ಕಳೂ ಬರಲಿ. ಅವರೇನು ಪರಾಕ್ರಮದಲ್ಲಿ ಕಡಿಮೆಯೇ ? ಮೊನ್ನೆ ನಿನ್ನ ಒಬ್ಬ ಮಗ ಬಕಾಸುರನನ್ನು ಕೊಂದಿಲ್ಲವೇ ? ಉಳಿದವರಲ್ಲಿ ಹೊಸ ಅರ್ಜುನನೇ ಹೊರಡಬಹುದು.

ಕುಂತಿ : ಆಗಲಿ ದ್ವಿಜೋತ್ತಮಾ. ತಮ್ಮ ಇಷ್ಟದಂತೆಯೇ ಆಗಲಿ. ನಾವೆಲ್ಲ ಪಾಂಚಾಲ ನಗರಕ್ಕೆ ಬರುತ್ತೇವೆ.

೩

ನಿವೇದಕ : ದ್ರೌಪದಿಯ ಸ್ವಯಂವರ ಮಂಟಪ. ಭರತ ವರ್ಷದ ಅತಿರಥ ಮಹಾರಥಿಗಳೆಲ್ಲ ನೆರೆದಿದ್ದಾರೆ. ಅಣ್ಣ ಧೃಷ್ಟದ್ಯುಮ್ನನು ವರಮಾಲೆ ಹಿಡಿದುಕೊಂಡು ದ್ರೌಪದಿಯೊಂದಿಗೆ ಪ್ರವೇಶಿಸುತ್ತಾನೆ.

[ಭೇರಿ ಕಹಳೆ ತೂರ್ಯ ನಾಗಸ್ವರಗಳ ಮೊಳಗು]

ಧೃಷ್ಟದ್ಯುಮ್ನ : ಅಭ್ಯಾಗತ ರಾಜಪುತ್ರರೇ, ಇಲ್ಲಿದೆ ಮತ್ಸ್ಯಯಂತ್ರ, ಇಲ್ಲಿದೆ ಧನುರ್ಬಾಣ. ಈ ಯಂತ್ರವನ್ನು ಭೇದಿಸಿ ನನ್ನ ಈ ತಂಗಿ ಯಾಜ್ಞಸೇನಿಯ ವರಮಾಲೆಗೆ ಕೊರಳು ಒಡ್ಡಿರಿ. ತಂಗೀ, ಇದು ನೋಡು, ಇವನು ಕುರುಕುಲಾಧೀಶ್ವರ ದುರ್ಯೋಧನ, ಈತ ದುಃಶಾಸನ, ಈತ ಶಕುನಿ, ಈತ ಕರ್ಣ (ಪ್ರತಿ ಹೆಸರಿಗೂ ತುತ್ತೂರಿ)

ದ್ರೌಪದಿ : ಕರ್ಣನೇಕೆ ಇಲ್ಲಿ ? ಸೂತಪುತ್ರನನ್ನು ನಾನು ವೀರಕ್ಷತ್ರಾಣಿ ವರಿಸಲಾರೆ. ಇವನಿಗೆ ಶೀಲಕ್ಕೆ ತಕ್ಕ ಕುಲವಿಲ್ಲ !

ಸಭಿಕರ ಕಲಕಲ : ಶಾಭಾಸ್, ಶಾಭಾಸ್ ! ಎಂಥ ಧೀರೆ ! ಏನು ಕುಲಾಭಿಮಾನ ! ಏನಿದು ಘೋರ ಮುಖಭಂಗ ! ಮಹಾರಥಿಯ ತೇಜೋವಧೆ !

ಧೃಷ್ಟದ್ಯುಮ್ನ : ಕ್ಷಮಿಸು ಕರ್ಣಾ.

ಕರ್ಣ : ಅಡ್ಡಿ ಇಲ್ಲ ಮಹಾರಾಜಾ, ಮಾಡಬಾರದ್ದು ಮಾಡಿದ್ದೀಯ. ಆಗಬಾರದ್ದು ಆಗದೆ ಹೋಗದು !

[ಒಮ್ಮೆಲೆ ಸಭೆಯಲ್ಲಿ ಗುಜುಗುಜು ಕಲಕಲ ಏರುತ್ತ ಹೋಗತ್ತದೆ]

ದನಿ ೧ : ಇವನಾರು ಮತ್ತೆ ?

ದನಿ ೨ : ಬ್ರಾಹ್ಮಣರ ಸಮೂಹದಿಂದ ಎದ್ದು ಬಂದ !

ದನಿ ೩ : ಈ ಪ್ರಾಣಿ ಮರುಳಾದ ರಾಜಕುಮಾರಿಯ ಮುಖಕ್ಕೆ !

ದನಿ ೪ : ಕೂಗಬೇಡ, ನೋಡು. ಹೇಗೆ ಮದ್ದಾನೆಯಂತೆ ನಡೆದು ಬರುತ್ತಾನೆ ! ವೇದ ಮಂತ್ರದವನಿಗೆ ಯಂತ್ರ ಭೇದವೇಕೆ ?

ಎಲ್ಲರೂ : ಅರೇರೇ, ಬಿಲ್ಲು ನೆಗೆದು ತಿಬ್ಬೇರಿಸಿ ಬಾಣ ಹೂಡಿಯೇ ಬಿಟ್ಟ.

[ಒಮ್ಮೆಲೆ ಆಶ್ಚರ್ಯ ಆನಂದದ ಗರ್ಜನೆ]

ಬ್ರಾಹ್ಮಣ ವೀರ ! ಇಮ್ಮಡಿ ಭಾರ್ಗವ ! ಭಾಪು, ಭಾಪು ! ದ್ರೌಪದಿಯನ್ನು ಗೆದ್ದ !

೪

ದ್ರುಪದ : ಧೃಷ್ಟದ್ಯುಮ್ನಾ. ಇದೇನಾಯಿತು ? ನನ್ನ ದ್ರೌಪದಿಯ ಪತಿ ಅರ್ಜುನ ನಾಗಬೇಕಿತ್ತು !

ಧೃಷ್ಟದ್ಯುಮ್ನ : ಅಪ್ಪಾ, ಈ ಬ್ರಾಹ್ಮಣ ವೀರ ಅರ್ಜುನನೇ ಆಗಿರಬೇಕು ! ಈ ಠೀವಿ ಗಾಂಡೀವಿಯದೇ ! ಪಾಂಡವರು ಅರಗಿನ ಮನೆಯಲ್ಲಿ ನಾಶಗೊಂಡಿದ್ದು ಸುಳ್ಳು !

ದ್ರುಪದ : ಹಾಗೆಯೇ ಆಗಲಿ, ನೀನು ಈ ವಧೂವರರನ್ನು ಹಿಂಬಾಲಿಸಿ ಅವರ ಬಿಡಾರಕ್ಕೆ ಹೋಗಿ ಅವರ ದಿನಚರ್ಯೆಯನ್ನೆಲ್ಲ ನೋಡಿಕೊಂಡು ಬಾ !

೫

ನಿವೇದಕ : ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜವೈಭವ ರಾಜಸೂಯಯಾಗ ಮುಗಿದು ಅಭ್ಯಾಗತ ಅರಸರೆಲ್ಲ ತೆರಳಿದರೂ ದುರ್ಯೋಧನ ಶಕುನಿ ಪ್ರಭೃತಿಗಳು ಹಿಂದೆ ಉಳಿದಿದ್ದಾರೆ. ಇದೀಗ ಮಯ ವಿರಚಿತ ದಿವ್ಯ ಸಭೆಯನ್ನು ಸುತ್ತಾಡಿ ನೋಡುತ್ತಿದ್ದಾರೆ. ಅದೋ ದೂರದ ಅಟ್ಟಾಲಿಕೆಯಲ್ಲಿ ಅವರನ್ನೇ ವೀಕ್ಷಿಸುತ್ತ ಸಖಿಯರೊಂದಿಗೆ ದ್ರೌಪದಿ.

ಸಖಿ : ನೋಡಿದಿರಾ ಮಹಾರಾಣಿ, ಅಲ್ಲಿ ದುರ್ಯೋಧನ ಮಹಾರಾಜರು ಬಾಗಿಲೆಂದು ನುಗ್ಗಿ ಗೋಡೆಗೆ ತಲೆ ಜಪ್ಪಿಕೊಂಡರು ! ಹಃ ಹಃ ಹಃ !

ದ್ರೌಪದಿ : ಅವರ ತಲೆ ದಪ್ಪ ಇದೆಯಪ್ಪಾ ! ಗೋಡೆಗೇನಾಯಿತೋ ! (ನಗು)

ಸಖಿ : ಅಮ್ಮಯ್ಯಾ ? ಇದೇನು, ಶಕುನಿ ಮಾವ ನೆಲವೆಂದು ಅಡಿ ಇಟ್ಟು ಆ ಶೋಭೆಯ ಕೊಳದಲ್ಲಿ ಕೊರಳವುಟ ಬಿದ್ದು ಮುಳುಗಿದ ! (ನಗು)

ದ್ರೌಪದಿ : ಅಲ್ಲೇ, ಅತ್ತ ನೋಡೇ, ಅಥವಾ ಬೇಡ. ನೀರೆಂದು ಭಾವಿಸಿ ದುರ್ಯೋಧನ ಆ ಅಂಗಳದಲ್ಲಿ ಉಟ್ಟ ವಸ್ತ್ರ ಮೇಲೆತ್ತಿ ತೊಡೆ ತೆರೆದು ತೋರಿಸುತ್ತ ನಡೆದಿದ್ದಾನೆ. ಇತ್ತ ಹೊರಳೇ ಮರುಳೇ ! ಪಾಪ, ಅಂಧ ಪುತ್ರ ! ಇನ್ನೇನು ! (ನಗು)

ದುರ್ಯೋಧನ : (ಕೋಪೋದ್ರಿಕ್ತ) ಅಂಧ ಪುತ್ರ ! ಪಾಪ ! ಏನಿದು ಈ ದ್ರೌಪದಿಯ ದರ್ಪ ! ಶಕುನಿ ಮಾವ, ಇಂದ್ರಪ್ರಸ್ಥದ ಐಶ್ವರ್ಯ ನನ್ನದಾಗಲೇಬೇಕು. ರಾಜಸೂಯ ಫಲಿಸಲೇಬೇಕು.

ಶಕುನಿ : ಅದಕ್ಕೇನಂತೆ ! ನಾಳೆಯೇ ಜೂಜಾಡೋಣ. ಪಾಂಡವರನ್ನು ಜೂಜಿನಲ್ಲಿ ಗೆಲ್ಲೋಣ, ದೇಶಕೋಶವೆಲ್ಲ ಸೆಳೆದುಕೊಳ್ಳೋಣ.

ದುರ್ಯೋಧನ : ಅಷ್ಟು ಸಾಲದು ಮಾವಾ, ಈ ಕೃಷ್ಣೆ, ಈ ಬೆಂಕಿಯ ಮಗಳ ಕಾವು ಪೂರ್ತಿ ಆರಬೇಕು. ನನ್ನ ತೊಡೆ ಕಂಡು ಕೇಕೆ ಹಾಕಿದ ದುಷ್ಟೆ ! ಈ ತೊಡೆಯನ್ನೇರುವ ತೊತ್ತಾಗಬೇಕು.

(ಅವನ ಕಿವಿಯಲ್ಲಿ ದ್ರೌಪದಿಯ ನಗು ಮೊಳಗುತ್ತದೆ)

ಸಖಿ : ಮಹಾರಾಣಿ,ಮಹಾರಾಣಿ ನನಗೆ ಭಯವಾಗುತ್ತದೆ. ಶಕುನಿ ದುರ್ಯೋಧನರು ನಮ್ಮನ್ನೇ ದುರುಗುಟ್ಟುತ್ತ ಏನೇನೋ ಗುರುಗುಟ್ಟುತ್ತ ಹೋದರು.

ದ್ರೌಪದಿ : ಹೋಗಲಿ, ವಿನಾಶಕಾಲಕ್ಕೆ ವಿಪರೀತ ಬುದ್ಧಿ !

೬

ದ್ಯೂತ ಸಭೆ.

ದನಿ ೧ : ಹಾ! ಆಗಬಾರದ್ದಾಯಿತು ! ಪಾಂಡವರು ಸೋತರು !

ದನಿ ೨ : ಮಾಡಬಾರದ್ದು ಮಾಡಿದರೆ ಮತ್ತೇನು ಆಗಬೇಕು ?

ದನಿ ೩ : ಆ ಶಕುನಿ ಮಹಾ ಕಪಟಿ. ಯುಧಿಷ್ಠಿರ ತನ್ನ ಸಾಮ್ರಾಜ್ಯ ಸರ್ವಸ್ವ ಕಳೆದು ಕೊಂಡ !

ದನಿ ೧ : ಅಕೋ ಹೆಂಡತಿಯನ್ನು ಪಣಕ್ಕೆ ಒಡ್ಡಿದ ಮೂರ್ಖ.

ದನಿ ೨ : ಅವಳನ್ನೂ ಸೋತ. ಅಯ್ಯೋ, ಇದೆಂಥ ಘೋರ ಕಾಲ ಬಂತು !

ದನಿ ೩ ಅದೋ ದುರ್ಯೋಧನ ಮಹಾರಾಜರ ಆಜ್ಞೆಯಂತೆ ಪ್ರಾತಿಕಾಮಿ ದ್ರೌಪದಿಯನ್ನು ಕರೆಯಲು ಹೋದ.

೭

ಪ್ರಾತಿಕಾಮಿ : ದೇವಿ, ದ್ರೌಪದೀ, ನಾನು ದೂತ ಪ್ರಾತಿಕಾಮಿ.

ದ್ರೌಪದಿ : ತಿಳಿಯಿತು, ಮತ್ತೆ ಹೇಳಬೇಡ. ಕೇಳಲಾರೆ, ಸಭೆಯಲ್ಲಿ ತಿರುಗಿ ಹೋಗು ಧೃತರಾಷ್ಟ್ರ ಮಹಾರಾಜರಿಗೆ ಕೇಳು.

ದುರ್ಯೋಧನ : ಅವಳದೇನು ಪ್ರಶ್ನೆಯೋ, ಇಲ್ಲಿಗೇ ಬಂದು ಅವಳೇ ಕೇಳಲಿ. ಹೋಗು ಕರೆದುಕೊಂಡು ಬಾ, ಬೇಡ, ದುಃಶಾಸನಾ, ಆ ದಾಸಿಯನ್ನು ನೀನೇ ಎಳೆದು ತಾ !

[ಗಂಡು-ಹೆಣ್ಣು ದನಿಗಳು ಕಳವಳದಿಂದ ರೇಗಾಡುತ್ತವೆ]

ಹೆಣ್ಣು : ಅಯ್ಯೋ ಇಂಥ ಅವಸ್ಥೆ ವೈರಿಗೂ ಬರಬಾರದು !

ಗಂಡು : ಅರೇ, ಆ ಪಾಪಿ ದ್ರೌಪದಿಯನ್ನು ದರದರ ಎಳೆದು ತರುತ್ತಿದ್ದಾನಲ್ಲ !
("ಅಯ್ಯೋ, ಬಿಡು ಪಾಪೀ ಬಿಡು :-" ದ್ರೌಪದಿಯ ಕೂಗು.
"ನಡೆ, ಬಿಡುವುದು ಅಲ್ಲಿ, ಸಭೆಯಲ್ಲಿ ಭಂಡಾಟ ತಡೆ:-" ದುಃಶಾಸನ.
"ಅಯ್ಯೋ, ಹಾಯ್, ದೇವಾ, ದೇವಾ :- ದ್ರೌಪದಿ")

ಹೆಣ್ಣು ೧ : ಇದೇನು ಅಸಹ್ಯ, ಆ ದುಷ್ಟ ಮಹಾರಾಣಿಯ ತುರುಬು ಹಿಡಿದು ಎಳೆಯುತ್ತಿದ್ದಾನೆ !

ಗಂಡು ೧ : ಅಯ್ಯೋ ಪಾಪಿ, ಸೆರಗು ಹಿಡಿದು ಸೆಳೆಯುತ್ತಿದ್ದಾನೆ !

ಹೆಣ್ಣು ೨ : ಪಾಪ, ದ್ರೌಪದಿ ರಜಸ್ವಲೆ.

ಹೆಣ್ಣು ೧ : ಏಕವಸ್ತ್ರೆ

ಗಂಡು ೨ : ಇದೆಂಥ ದುರ್ಬುದ್ಧಿ ಬಂತೋ ಕೌರವನಿಗೆ !

[ದ್ರೌಪದಿಯ ಚೀತ್ಕಾರ, ದುಃಶಾಸನನ ಕೇಕೆ ಗರ್ಜನೆ ಹಿನ್ನೆಲೆಯಲ್ಲಿ ನಡೆಯುತ್ತಲೇ ಇರುತ್ತವೆ].

ಗಂಡು ೧ : ಸೈ ಸೈ. ದ್ರೌಪದಿ ಕಟುಕನ ಕೈಯಿಂದ ಪಾರಾದ ಗೋವು-ಧೃತರಾಷ್ಟ್ರ ಮಹಾರಾಜನ ಸಿಂಹಾಸನದ ಬುಡಕ್ಕೆ ಓಡಿ ಹೋಗಿ ಬಿದ್ದು ಗೋಗರೆಯುತ್ತಿದ್ದಾಳೆ.

ದ್ರೌಪದಿ : ಮಹಾರಾಜಾ, ಈ ನಿನ್ನ ಸೊಸೆಯನ್ನು ಕಾಪಾಡು.

ಧೃತರಾಷ್ಟ್ರ: ಇದೇನು ನಡೆದಿದೆ ! ದುಃಶಾಸನ ಬಿಡು ಅವಳನ್ನು ದೂರ ಸರಿ ! ಎಂಥ ಅನಾಚಾರ, ನಾನು ಜನ್ಮಾಂಧ, ನೀವು ನನ್ನ ಮಕ್ಕಳು ಮದಾಂಧರು !

ದುರ್ಯೋಧನ : ಲೇ ದಾಸೀ, ಇಲ್ಲಿ ನೋಡು, ಅಂದು ನೋಡಿ ನಕ್ಕೆಯಲ್ಲಾ ಅದೇ ಈ ತೊಡೆ. ಇದನ್ನೇರು ಬಾ !

ಧೃತರಾಷ್ಟ್ರ : ಮುಚ್ಚು ಬಾಯಿ, ಮೂರ್ಖ ಮಗನೇ ! ದ್ರೌಪದೀ, ನಿನ್ನ ಹೇಳಿಕೆ ಏನು ? ನಿರ್ಭಯಳಾಗಿ ಹೇಳು.

ದ್ರೌಪದಿ : ಕ್ಷಮಿಸು ಮಹಾರಾಜಾ, ಕ್ಷಮಿಸಿ ಸಭಾಸದರೇ, ಆಗಲೇ ನಿಮ್ಮನ್ನು ನಾನು ನಮಸ್ಕರಿಸಲಿಲ್ಲ ನನ್ನ ಕೈಗಳೆರಡೂ ಮರ್ಯಾದೆ ಮುಚ್ಚಿಕೊಳ್ಳಲು ತೊಡಗಿದ್ದವು. ಇದೋ ಈಗ ನಿಮಗೆಲ್ಲ ವಂದನೆ. ಸ್ವಯಂವರ ಕಾಲದಲ್ಲಿ ಬಿಟ್ಟರೆ ಹಿಂದೆ ಎಂದೆಂದೂ ನಾನು ಹೀಗೆ ಸಭೆಯಲ್ಲಿ ನಿಂತವಳಲ್ಲ. ಇದೀಗ ಅರೆ ಬತ್ತಲೆ ನಿಂತಿದ್ದೇನೆ. ಮೈ ಮುಚ್ಚಿಕೊಳ್ಳಲಾರೆ. ನೀವು ಕಣ್ಮುಚ್ಚಿಕೊಂಡು ಕೇಳಿರಿ

ಧೃತರಾಷ್ಟ್ರ : ನನ್ನ ಕಣ್ಣು ಮುಚ್ಚಿಯೇ ಇದೆ. ಅದು ಇಂದು ಕ್ಷೇಮವೇ ಆಯಿತು (ನಿಟ್ಟುಸಿರು) ನಿನ್ನ ಪ್ರಶ್ನೆ ಏನು ಮಗಳೇ ?

ದ್ರೌಪದಿ : ಹೆಂಡತಿಯನ್ನು ಗಂಡ ಜೂಜಿನಲ್ಲಿ ಪಣಕ್ಕೆ ಹಚ್ಚಬಹುದೇ ? ಹೆಣ್ಣು ಒಂದು ಒಡವೆಯೇ ? ಅಲ್ಲದೆ ತಾನು ಸೋತು ಸ್ವತ್ವ ಕಳೆದುಕೊಂಡ ಗಂಡ ಹೆಂಡತಿಯನ್ನು ಪಣಕ್ಕೆ ಒಡ್ಡಲು ಸ್ವತಂತ್ರನೇ ? ಹೇಳಿರಿ ಗುರುಗಳೇ, ಹಿರಿಯರೇ, ಕುಲವೃದ್ಧರೇ, ಕುರುವೃದ್ಧರೇ ಇದಾವ ನ್ಯಾಯ ? ಇದಾವ ಧರ್ಮ ?

[ಸಭೆಯಲ್ಲಿ ಕಲಕಲ]

ಭೀಷ್ಮಾಚಾರ್ಯರೇ ಹೇಳಬೇಕು ! ದೇವವ್ರತರೇ ನಿರ್ಣಯ ಕೊಡಬೇಕು !

ಭೀಷ್ಮ : ದ್ರೌಪದೀ, ಸೌಭಾಗ್ಯವತೀ, ನಿನ್ನ ಪ್ರಶ್ನೆ ಯೋಗ್ಯವಿದೆ. ಆದರೆ ಅದಕ್ಕೆ ನಾನು ಯೋಗ್ಯ ಉತ್ತರ ಕೊಡಲಾರೆ. ಧರ್ಮದ ಗತಿ ಅತಿ ಗಹನ, ಅತಿ ಸೂಕ್ಷ್ಮ ! ನಿನ್ನ ಪತಿ ಯುಧಿಷ್ಠಿರ ಸತ್ಯದ ಮರ್ಮವನ್ನು ಬಲ್ಲ ಆತ ಸತ್ಯ ಧರ್ಮದಿಂದ ಎಂದೂ ತಪ್ಪಿ ನಡೆಯುವವನಲ್ಲ.

ದ್ರೌಪದಿ : ಅಂದರೆ ಏನು ಅರ್ಥ ?

ಭೀಷ್ಮ : (ವಿಷಣ್ಣನಾಗಿ ನಕ್ಕು) ಅರ್ಥಕ್ಕೆ ಪುರುಷನು ದಾಸನು. ಅರ್ಥವು ಯಾವನಿಗೂ ದಾಸವಲ್ಲ. ಇದಕ್ಕೂ ಹೆಚ್ಚು ನಾನೇನೂ ಹೇಳಲಾರೆ.

ದ್ರೌಪದಿ : ನಾನು ಹೇಳಬಲ್ಲೆ

ದುರ್ಯೋಧನ : ನೀನೂ ಹೇಳಲಾರೆ. ನೀನು ದಾಸಿ. ದಾಸಿಗೆ ನಾಲಿಗೆ ಇಲ್ಲ. ಒಡೆಯನ ಅಪ್ಪಣೆ ಪಾಲಿಸಲು ಕೈಕಾಲು ಮಾತ್ರ. ಒಡೆಯನ ಇಚ್ಛೆಗೆ ಒಲಿಯಲು ಮೈ ಮಾತ್ರ ! (ಗಹಗಹಿಸಿ ನಗುವನು) ಕೇಳು, ಆ ಭೀಮನಿಗೆ.

ಭೀಮ : (ಭುಗಿಲೆದ್ದು ಗರ್ಜಿಸುವನು) ಯಾರಾದರೂ ತನ್ನಿರೊ, ಬೆಂಕಿಯನು ತನ್ನಿ ! ಈ ದುಃಶಾಸನನ ಕೈಗಳನ್ನು ಸುಡುತ್ತೇನೆ ! ದ್ರೌಪದಿಯ ತುರುಬಿಗೆ –ಸೆರಗಿಗೆ–ಆಃ ! ತಾಳೆನು ! (ಉಸಿರುಗಟ್ಟಿ) ಅಬ್ಬ ! (ಸಿಟ್ಟುಸಿರು)

ದ್ರೌಪದಿ : ನೀವೇಕೆ ರೇಗಾಡುವಿರಿ ? ಅಸಹಾಯನ ಕೋಪದಷ್ಟು ಕನಿಕರದ ಸಂಗತಿ ಇನ್ನೊಂದಿಲ್ಲ. ಈ ಕೌರವರನ್ನು ಸುಡಲು ಬೇರೆ ಬೆಂಕಿ ಏಕೆ, ಏಕೆ ಬೇಕು ? ನಾನೇ ಬೆಂಕಿ. ಬೆಂಕಿಯಿಂದೆದ್ದು ಬಂದ ಜ್ವಾಲೆ, ನನ್ನನ್ನು ಮುಟ್ಟಿದವರು ಜೀವಂತವಿರಲಾರರು. ಮಹಾರಾಜಾ, ನಿನ್ನ ಈ ಸೊಸೆಗೆ ಇಷ್ಟೊಂದು ನೀಡು–ನನ್ನ ಪಂಚ ಪತಿಗಳ ಸ್ವಾತಂತ್ರ್ಯ ಮತ್ತು ಅವರ ಧನುರ್ಬಾಣಗಳು. ಮುಂದಿನ ನಮ್ಮ ದಾರಿ ಅವರ ಬಾಣ ತೋರಿಸುವ ಗುರಿ.

ಧೃತರಾಷ್ಟ್ರ : ತಥಾಸ್ತು ಮಗಳೇ, ಕಲ್ಯಾಣಮಸ್ತು.

[ಧನ್ಯ ! ಧನ್ಯ ! ಅಗ್ನಿಕನ್ಯೆ ದ್ರೌಪದಿ ಧನ್ಯ ! ಎಂಥ ಮಾತು ! ಎಂಥ ತೇಜ ! ಇವಳೊಬ್ಬಳೇ ಈ ಸಭೆಯಲ್ಲಿ ಗಂಡು : ಇತ್ಯಾದಿ ಉದ್ಗಾರಗಳು]

೮

ನಿವೇದಕ: ವನವಾಸ ಮುಗಿದು ಅಜ್ಞಾತವಾಸದಲ್ಲಿ ದ್ರೌಪದಿಗೆ ಇನ್ನೊಂದು ಕುತ್ತು. ವಿರಾಟನಗರದಲ್ಲಿ ದುರ್ಬಲ ವಿರಾಟನ ಶಾಲಕ ಸರ್ವಾಧಿಕಾರಿ ಕೀಚಕನ ಕಾಮಾಂಧ ಕಣ್ಣಿಗೆ ಆಕೆ ತುತ್ತು. ಅವಳ ಕೈಹಿಡಿದ ಮೂರು ಲೋಕದ ಗಂಡ ಅರ್ಜುನ ಕೈಕಟ್ಟಿಕೊಂಡು ಕೂತ. ಆಗ ಸೈರಂಧ್ರಿ ದ್ರೌಪದಿ ವಲಲ ಭೀಮನನ್ನು ಮೊರೆ ಹೊಕ್ಕಳು.

ದ್ರೌಪದಿ : (ಭೀಮನ ಎದೆಯಲ್ಲಿ ಮೊಗವಿಟ್ಟು ಬಿಕ್ಕಿಬಿಕ್ಕಿ ಅಳುತ್ತ) ನಾಥಾ ಭೀಮಾ! ಆಪತ್ಕಾಲದಲ್ಲಿ ನೀನೆ ನನ್ನ ಪತಿ. ನಿನ್ನ ಎದೆಯು ವಜ್ರ ಪಂಜರದ ಪಾರಿವಾಳ ನಾನು ! ನನ್ನ ಮರ್ಯಾದೆ ಕಾಪಾಡು ! (ಬಿಕ್ಕಿ) ಇಲ್ಲವಾದರೆ ನನ್ನ ಬಾಳು ನಾಯಿ ಪಾಡು ! (ಮತ್ತೆ ಅಳು)

ಭೀಮ : ಅಳಬೇಡ, ಕೃಷ್ಣೇ, ನಿನ್ನ ಕಣ್ಣೀರು ನನ್ನ ಎದೆ ಸುಡುತ್ತಿದೆ. ಅಳಬೇಡ. ಇಕೋ ನನ್ನ ಮಾತು, ಅಣ್ಣನಿಟ್ಟ ಗೆರೆಯ ದಾಟಿದೆನು-ದಾಟಿದೆನು ! ಈ ಅರ್ಜುನನೇ ಸೀರೆ ಉಟ್ಟು ನಪುಂಸಕನಂತೆ ಕೂತಾಗ ನಿನಗೆ ನಾನೇ ರಕ್ಷಕ ! ಇಂದು ರಾತ್ರಿ ಕೀಚಕನನ್ನು ಕೊಲ್ಲುತ್ತೇನೆ. ಹೋ ! ನೀನು ಬೆಂಕಿಯ ಮಗಳು, ನಾನು ಗಾಳಿಯ ಮಗ. ಗಾಳಿ ಬೆಂಕಿ ಕೂಡಿದಾಗ ಇದಿರಾಳ ಯಾರು? ಎಲ್ಲರೂ ಸುಟ್ಟು ಸೂರೆ ! ಹಃ ಹಃ

೬

ನಿವೇದಕ : ಜೂಜಿನಲ್ಲಿ ಸೋತ ಶರತ್ತುಗಳಂತೆ ವನವಾಸ ಅಜ್ಞಾತವಾಸಗಳನ್ನು ಮುಗಿಸಿ ಹಸ್ತಿನಾಪುರಕ್ಕೆ ಮರಳಿದಾಗ ಕುರು- ಪಾಂಡವರ ಯುದ್ಧ ತಪ್ಪಿಸಲು ಸಂಧಾನದ ಪ್ರಯತ್ನ ನಡೆಯುತ್ತದೆ. ಶ್ರೀಕೃಷ್ಣ ಸಂಧಾನಕ್ಕೆ ಹೋದಾಗ ಕೃಷ್ಣೆಯನ್ನು ಭೆಟ್ಟಿಯಾಗುತ್ತಾನೆ—

ದ್ರೌಪದಿ : ಕೃಷ್ಣ, ಸಂಧಿಬೇಡ, ಸಂಧಾನ ಸಾಧಿಸುವುದು ಬೇಡ. ಕೌರವರು ಸಂಧಿಗೆ ಯೋಗ್ಯರಲ್ಲ. ಲೋಭಿಗಳೂ, ದುಷ್ಟರೂ ಆದ ಕ್ಷತ್ರಿಯರನ್ನು ಸಂಹರಿಸಲೇ ಬೇಕು. ಯಜ್ಞವೇದಿಯಿಂದ ಹುಟ್ಟಿಬಂದವಳು ನಾನು. ನನ್ನಂತ ಹೆಣ್ಣು ಬೇರ ಯಾರು ಉಂಟು ? ಮಂತ್ರ ಪೂತ ಜಲದಿಂದ ಮೂರ್ಧಾಭಿಷಿಕ್ತ ವಾದ ರಾಜಸೂಯದ ಹೋಮ ಧೂಮದ ಧೂಪ ಹಾಕಿದ ಈ ನನ್ನ ಮುಡಿಗೆ ಆ ನೀಚ ದುಃಶಾಸನ ಕೈ ಹಾಕಿದ, ಕೃಷ್ಣಸರ್ಪದ ಕರಾಳ ಹೆಡೆಗೆ ಕೈಚಾಚಿ ದಂತೆ! ಆತ ಬಿಚ್ಚಿದ ಈ ಕೇಶರಾಶಿಯನ್ನು ನೋಡು. ಕೌರವನೊಂದಿಗೆ ಸಂಧಿಯ ಮಾತು ಆಡುವಾಗ ಈ ತೂರಿದ ತುರುಬನ್ನು ನೆನಪಿಡು ! (ದುಃಖ ಗದ್ಗದ) ಭಾರಿ ಸಭೆಯಲ್ಲಿ ನನ್ನ ವಿಡಂಬನೆಯನ್ನು ಮರೆಯಬೇಡ ! ಅಣ್ಣಾ, ಮರೆಯಬೇಡ !

ಕೃಷ್ಣ : ಕಥಾಸ್ತು ದ್ರೌಪದಿ, ನಿನ್ನ ಹಗೆಗಳ ಹೆಂಡಂದಿರು ಹೀಗೆಯೆ ಹೆಳಲು ಬಿಚ್ಚಿ ಹುಡಿಯಲ್ಲಿ ಹೊರಳಾಡುವುದನ್ನು ನೀನು ನೋಡುವಿ ! ತಂಗೀ, ಹಿಮಾಚಲವೇ ಅಲ್ಲಾಡಲಿ, ಭೂಮಂಡಲವೆ ನೂರು ಹೋಳಾಗಲಿ, ನನ್ನ ಮಾತು ಸುಳ್ಳಾಗಲಾರದು ! ಶೋಕಿಸಬೇಡ. ಸಂಧಾನದ ನಂತರವೇ ಮಹಾ ಸಂಗ್ರಾಮ ! ಚಿಂತಿಸಬೇಡ ತಂಗೀ, ನಿನ್ನ ಈ ನೀಲ ಕೇಶರಾಶಿಯು ಸಿರಿಮುಡಿ ಕಟ್ಟುವ ಕಾಲವಿನ್ನೂ ದೂರವಿಲ್ಲ !

೧೦

ನಿವೇದಕ : ಆ ಕಾಲವೂ ಬಂದು ಹೋಯಿತು. ಭಾರತಯುದ್ಧ ಮುಗಿಯಿತು. ಕ್ಷತ್ರಿಯ ಕುಲ ಸಂಹಾರವಾಯಿತು. ಇದೀಗ ಸ್ವರ್ಗಾರೋಹಣ. ಧರ್ಮ-ಸಾಮ್ರಾಜ್ಯ ಒಂದು ವೈಭವಶಾಲಿ ದುರಂತ. ಮುಂದೆ ಯುದಿಷ್ಠಿರ, ಹಿಂದೆ ಭೀಮಾರ್ಜುನ ನಕುಲ ಸಹದೇವರು ಹಿಮಾಲಯವೇರಿ ಹೊರಟಿದ್ದಾರೆ ! ಹಿಂದೆ ಹಿಂದೆ ದ್ರೌಪದಿ.

ದ್ರೌಪದಿ : ಅಬ್ಬ, ಏನು ಚಳಿ ! ಎಂಥ ಏರಿ ! ಹುಶ್, ಏನು ಆಯಾಸ ಬಳಲಿಕೆ ದಾಹ ! ಇನ್ನೂ ಎಷ್ಟು ದೂರ. ಯುಧಿಷ್ಠಿರದೇವಾ ?

ಯುಧಿಷ್ಠಿರ : (ನಕ್ಕು) ಪ್ರಿಯೇ ಇನ್ನು ನಡೆದಷ್ಟು ದೂರ ! ನಾವು ಹೊರಟದ್ದು ವನವಾಸಕ್ಕೆ ಅಲ್ಲ. ಇದು ಸ್ವರ್ಗಾರೋಹಣ. ಸದೇಹ ಹೊರಟಿದ್ದೇವೆ ಸ್ವರ್ಗಕ್ಕೆ !

ದ್ರೌಪದಿ : (ನರಳುತ್ತ) ಹಾ, ತಾಳಲಾರೆ ! ದಾಹ, ಉರಿ, ಉರಿ ! ನೀರು ! ನಾಥಾ ! ನನಗೆ ನೀರು ಕೊಡುವರು ಯಾರೊ ! ಅಬ್ಬಾ, ನನಗೆ ಸತ್ತ ಮೇಲೆಯೇ ಸ್ವರ್ಗ ! ಪತಿದೇವಾ ನಾ ಸೋ-ತೆ ನಾ ಸ-ತ್ತೆ, ಹೋಗಿಬರುತ್ತೇನೆ ನಮಸ್ಕಾರ !

ಭೀಮ-ಅರ್ಜುನ : ನಿಧಾನಿಸು, ಸೈರಿಸು. ನಕುಲ ಸಹದೇವರೆ ಹೋಗಿ ನೋಡಿ ನೀರು ತನ್ನಿ. ಎಲ್ಲ ಮುಗಿಯಿತು ! ಅಣ್ಣಾ ಇದೇಕೆ ಹೀಗೆ : ಹೀಗಾಗ ಬೇಕೇ ? [ಮಾತುಗಳನ್ನು ಹಂಚಿಕೊಂಡು ಆಡುತ್ತಾರೆ. ದ್ರೌಪದಿಯ ಮಾತುಗಳ, ನಡು ನಡುವೆ]

ಯುಧಿಷ್ಠಿರ : ಭೀಮಾ, ಅರ್ಜುನಾ, ಹೀಗಾಗದೆ ಇನ್ನೇನು ? ಈಕೆ ದ್ವಾಪರ ಯುಗದ ಅಧಿದೇವತೆ. ಇಲ್ಲಿಗೆ ಯುಗ ಸಮಾಪ್ತಿ ! ದ್ರೌಪದೀ, ನಿನ್ನಿಂದಲೇ ಭಾರತ ಯುದ್ಧ. ನಿನ್ನಿಂದಲೇ ಕ್ಷತ್ರಿಯ ಕುಲ ಸಂಹಾರ ! ಅಗ್ನಿಕನ್ಯೆಯ ಅವತಾರ ಹಿಮಾಲಯದಲ್ಲಿ ಅವಸಾನ ! ಬೆಂಕಿಯ ಜೀವಂತ ಜ್ವಾಲೆ ಈ ಹಿಮದ ತಂಪಿನ ನೆಲೆಯಲ್ಲಿಯೇ ಆರಬೇಕೇ ! ಕಾಲಾಯ ತಸ್ಮೈ ನಮಃ

[ಈ ಸನ್ನಿವೇಶದುದ್ದಕ್ಕೂ ಅರಣ್ಯ ಮಾರ್ಗದ ಸದ್ದುಗಳು, ಹಕ್ಕಿಗಳ ಚಿಲಿಪಿಲಿ, ನೀರಿನ ಬಾಳಿಂದಳು, ಗಾಳಿಯ ಉದ್ದುದ್ದ ಸಿಳ್ಳು]

ಕಿಸಾ ಗೌತಮಿ

(ಬಾನುಲಿ ರೂಪಕ)

-: ಪಾತ್ರ ಪರಿಚಯ :-

ಬುದ್ಧದೇವ
ಆನಂದ
ವೈದ್ಯ ಪಂಡಿತ
ಕಿಸಾಗೌತಮಿ
ಅತ್ತೆ
ಕಲ್ಯಾಣಿ
ಪದ್ಮಕ್ಷ
ಉಮಾ
ವಾಸಂತಿ
ಇತರರು
ನಿವೇದಕ
ಜನಸ್ತೋಮ
ಗಂಡು, ಹೆಣ್ಣು ದನಿಗಳು.

ಸದ್ದುಗಳು : ತೂರ್ಯ, ನಾಗಸ್ವರ, ನಗಾರಿ.
ಬಾವಿಯ ರಾಟೆ ನೀರೆಳೆಯುವ ಸದ್ದು ಇತ್ಯಾದಿ

೧

ನಿವೇದಕ : ಶ್ರಾವಸ್ತಿಗೆ ಬುದ್ಧದೇವನ ಆಗಮನ. ಬುದ್ಧ ಭಗವಾನನ ಸ್ವಾಗತಕ್ಕಾಗಿ ಶ್ರಾವಸ್ತೀ ನಗರವೆಲ್ಲ ಉತ್ಸವದ ಸಂಭ್ರಮದಲ್ಲಿ ವಿಜೃಂಭಿಸಿದೆ. ಮಂಗಲ ವಾದ್ಯಗಳು ಮೊಳಗುತ್ತಿವೆ. ಜನರ ಕಲಕಲ ಕೋಲಾಹಲ ! ಆದರೂ ದಿನ ನಿತ್ಯದ ದುಡಿತ ದುಮ್ಮಾನ ನಡೆಯಲೇ ಬೇಕು. ಊರ ನಾರಿಯರು ನೀರಿಗೆ ಹೋಗಲೇಬೇಕು. ಕುಟುಂಬದ ಕಷ್ಟ ಕೋಟಲೆ ತೋಡಿಕೊಳ್ಳಲೇಬೇಕು. ನೆರೆಮನೆಯು ದುಃಖಕ್ಕೆ ಮರುಗಲೇಬೇಕು.

[ನಿವೇದಕನ ಮಾತಿನ ಹಿನ್ನೆಲೆಯಲ್ಲಿ ತೂರ್ಯ, ನಾಗಸ್ವರ, ನಗಾರಿಗಳ ಸದ್ದು ನಡೆದೇ ಇದೆ. ಕ್ರಮೇಣ ಅವೆಲ್ಲ ಮಂದ, ನಗಾರಿಯೊಂದೇ ಮುಂದೆ ಉದ್ದಕ್ಕೂ ಎದೆ ಬಡಿತದಂತೆ ಮಿಡಿಯುತ್ತಲೇ ಇರುತ್ತದೆ. ಬಾವಿಯ ಬಳಿ ನೀರೆಳೆವ ಸದ್ದು]

ಪದ್ಮಾ : ಕೇಳಿದೆಯೇನೇ ಕಲ್ಯಾಣಿ ?

ಕಲ್ಯಾಣಿ : ಕೇಳ್ತಾ ಇದ್ದೀನಲ್ಲ-ಊರತುಂಬ ಸಂಭ್ರಮ ವಾದ್ಯಗಳ ಕೋಲಾಹಲ? ಬುದ್ಧದೇವರು ಬರ್ತಾರಂತೆ ! ಅಲ್ವೇನೇ ಪದ್ಮಾ ?

ಪದ್ಮಾ : ಹೌದೇ. ಆದರೆ ಅದಲ್ಲ ನಾ ಕೇಳಿದ್ದು. ನಾ ಹೇಳೋದು ಕೇಳಿದಿಯಾ ಅಂದೆ !

ಕಲ್ಯಾಣಿ : ನೀ ಏನೂ ಹೇಳೇ ಇಲ್ಲವಲ್ಲ. ಕೇಳೋದೇನಿದೆ ?

ಪದ್ಮಾ : ಸಾಕು ಬಿಡು ನಿನ್ನ ಶಾಣೇತನ. ನಾ ಹೇಳೋ ಮುಂಚೆಯೇ ನೀನೇನು ಕೇಳ್ತಿ ?

ಕಲ್ಯಾಣಿ : ಮತ್ತೆ ಕೇಳಿದೆಯೇನೇ ಎಂದು ಕೇಳ್ದಿಯಲ್ಲ !

ಪದ್ಮಾ : ಸಾಕು ಬಿಡು, ಮುಂದೆ ಕೇಳು. ಊರಿಗೆ ಊರೇ ಹಬ್ಬದಲ್ಲಿ ಹಿಗ್ಗಿ ನಲೀತದೆ. ಆದರೆ....

ಕಲ್ಯಾಣಿ : ಆದರೇನು ?

ಪದ್ಮಾ : ಆದರೆ ನಮ್ಮ ಕೇರಿಯ ಗೌತಮಿ ಇದ್ದಾಳಲ್ಲ ....

ಕಲ್ಯಾಣಿ : ನಮ್ಮ ಕೇರೀಲಿ ಮೂರು ನಾಲ್ಕು ಗೌತಮಿಗಳು ಇದ್ದಾರೆ!

ಪದ್ಮಾ : ಅವ ಲ್ಲೇ, ಆ ಕೃಶಾ ಗೌತಮಿ....

ಕಲ್ಯಾಣಿ : ಓ, ಆ ಕಿಸಾ ಗೌತಮಿಯೇ ?

ಪದ್ಮಾ : ಕಿಸಾ ಅಲ್ಲ, ಕೃಶಾ

ಕಲ್ಯಾಣಿ : ಅಂದ್ರೆ ?

ಪದ್ಮಾ : ಆ ಗೌತಮೀನ ನೀನೋಡಿಲ್ಲ? ಹೇಗೆ ಬಡಕಲು ಕಡ್ಡಿ ಹಾಂಗ ಇದ್ದಾಳೆ! ಯಾವಾಗಲೂ ಹಾಗೇನೇ ಸೊರಗಿ ಸುಕ್ಕಾಗಿದ್ದಾಳೆ. ಆದ್ದರಿಂದ ಅವಳಿಗೆ ಎಲ್ಲರೂ ಕೃಶಾ ಅಂತ ಕರೀತಾರೆ. ಮಂದೀ ಬಾಯಲ್ಲಿ ಕೃಶಾ ಕಿಸಾ ಆಯ್ತು.

ಕಲ್ಯಾಣಿ : ಆಗಲಿ ಬಿಡು, ನಾವೂ ಮಂದೀನೇ. (ಇಬ್ಬರೂ ನಗುವರು) ಹೂಂ ಆ ಗೋತಮಿ ಸುದ್ದಿ ಏನು ?

ಪದ್ಮಾ : ಅಕೋ, ಅವಳೆ ಬರ್ತಿದ್ದಾಳೆ ಇತ್ತ

ಕಲ್ಯಾಣಿ : ಪಾಪ. ನೋಡು. ಹೇಗೆ ಬಡಬಿದ್ದಿದ್ದಾಳೆ. ಅದಕ್ಕೇ ಏನೋ ಅವ ಳತ್ತೆ ಗಂಡ ಎಲ್ಲ ಅವಳನ್ನ ಹೀನಾ ಮಾನಾ ಕಾಡ್ತ ಇದ್ದಾರೆ

ಪದ್ಮಾ : ಹೂಂ, ಅವಳಿಂದ ಕೆಲಸಾನೇ ಸಾಗೊ ದಿಲ್ಲ; ನೀನೋಡೀಯಲ್ಲ ನೀರು ಎಳೆಯೋದು, ಹಿಟ್ಟು ಬೀಸೋದು ಹೇಗೆ ಸುಸ್ತಾಗಿ ಬಿಡ್ತಾಳೆ; ಆ ಗಂಡಂತೂ ಊರು ಬಿಟ್ಟೇ ಹೋಗಿಬಿಟ್ಟ !

ಕಲ್ಯಾಣಿ : ಅವೆಂಥ ಮೂಳ ! ಮದುವೆ ಆಗುವಾಗೇ ಗೊತ್ತಿದ್ದಿಲ್ವೇ, ಗೌತಮಿ ಬಡಕಲು ಹೆಣ್ಣೆಂತಃ ! ಅಲ್ವೇ, ಆತ ಬಿಟ್ಟು ದೇಶಾಂತರಕ್ಕೆ ಹೋಗುವಾಗ ಈಕೆ ಬಸುರಿ

ಪದ್ಮಾ : ಹೂಂ, ಕಳೆದ ಶ್ರಾವಣದಲ್ಲಿ ಒಂದು ಗಂಡುಕೂಸು ಹೆತ್ತಾಳೆ. ಅಂದಿ ನಿಂದ ಅತ್ತೆ ಗೌತಮೀನ ಚೆನ್ನಾಗಿ ನೋಡಿಕೊಳ್ತೀ ಇದ್ದಾಳೆ. ಇವಳ ತೂಕ ತುಸು ಹೆಚ್ಚಾಗಿದೆ.

ಕಲ್ಯಾಣಿ : ನೋಡು ಬರ್ತಿದ್ದಾಳೆ. ಅವಳ ತೂಕ ಕಾಣ್ತೇ ಇದೆ! ಕಡ್ಡಿ ಆಗಿದ್ದಾಳೆ ಕಿಸಾ ! ಪದ್ಮಾ, ಹೇಗೆ ಮುಖ ಬಿಳಿಚಿದೆ, ಇವಳಿಗೇನೋ ದುಃಖ !

ಪದ್ಮಾ : ಕಣ್ಣು ಊದಿ ಕೆಂಪಾಗಿದ್ದಾವೆ ಇಕೋ ಗೌತಮೀ, ನಿಂಗೆ ನೂರುವರ್ಷ ಆಯುಷ್ಯ ! ನಿಂದೇ ಮಾತು ಆಡ್ತಿದ್ವಿ.

ಗೌತಮಿ : ಪದ್ಮಕ್ಕಾ, ಕಲ್ಯಾಣಮ್ಮ, ಆ ಆಯುಷ್ಯ ನಂಗೆ ಬೇಡ. ನನ್ನ (ಅಳುವ ದನಿ) ಕಂದನಿಗೆ ಕೊಡಿ, ದೇವರಿಗೆ ಬೇಡಿಕೊಳ್ಳಿ.

ಉಮಾ : (ಬಂದು) ಯಾಕೆ ? ಏನಾಯ್ತು ಕಿಸಾ; ನಿನ್ನ ಮಾತು ಕೇಳಿ ಅಂಗಳಕ್ಕೆ ಬಂದೆ. ಏನಾತು ? ಅಳಬೇಡ, ಹೂಂ.

ಕಿಸಾ : ಏನು ಹೇಳಲಿ ? ಉಮವ್ಮಾ ನನ್ನ ಸುಖ ದೇವರಿಗೆ ನೋಡೋಕೆ ಆಗಲಿಲ್ಲ, ನನ್ನ ಕಂದಮ್ಮನಿಗೆ ಸಕ್ತ ಕಾಯಿಲೆ. ಮೈ ನಿಗಿನಿಗಿ ಕೆಂಡ. ಎಚ್ಚರವೇ ಇಲ್ಲ (ಬಿಕ್ಕು)

ಕಲ್ಯಾಣಿ : ಅಳಬೇಡ.

ಪದ್ಮಾ : ಗುಣ ಆದೀತು.

ಉಮಾ : ಹೆದರಬೇಡ, ಮದ್ದು ಗಿದ್ದು ಮಾಡಿಲ್ಲವೆ ?

ಗೌತಮಿ : ಮದ್ದಿಗಾಗಿಯೇ ವೈದ್ಯರ ಮನೆಗೆ ಹೋಗಿದ್ದೆ.

ಮೂವರೂ : ಏನಂದ್ರು ?

ಗೌತಮಿ : ಅವರೇ ಬರ್ತಿದ್ದಾರೆ. ಮದ್ದು ಕೊಟ್ರು ಅಮ್ಮ, ನಾ ಮುಂದೆ ಹೋಗ್ತೆ ಉಮಕ್ಕ, ಪದ್ಮಕ್ಕ, ನನ್ನ ಮಗೂನ (ಬಿಕ್ಕು) ಉಳಿಸಿಕೊಳ್ಳಲಿಕ್ಕೆ ಆ ಕಾತ್ಯಾಯಿನಿದೇವಿಗೆ ಹರಕೆ ಹೇಳಿಕೊಳ್ಳಿ ! ಮತ್ತೆ ಸಿಗ್ತೇನೆ. (ಹಿನ್ನೆಲೆಯಲ್ಲಿ ಗುಡಿಯ ಗಂಟೆ)

೨

[ಮಗುವಿನ ಚೀತ್ಕಾರ. ದೂರದ ಹಿನ್ನೆಲೆಯಲ್ಲಿ ನಾಗಸ್ವರದ ತಾರಸ್ವರಾಲಾಪ]

ಅತ್ತೆ : (ಮುದಿದನಿ) ವೈದ್ಯರೇ, ಮಗು ಏನು? ಕಿಸಾ ಅಳಬೇಡ ಮಗೂ. ವೈದ್ಯ ಪಂಡಿತರು ಕಂದನ ಕಾಪಾಡುತ್ತಾರೆ.

ವೈದ್ಯ : ಗೌತಮೀ, ಮಗೂನ ತೊಡೆಯಿಂದ ಕೆಳಗೆ ಇಡು. ಹೂಂ ಧೈರ್ಯ ತಾಳು. (ನಿಟ್ಟುಸಿರು) [ಮಗುವಿನ ದನಿ ಕ್ಷೀಣವಾಗುತ್ತಿದೆ.]

ಗೌತಮಿ : ಅತ್ತೆ, ಮಗು ಏಕೆ ಹೀಗೆ? ಉಸಿರುಗಟ್ಟಿದಂತೆ (ಅಳು ದನಿ) ಮಾಡ್ತಿದೆ. ಅಯ್ಯೋ ವೈದ್ಯರೆ....

ವೈದ್ಯ : ಗೌತಮಿ, ಹೀಗೆ ಗಾಬರಿ ಆದರೆ ಹೇಗೆ ? ಮಗುವಿನಿಂದ ದೂರ ಸರಿ. ಇನ್ನು ಅದನ್ನು ಅವಚಿಕೊಂಡು ಏನು ಪ್ರಯೋಜನ ?

ಅತ್ತೆ, ಸೊಸೆ : ಅಂದರೆ, ಅಯ್ಯೋSS ! ನನ್ನ ಕಂದಾ, ಹೇಗಾದರೂ ಉಳಿಸಿ

ಬದುಕಿಸಿ, ದೇವರೇ, ನನ್ನ ಪ್ರಾಣತಕೋ!.... ವೈದ್ಯರೇ....

ವೈದ್ಯ : ಸೈರಿಸು ತಾಯೀ, ಸೈರಿಸು. ವೈದ್ಯ ನೋವು ಕಡಿಮೆ ಮಾಡ್ತಾನೆ. ಸಾವ ದೂರ ಮಾಡೋದಿಲ್ಲ. ಸಾವಿಗೆ ಮದ್ದಿಲ್ಲ, ಅಮ್ಮಾ ಸಾವಿಗೆ ಮದ್ದಿಲ್ಲ. ಎಲ್ಲ ಭಗವಂತನ ಲೀಲೆ ! ಭಗವಂತನ ಇಚ್ಛೆ. (ದೊಡ್ಡ ಅಳುವಿನ ದನಿ. ದೂರದಲ್ಲಿ ವಾದ್ಯಗಳ ಮೊರೆತ.)

೩

ನಿವೇದಕ : ಶ್ರಾವಸ್ತಿ ನಗರಕ್ಕೆ ಬುದ್ಧದೇವನ ಆಗಮನ. ನಗರದ ಹೊರಗಿನ ಆಮ್ರವನದಲ್ಲಿ ಶಿಷ್ಯರೊಂದಿಗೆ ಬುದ್ಧದೇವನ ವಾಸ್ತವ್ಯ. ಶ್ರಾವಕರೂ ಶ್ರವಣರೂ ನಾಗರಿಕರೂ ದರ್ಶನಕ್ಕಾಗಿ ಬಂದಿದ್ದಾರೆ. ಭಗವಾನ್ ಬುದ್ಧನ ಪ್ರವಚನಕ್ಕೆ

ಜನಸ್ತೋಮ : ಓಂ ನಮೋ ಬುದ್ಧಾಯ, ಓಂ ನಮೋ ನಿತ್ಯಶುದ್ಧಾಯ ಓಂ ನಮೋ ಮಹಾತಪಃಸಿದ್ಧಾಯ, ಓಂ ನಮೋ ಶಾಕ್ಯಮುನಯೇ ಓಂ ನಮೋ ತಥಾಗತಾಯ, ಬುದ್ಧಂ ಶರಣಂ ಗಚ್ಛಾಮಿ, ಬುದ್ಧಂ ಶರಣಂ ಗಚ್ಛಾಮಿ.

ಬುದ್ಧ : (ಸ್ನಿಗ್ಧ) ಕಲ್ಯಾಣಮಸ್ತು. ಓಂ ಮಣಿ ಪದ್ಮೆ ಓಂ ! (ಗಂಭೀರ ಶಂಖ ಧ್ವನಿ) ಆನಂದ ? ಇದೇನು, ಈ ಜನಸ್ತೋಮ. ಮಹಾಸಂಭ್ರಮ ? ನನಗೇಕೆ ಈ ಸ್ವಾಗತ ?

ಆನಂದ : ಭಗವಾನ್, ತಮ್ಮ ಶುಭಾಗಮನದಿಂದ ಸಮಸ್ತ ಶ್ರಾವಸ್ತಿಗೆ ಹರ್ಷ ವಾಗಿದೆ, ಚಂದ್ರೋದಯಕ್ಕೆ ಕಡಲು ಉಕ್ಕಿ ಮೊರೆಯುವಂತೆ !

ಬುದ್ಧ : ಆನಂದ ನೀನು ಕವಿಯೂ ಆದೆಯಾ ? (ನಗು) ಕಡಲು ಅಮಾವಾಸ್ಯೆಗೂ ಇನ್ನೂ ಹೆಚ್ಚು ಉಕ್ಕುತ್ತದೆ ! ಶುಭವೇನು, ಅಶುಭವೇನು, ತಥಾಗತನ ಆಗಮನ-ನಿರ್ಗಮನ ಒಂದೇ ರೀತಿ ನಿಯತ ಕರ್ಮ-ಸಹಜಧರ್ಮ ಇದಕ್ಕೇಕೆ ಈ ಅಟ್ಟಹಾಸ !

ಆನಂದ : ಗುರುವೇ, ಈ ಜನಕ್ಕೆ ಶರಣಾರ್ಥಿಗಳಿಗೆ ಬೋಧ ವಚನದಿಂದ ಆಶೀರ್ವ ದಿಸಬೇಕು.

ಜನಸ್ತೋಮ : ಹೇ ಗುರೋ ! ಆಶೀರ್ವದಿಸಬೇಕು.

ಬುದ್ಧ : (ನಕ್ಕು) ನಾ ಯಾರು ನಿಮ್ಮನ್ನು ಆಶೀರ್ವದಿಸಲಿಕ್ಕೆ? ನೀವು ಊರ ಹಿರಿಯರು. ನನಗಿಂತಲೂ ಹಲವರು ಹಿರಿಯರು. ಅಲ್ಲದೆ ತಿಳಿದವರಿಗೆ ಉಪದೇಶ ಬೇಕಿಲ್ಲ. ತಿಳಿಗೇಡಿಗಳಿಗೆ ಉಪದೇಶ ಉಪಯೋಗವಿಲ್ಲ. (ಎಲ್ಲರ ನಗು) ಮಹಾಜನರೇ, ಇದೀಗ ನಗರಕ್ಕೆಲ್ಲ ಸಂಭ್ರಮ ಸಂತೋಷದ ಕೋಲಾಹಲ. ಆದರೆ.... ಇದರ ನಡುವೆಯೂ ದುಃಖವಿದೆ. ದಾಹವಿದೆ.

ಇಲ್ಲಿ ಮೊಳಗಿದೆ ಮಧುರ ವೀಣಾಲಾಪ!
ಅಲ್ಲಿ ಹಾಹಾಕಾರದ ಕರುಣಾ ವಿಲಾಪ!
ಇತ್ತ ಮುದ್ದಿನ ಚೆಲುವೆ (ಹೆಂಗೆಳೆಯರ ಕುಲುಕುಲು)
ಅತ್ತ ಮುಪ್ಪಿನ ದೇಹ
ಇಲ್ಲಿ ವಿದ್ವದ್ಗೋಷ್ಠಿ ಅಲ್ಲಿ ಕುಡುಕರ ಕಲಹ
ಆರು ಬಲ್ಲರು ಇದು ಸಂಸಾರವೋ
ಅಮೃತವೋ ವಿಷವೋ ದುಃಸಾರವೋ!

(ಜನ ಪಿಸುಗುಡುವರು : "ಹೌದಪ್ಪ" "ಎಂಥ ಮಾತು!" "ನೀನೇ ದೇವರಪ್ಪ"! "ದುಃಖ ಬಿಡಿಸು! ಅಮೃತ ಉಣಿಸು")

[ಅಳುತ್ತ ಗೌತಮಿ ಬರುತ್ತಾಳೆ–ಕೂಸಿನ ಕಳೇಬರ ಹೊತ್ತು. ಜನರ ಗದ್ದಲ ಹೆಚ್ಚುತ್ತದೆ]

ಗಂಡುದನಿ ೧ : ಯಾರದು, ಯಾರಲ್ಲಿ ಛೀ ಛೀ!

ಗಂಡುದನಿ ೨ : ದೂರ ದೂರ ಸರಿ.

ಗಂಡುದನಿ ೩ : ಎಳೆಯಿರಿ ಅವಳನ್ನು ಹಿಂದೆ, ಹುಚ್ಚಿ!

ಹೆಣ್ಣುದನಿ ೧ : ಅಯ್ಯೋ ಭಗವಂತನ ಪಾದಕ್ಕೆ ಬೀಳ್ತಾಳೆ!

ಹೆಣ್ಣುದನಿ ೨ : ಅಯ್ಯಯ್ಯಾ ಕೂಸಿನ ಹೆಣ ಹೊತ್ತು ತಂದಿದ್ದಾಳೆ!

ಸಮ್ಮಿಶ್ರ : ಏ, ಏ, ಹುಚ್ಚಿ, ಏ ಕಿಸಾ ಗೌತಮಿ ನಡೆ ಹಿಂದೆ.

ಬುದ್ಧ : ಸುಮ್ಮನಿರಿ, ಶಾಂತಿ! ಆನಂದ, ಈ ದುಃಖಿನಿ ಯಾರು? ವಿಚಾರಿಸು. ಬಾಂಧವರೇ, ನೀವು ಹಿಂದಾಗಿರಿ.

ಆನಂದ : ಯಾರಮ್ಮ ನೀನು? ಇದೇನು ತಂದಿ? ಇಲ್ಲೇಕೆ ಬಂದಿ?

ಗೌತಮಿ : ನಾನು ಕಿಸಗೋತಮಿ ಬಡ ಹೆಂಗಸು ದೇವಾ.. ದೇವಾ ಈ ಕಂದನನ್ನು ಉಳಿಸಿಕೊಡಿ, ನಾ ಅನಾಥೆ. ಈ ಕಂದನಿಲ್ಲದೆ ನಾ ಬದುಕಲಾರೆ, ಬದುಕಲಾರೆ. (ಅಳುವಳು)

ಆನಂದ : ಮಗುವಿಗೆ ವೈದ್ಯರ ಚಿಕಿತ್ಸೆ....

ಗೌತಮಿ : ಎಲ್ಲಾ ಆಯಿತು. ಅವರೇ ಅಂದರು–ಭಗವಂತನೆ ಬದುಕಿಸಬೇಕೆಂದು ಅದಕ್ಕೆ ಇಲ್ಲಿಗೆ ಬಂದೆ. ನಾಳೆ ಗಂಡ ದೇಶಾಂತರದಿಂದ ಬಂದರೆ ಏನು ಹೇಳಲಿ ? ಮಗು ಎಲ್ಲಿ ? ಅಂದಾಗ ಮೋರೆ ಹೇಗೆ ತೋರಿಸಲಿ ? ಮನೆದೀಪ ಆರಿತು ಅಯ್ಯೋSS. ಏನು ಮಾಡಲಿ ? ಹೇಗೆ ಬಾಳಲಿ ? ಬುದ್ಧದೇವಾ, ದೇವಾ (ಬಿಕ್ಕಿ ಬಿಕ್ಕಿ ಅಳುವಳು)

ಆನಂದ : ಇದೇನು ಆಕ್ರೋಶ ತಾಯೀ ? ನಮ್ಮ ಗುರುಗಳು ಧನ್ವಂತರಿಗಳೇ ? ಸತ್ತ ಕೂಸನ್ನು ಬದುಕಿಸಲು ಸಾಧ್ಯವೇ ?

ಗೌತಮಿ : ಆನಂದರೇ ಬೇಡಿ, ಹಾಗನ್ನಬೇಡಿ. ಬುದ್ಧದೇವಾ ಭಗವಂತ. ಮರಣಕ್ಕೆ ಮದ್ದು ಭಗವಂತನೇ ನೀಡಬಲ್ಲ–ವೈದ್ಯರು ಸುಳ್ಳಾಡುವರೆ ? ದೇವಾ, ಬುದ್ಧದೇವಾ....

ಬುದ್ಧ : ಅಮ್ಮ, ಗೌತಮಿ, ಸ್ಥೈರಿಸು. ಈ ಹತಭಾಗಿನಿಯನ್ನು ಹೇಗೆ ಸಾಂತ್ವನಗೊಳಿಸಲಿ ? ಅಮ್ಮ ಅಳು ನುಂಗು.

ಗೌತಮಿ : ದೇವಾ, ನನ್ನನ್ನೇ ಅಳು ನುಂಗಿದೆ. ದೇವಾ, ಇನ್ನು ನೀನೇ ನನ್ನ ಆಧಾರ, ನಿನ್ನಿಂದಲೇ ಉದ್ಧಾರ ! ಈ ಕಂದನನ್ನು ನೀನೇ ಎಬ್ಬಿಸಬೇಕು. ಇಲ್ಲವಾದರೆ ಇಕೋ ನಾನೇ ನಿನ್ನ ಪಾದದಲ್ಲಿ ದೇಹವಿಡುವೆನು. (ಹಣೆ ಜಪ್ಪಿಕೊಳ್ಳಹತ್ತುವಳು. ಜನರಲ್ಲಿ ಕೋಲಾಹಲ, ಕಲ ಕಲ)

ಬುದ್ಧ : ಶಾಂತಿ ! ಅಮ್ಮ ತಡೆ. ಸಭಿಕರೇ, ಇವಳನ್ನು ಇಲ್ಲಿ ಬಿಟ್ಟುಹೊರಟು ಹೋಗಿರಿ.

ಆನಂದ : ಹೌದು ಮಹಾಜನರೇ, ದಯಮಾಡಿ ಹೋಗಿ ಹೋಗಿ, (ಜನರೆಲ್ಲ ಎದ್ದು ಹೋಗ್ತುವರು).

ಬುದ್ಧ : ಗೌತಮೀ, ತಾಳು, ಏಳು. ನಿನ್ನ ಕಂದ ಏಳಬೇಕು.

ಗೌತಮಿ : (ಹಿಗ್ಗಿ) ಹೌದು ಭಗವಂತನೇ, ಬಾಳಿನ ಗುಟ್ಟು ಬಲ್ಲ ನೀನು ಸಾವಿಗೆ ಮದ್ದು ಬಲ್ಲೆ, ನನಗೆ ಗೊತ್ತು. ದಯಮಾಡು ದೇವಾ....

ಬುದ್ಧ : ಗೌತಮಿ, ನಿನ್ನ ಕಂದ ಬದುಕುವನು. ಅಹುದು–ತಥಾಗತನು ಅದನ್ನು ಬದುಕಿಸಬಹುದು.

ಕಿಸಾ : ನಾ, ಧನ್ಯೆ ನನಗೆ ಗೊತ್ತು ಅದಕ್ಕೇ....

ಬುದ್ಧ : ಆದರೆ ...

ಗೌತಮಿ : ಆದರೇನು ಹೇಳಿ ?

ಬುದ್ಧ : ಅದಕ್ಕೆ ಒಂದು ಕೆಲಸ ಆಗಬೇಕು.

ಗೌತಮಿ : ಹೇಳಿ, ಅದಾವ ಕೆಲಸ ?

ಬುದ್ಧ : ಅದಕ್ಕೆ ಒಂದು ವಸ್ತು ಬೇಕು.

ಗೌತಮಿ : ಅದಾವ ವಸ್ತು ? ಎಂಥ ಬೆಲೆ ತೆತ್ತೂ ನನ್ನನ್ನು ಮಾರಿ ನನ್ನ ಜೀವವನ್ನು ಕೊಟ್ಟುಕೊಂಡು ತರುತ್ತೇನೆ ಅಪ್ಪ ಅನ್ನಿ, ಅದಾವ ವಸ್ತು ?

ಬುದ್ಧ : (ನಕ್ಕು) ಅಂಥ ದೊಡ್ಡ ವಸ್ತುವೇನೂ ಅಲ್ಲ. ಒಂದು ಹಿಡಿ ಸಾಸಿವೆಬೇಕು.

ಗೌತಮಿ : ಅಯ್ಯೋ ಸ್ವಾಮಿ ಇಷ್ಟೆ ತಾನೇ, ಮನೆಯಲ್ಲಿನೆ ಓಡಿ ಹೋಗಿ ತರ್ತೀನೆ.

ಬುದ್ಧ : ನಿಲ್ಲು ಓಡಬೇಡ. ನಿಮ್ಮ ಮನೆಯ ಸಾಸಿವೆ ಆಗದು. ನಿಮ್ಮಲ್ಲಿ ಸಾವು ಒದಗಿದೆ

ಗೌತಮಿ : ದೇವಾ, ಮತ್ತೆಲ್ಲಿಂದ ತರಲಿ ಹೇಳಿ, ತಡವಾದಷ್ಟು ನನ್ನ ಮಗು ಮರವಟ್ಟು (ಬಿಕ್ಕುವಳು).

ಬುದ್ಧ ಅಳಬಾರದು. ಊಂಹೂ. ನನಗೆ ಸಾವಿಲ್ಲದ ಮನೆಯ ಸಾಸಿವೆ ಬೇಕು. ಎಷ್ಟು ತಡವಾದರೂ ಸರಿ. ನೋಡಿ ಬೇಡಿ ತಾ. ಸಾವಿಲ್ಲದ ಮನೆಯ ಸಾಸಿವೆ !

ಗೌತಮಿ : ಅದೇನು ಮಹಾ ? ಕೇರಿ ಕೇರಿ ಸುತ್ತಿ ಮನೆಯನೆ ಹುಡುಕಿ ತರುತ್ತೇನೆ (ಓಡುವಳು)

೪

[ಕೇರಿಯಲ್ಲಿ]

ಪದ್ಮಾ : ಕೇಳಿದೆಯೇನೆ ಕಲ್ಯಾಣಿ ?

ಕಲ್ಯಾಣಿ : ಕೇಳದೇ ಏನು ಪದ್ಮಾ, ಪಾಪ, ಬಡಗೌತಮಿ ತಲೆಕೆಟ್ಟು ಕೂಸಿನ ಕಳೇಬರ ಹೊತ್ತು ಬುದ್ಧನ ದೇವನ ಪಾದಕ್ಕೆ ಇಟ್ಟಳಂತೆ

ಪದ್ಮಾ : ಅಷ್ಟೇ ಅಲ್ಲ, ಅದನ್ನ ಬದುಕಿಸಿಕೊಡು ಎಂತ ಹಲುಬಿದಳಂತೆ- ಅದೋ ತಿರುಗಿ ಬರ್‍ತಾ ಇದ್ದಾಳೆ.

ಕಲ್ಯಾಣಿ : ಆದರೆ ಅವಳ ಕೈಯಲ್ಲಿ ಕೂಸಿಲ್ಲ.

ಪದ್ಮಾ : ಅದನ್ನು ಮಣ್ಣು ಮರೆಮಾಡಿ ಬಂದಿರಬಹುದು. ಬುದ್ಧದೇವನ ಮಾತು ಕೇಳಿ,

ಗೌತಮಿ : ಪದ್ಮಕ್ಕ ನಿಲ್ಲು ತುಸು ನಿಲ್ಲು. ಒಳಗೆ ಹೋಗ ಬೇಡ.

ಪದ್ಮಾ : ಏಕೆ ಕಿಸಾ, ಏನು ಬೇಕು?

ಗೌತಮಿ : ಇಷ್ಟು ಸಾಸುವೆ ಬೇಕು.

ಪದ್ಮಾ : ಸಾಸಿವೆಯೇ ? ನಿಲ್ಲು ತರ್‍ತೀನೆ ಒಳಗೆ ಹೋಗಿ. ಅಲ್ಲೆ, ಸಾಸುವೆ ಏಕೆ ಬೇಕು ?

ಗೌತಮಿ : ಸಾಸುವೆ ತಂದು ಕೊಟ್ಟರೆ ಬುದ್ಧದೇವಾ ನನ್ನ ಕೂಸನ್ನು ಬದುಕಿಸಿ ಕೊಡ್ತಾರಂತೆ.

ಪದ್ಮಾ : ಹೌದೇ ? ತಾಳು ತರ್‍ತೀನೆ.

ಗೌತಮಿ : ಅಲ್ಲ, ಪದ್ಮಕ್ಕ, ತುಸು ತಡೆ, ನಿಮ್ಮ ಮನೆಯಲ್ಲಿ ಯಾರೂ ಸತ್ತಿರ ಕೂಡದು !

ಪದ್ಮಾ : ಏ ಹುಚ್ಚಿ, ಇದೇನು ಹಲುಬುತ್ತೀಯೆ ? ಹಾಗೆ ಇರೂದಾವರೂ ಉಂಟೇನೇ ? ಕಳೆದ ವರ್ಷ ನನ್ನ ಅತ್ತೆ ಮಾವ ಇಬ್ಬರೂ ತೀರಿಕೊಂಡ್ರು.

ಗೌತಮಿ : ಹಾಗಾದರೆ ಬೇಡ ಅಕ್ಕಾ, ಕಲ್ಯಾಣಕ್ಕ ಇದ್ದಾಳೆ ಅವಳಿಗೆ ಕೇಳ್ತೀನೆ. ಕಲ್ಯಾಣಮ್ಮ–

ಕಲ್ಯಾಣಿ : ಏನೇ ಕಿಸಾ ?

ಗೌತಮಿ : ನೀನಾದರೂ ಕೊಡ್ತಿಯೇನೆ ಒಂದು ಹಿಡಿ ಸಾಸಿವೆ. ಆದರೆ ನಿಮ್ಮ ಮನೆಯಲ್ಲಿ ಸಾವು ....

ಕಲ್ಯಾಣಿ : ಹೋಗೆ, ಹೋಗೆ, ಇದೇನು ಚೇಷ್ಟೇ ಮಾಡ್ತೀಯೇ ? (ಅಳು) ಮೂರು ತಿಂಗಳ ಹಿಂದೆ ನನ್ನ ತಮ್ಮ– ಅಯ್ಯೋ ಇದೇನು ಕೇಳ್ತೀಯೇ ಪಾಪಿ ?

ಗೌತಮಿ : ಹೌದು ಕಲ್ಯಾಣಮ್ಮ, ನಾ ಪಾಪಿಷ್ಠೆ, ನಿನಗೆ ಅಳಲು ಹಚ್ಚಿದೆ. ಕ್ಷಮಿಸು ಹೋಗಲಿ ಬಿಡಿ. ಅದೋ ವಾಸಂತಿ– ಮನೆ ಬಾಗಿಲಿಗೆ ಬಂದಿದ್ದಾಳೆ. ವಾಸಂತಿ.... ವಾಸಂತಮ್ಮ ಸಾವಿಲ್ಲದ ಮನೆಯ ಸಾಸಿವೆ ನಂಗೆ ಬೇಕು ಕೊಡ್ತೀರಾ ?

ವಾಸಂತಿ : ನಿಂಗೇನು ತಲೆ ಕೆಟ್ಟಿದೆಯಾ ? ಅಥವಾ ಮಗೂ ಸತ್ತ ನೀನು ನಂಗೂ ಗೋಳಾಡಿಸ್ತಿಯೋ ? ನೋಡು, ನನ್ನ ಹಣೆ ನೋಡು. ಕಳೆದ ಮಳೆಗಾಲದಲ್ಲಿ ನಮ್ಮ ಯಜಮಾನ್ರು, ...ಅಯ್ಯೋ ಏನು ಗೋಳುಹೊಯ್ತೀಯೋ (ದೊಡ್ಡ ದನಿ ತೆಗೆದು ಅಳು)

ಗೌತಮಿ : ಅಯ್ಯೋ ವಾಸಂತಮ್ಮ, ತಪ್ಪಾಯ್ತು, ಕ್ಷಮಿಸಿ. ನನ್ನ ಕಷ್ಟದಲ್ಲಿ ನಿಮ್ಮ ದುಃಖ ಮರೆತೇ ಬಿಟ್ಟೆ ! ನನ್ನ ತಲೆ ಕೆಟ್ಟಿದ್ದೇ ನಿಜ.

ಉಮಾ : (ಪ್ರವೇಶಿಸಿ) ಏನು ಕೃಶಾ ಏನು ಗದ್ದಲ? ವಾಸಂತಿ ಏಕೆ ಅಳ್ತಾ ಇದ್ದಾಳೆ?

ಗೌತಮಿ : ಉಮಮ್ಮಾ, ನನಗೆ ಸಾಸಿವೆ ಬೇಕು–ಸಾವಿಲ್ಲದ ಮನೆಯ ಸಾಸಿವೆ. ವಾಸಂತಮ್ಮನಿಗೆ ಕೇಳಿದ್ದೇ ತಪ್ಪಾಯ್ತು. ನೀಕೊಡ್ತಿಯಾ? (ದೈನ್ಯದಿಂದ) ನನ್ನ ಮಗೂನ ಉಳಿಸಲಿಕ್ಕೆ ಬೇಕು ಬುದ್ಧದೇವನಿಗೆ!

ಉಮಾ : ನಿನ್ನಂತೆ ಬುದ್ಧದೇವನ ತಲೆಯೂ ಕೆಡ್ತೇ? ಅಲ್ವೇ, ಸಾಸಿವೆ ಕೊಡಲಿಕ್ಕೇನು? ಆದರೆ ಸಾವಿಲ್ಲದ ಮನೆ ಈ ಊರಲ್ಲಿ ಉಂಟೇ? ಎಲ್ಲಾದರೂ ಉಂಟೇ? ಕಳೆದ ಶ್ರಾವಣಕ್ಕೆ (ಅಳುವದನಿ) ನನ್ನ ಹಿರೇಮಗನ್ನ ಕಳಕೊಂಡೆ ಇದೇನು ಹಂಬಲ ಮಾಡಿಕೊಟ್ಟೆತೇ ?ಹೊಯ್ಮಾಲೀऽऽ (ದೊಡ್ಡ ದನಿ ತೆಗೆದು ಅಳುವಳು ಆ ದನಿ ತೇಲಿ ದೂರ ಹೋದಂತೆ)

ಗೌತಮಿ : (ಕಳವಳ) ಏನು ಮಾಡಲಿ? ಎಲ್ಲಿ ಹೋಗಲಿ? ಅಯ್ಯೋऽऽ, ಯಾರನ್ನ ಕೇಳಲಿ? ನಿಮ್ಮಲ್ಲಿದಿಯೇ ಸಾವಿಲ್ಲದ ಮನೆಯ ಸಾಸಿವೆ. ದೇವಕಮ್ಮಾ? ನಿಮ್ಮಲ್ಲಿದೆಯೇ? ಸಾವಿಲ್ಲದ ಮನೆಯ ಸಾಸಿವೆ ಜಯಮ್ಮಾ? ನಿಮ್ಮಲ್ಲಿದಿಯೇ ....

[ಎಲ್ಲಾ ಕಡೆಗಳಿಂದಲೂ ಅಣಕಿಸುವ ದನಿಗಳು : ಏ ಹುಚ್ಚಿ! ಎಲ್ಲಿ ಸಾವಿಲ್ಲ? ಸಾವಿಲ್ಲದ ಮನೆಯಂತೆ! ಎಲ್ಲಿ ಸಾವಿಲ್ಲ? ಈ ಕಿಸಾ ತಲೆ ಕೆಟ್ಟಿದೆ! ನಿನ್ನ ಬುದ್ಧಿ ಮಂಕಾಗಿದೆ. ಹುಚ್ಚೀऽऽ ಹುಚ್ಚೀऽऽ !!! ಈ ದನಿಗಳು ಕರ್ಕಶವಾಗಿ ಕಿವಿಡುಗಟ್ಟುತ್ತವೆ.]

ಗೌತಮಿ : ಅಯ್ಯೋ ಸಾಕು, ಇನ್ನು ಕೇಳೆ....ತಾಳೆ....ದೇವಾ, ಬುದ್ಧದೇವಾ (ಕೂಗುತ್ತ ಓಡುವಳು)

೫

ಬುದ್ಧ : ಆನಂದ!

ಆನಂದ : ಗುರುದೇವಾ!

ಬುದ್ಧ : ಕಿಸಾಗೌತಮಿ ಇನ್ನೂ ಬಂದಿಲ್ಲ!

ಆನಂದ : ಶ್ರಾವಸ್ತಿ ದೊಡ್ಡ ನಗರ. ಮನೆ ಮನೆಗೆ ಸುತ್ತುತ್ತಿರಬೇಕು.

ಬುದ್ಧ : ಪಾಪ ! ಸಾಸಿವೆ ಸಿಕ್ಕಿಲ್ಲವೇನೋ !
ಆನಂದ : ಅಲ್ಲ ದೇವಾ, ಸಾವಿಲ್ಲದ ಮನೆ ಸಿಕ್ಕಿರಲಿಕ್ಕಿಲ್ಲ ಇಕೊ ಸ್ವಾಮಿ ಬಂದೇ ಬಿಟ್ಟಳು.
ಗೌತಮಿ : (ಪ್ರವೇಶಿಸಿ) ದೇವಾ,ದೇವಾ....ಊರೆಲ್ಲ ಸುತ್ತಿ ಬಂದೆ,
ಬುದ್ಧ : ಸಾಸಿವೆ ತಂದೆಯಾ ?
ಗೌತಮಿ : ಇಲ್ಲ ಭಗವನ್.
ಬುದ್ಧ : ಅದೇಕೆ ?
ಗೌತಮಿ : ಏಕೆಂದು ಏಕೆ ಕೇಳುವಿರಿ ? ನನ್ನ ಪರೀಕ್ಷೆ ಮಾಡುವಿರಾ ? ಪ್ರಭೋ, ಸಾಸಿವೆ ಇದ್ದಲ್ಲಿ ಸಾವೂ ಇದೆ. ಸಾವಿಲ್ಲದ ಮನೆಯೇ ಸಿಗಲಿಲ್ಲ !
ಬುದ್ಧ : ಅಂದರೇನು ಕಿಸಾ ?
ಗೌತಮಿ : ಇನ್ನೇನು ? ಎಲ್ಲಿ ಹೋದರೂ ಅಲ್ಲಿ ಯಾರಾದರೂ ಸತ್ತಿದ್ದೇ ವ್ಯಥೆ. ಸಾವಿನದೇ ಕಥೆ. ಇಲ್ಲಿ ತಂದೆ ಸತ್ತರೆ ಅಲ್ಲಿ ತಾಯಿ. ಇಲ್ಲಿ ಗಂಡ ಸತ್ತರೆ ಅಲ್ಲಿ ಮಗ.
ಬುದ್ಧ : ಅಂದರೆ ಮಗನನ್ನು ಕಳೆದುಕೊಂಡವಳು ನೀನೊಬ್ಬಳೇ ಅಲ್ಲ........
ಗೌತಮಿ : ಅಲ್ಲ ದೇವಾ ಅಲ್ಲ. ಒಂದು ಮನೆ ಇದಿರು ಹೋದೆ. ಒಳಗಿಂದ ಸತ್ತ ಕೂಸಿನ ಕಳೇಬರ ಹೊತ್ತು ಹೊರಗೆ ತಂದರು. ಆ ಕೂಸು .... ಆ ಕೂಸು ನನ್ನ ಕಂದನಂತೆಯೇ ಇತ್ತು, (ನಿಟ್ಟುಸಿರು)
ಬುದ್ಧ : ಹಾಗಾದರೆ........
ಗೌತಮಿ : ಹಾಗಾಗಿದ್ದೇ ಸರಿ ಗುರುವರ್ಯ. ಸಾವು ಅನಿವಾರ್ಯ. ಅಪರಿಹಾರ್ಯ. ಸಾವಿಗೆ ಮದ್ದಿಲ್ಲ. ಸಾಸಿವೆ ಹುಡುಕಿತರಲು ಕಳುಹಿಸಿ, ಭಗವನ್, ಈ ಮಹಾ ಸತ್ಯದ ಶೋಧಮಾಡಲು ಹಚ್ಚಿದಿರಿ.
ಆನಂದ : ಬುದ್ಧದೇವಾ, ಕಿಸಾಗೌತಮಿಗೆ ಜ್ಞಾನೋದಯವಾಯಿತು.
ಬುದ್ಧ : ಅಹುದು ಕಿಸಾ ನೀನು ಧನ್ಯೆ. ಸಾವಿಲ್ಲದೆ ಬಾಳಿಗೆ ಅರ್ಥವಿಲ್ಲ. ನಿನ್ನ ಮಗು ಮಾತ್ರವಲ್ಲ, ಕಿಸಾ, ನೀನೂ ನಾವೂ ಎಲ್ಲರೂ ಬಾಳಿನುದ್ದಕ್ಕೂ ಸಾವಕಾಶ ಸಾಯುತ್ತಲೇ ಇರುತ್ತೇವೆ. ಸಾವಿನೊಡನೆ ಸರಸ ಬಲ್ಲವನೇ ಈ ಬಾಳಿಗೆ ಅರಸ. ಹುಟ್ಟಿನ ಬೆನ್ನಿಗೆ ಸಾವು, ಜೀವದ ಬೆನ್ನಿಗೆ ನೋವು, ಇದೇ ಈ ಲೋಕದ ಕರ್ಮಭೋಗ. ಧರ್ಮ ಚಕ್ರ. ಇದರಿಂದ ಪಾರಾಗುವ ಹಾದಿ ಹಿಡಿ.
ಗೌತಮಿ : ಅದಕ್ಕೆ ಬೆಳಕು ತೋರಿಸು.

ಓ ತಂದೆ ನಾ ಬಂದೆ ನಿನ್ನ ಹಿಂದೆ
ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

[ಆನಂದ ಉಚ್ಚರಿಸಿದಂತೆ ಗೌತಮಿ ಹೇಳುವಳು.]

ಬುದ್ಧ : ಓಂ ಮಣಿಪದ್ಮೇ ಓಂ.

ಸಂಕ್ರಾಂತಿ

(ಬಾನುಲಿ ರೂಪಕ)

—: ಪಾತ್ರ ಪರಿಚಯ :—

ಭಟ್ಟರ ಧ್ವನಿ : ಕರ್ಣಕಠೋರ, ಸರಳ.

ಎರಡನೇ ಧ್ವನಿ : ಗೊಗ್ಗರು, ಸ್ಥೂಲ ಕಂಠದ್ದು.

ಒಂದನೇ ಧ್ವನಿ : ಚತುರ ಚಾಟು ಪ್ರಾಯ.

ಮೂರನೇ ಧ್ವನಿ : ಅಂಜುಬುರುಕ, ಅಳುಬುರುಕ, ದುರ್ಬಲ.

ನಿರ್ದೇಶಕ

ನಿರ್ದೇಶಕ : ಗ್ರಾಮ ದೇವರ ಗುಡಿಯ ಪೌಳಿಯಲ್ಲಿ ಮುದುಕ ಮಾರ್ತಾಂಡ ಭಟ್ಟರ ಪಂಚಾಂಗವಾಚನ ನಡೆದಿದೆ. ಅಂದು ಸಂಕ್ರಾಂತಿಯ ದಿನ. ಮಕರ ಸಂಕ್ರಮಣ ಫಲವನ್ನ ಭಟ್ಟರು ಹೇಳುತ್ತಿದ್ದಾರೆ.

[ಕಿಷರಬಿಟ್ಟ ಶೀರು ಧ್ವನಿಯಲ್ಲಿ ಭಟ್ಟರ ಪಂಚಾಂಗ ಶ್ರವಣ ಸಾಗುತ್ತದೆ. ಹಿನ್ನೆಲೆಯಲ್ಲಿ ದೇವ ದರ್ಶನಕ್ಕೆ ಬಂದು ಹೋಗುವ ಭಜಕ ವೃಂದದ ವಿವಿಧ ಸದ್ದುಗಳು ನಡದೇ ಇರುತ್ತವೆ. ಚಿಕ್ಕ ದೊಡ್ಡ ಗಂಟೆಗಳ ಸದ್ದುಗಳು “ಜೈ ಶಂಕರ” “ಹರ ಹರ ಮಹಾದೇವ” ಇತ್ಯಾದಿ ಘೋಷಗಳು. ಶಿವನ ಎದುರಿನ ನಂದಿಯ ಕೋಡುಗಳಿಗೆ ಬೆರಳಿಂಸಿ ಮಾಡಿದ ಡಮರು ಧ್ವನಿ (ಬಾಯಿಯಿಂದ) ಇವೆಲ್ಲ ಒಮ್ಮೆ ಸ್ಪಷ್ಟ, ಒಮ್ಮೆ ಅಸ್ಪಷ್ಟ.]

ಭಟ್ಟರ ಧ್ವನಿ : (ನಸ್ಯ ಸೇದಿ ಸೀತು ಮೂಗು ಒರೆಸಿಕೊಳ್ಳುವ ಸದ್ದು. ಈ ಸದ್ದಿಗೆ ಸಮಶ್ರುತಿಯಲ್ಲಿ ಪಿಟೀಲಿನ ಕಮಾನು ತಂತಿಯ ಮೇಲೆ ಎಳೆಯ ಬೇಕು.)
“ಅದ್ಯ ಶಾಲಿವಾಹನ ಶಕೆ ಸರ್ವಧಾರಿ ಸಂವತ್ಸರೇ ಪೌಷ್ಯ ಮಾಸೇ ಶುಕ್ಲಪಕ್ಷೆ ತ್ರಯೋದಶ್ಯಾಮ ತಿಥೌ ಗುರುವಾಸರೇ ರವೇ ಮಕರರಾಶಾ ಸಂಕ್ರಮಣಃ”
[ಮುಂದಿನ ಮಾತುಕತೆಗಳು ಮತ್ತು ನಡು ನಡುವೇ ಬರುವ ಭಟ್ಟರ ಧ್ವನಿ ಅನುಕ್ರಮವಾಗಿ ಹತ್ತಿರ ಮತ್ತು ದೂರ ತೇಲುತ್ತಹೋಗಬೇಕು.]

ಒಂದನೆಯ ಧ್ವನಿ : (ರಹಸ್ಯವಾಗಿ) ಅದೋ ನೋಡಿರಿ, ಸಕ್ಕರಿ ಸಾಟಿ ಎಳ್ಳಪ್ಪ ಸವರೇ, ಭಟ್ಟರು ಬಾಯಿ ತೆಗೆದದ್ದೇ ತಡ, ಬಂದೇಬಿಟ್ಟಿತು ಸಂಕ್ರಾಂತಿ.... ಗುಡಿಯಲ್ಲಿ ಕಾಲಿಟ್ಟಿತು.

ಎರಡನೇ ಧ್ವನಿ : ಅದೆಲ್ಲಿ ಮತ್ತೆ ? ಅದೇ ಆ ಶಿವನಮುಂದಿನ ಹೋರಿಯ ಹಂತೀಲೆ ನಿಂತವಳೇನು ?

ಮೂರನೆಯ ಧ್ವನಿ : ಹೌದು, ಇತ್ತ ನಮ್ಮಕಡೀಗೆ ನೋಡುತ್ತಾಳೆ.... ಹೋರಿಯ ಹಾಂಗ ಕಣ್ಬಿಟ್ಟು ! ಆಕೆಯೇ ಏನು ?

ಒಂದನೇ ಧ್ವನಿ : ಹೌದು ಮಕ್ರಪ್ಪನವರೇ ! ಮಕರ ರಾಶೌ ಸಂಕ್ರಮಣ ಎನ್ನಲಿಲ್ಲವೆ ಭಟ್ಟರು? (ನಗುತ್ತ) ಅದೇ ಅದೇ, ಆ ಸಂಕ್ರಾಂತಿ ಭಟ್ಟರ ಮಗಳು ಹೇಗೆ ಬೆಳೆದು ನಿಂತಾಳೆ ನೋಡಿ, ಇನ್ನೂ ದಾಟಿಸಿಲ್ಲ.

ಎರಡನೇ ಧ್ವನಿ : ಆಕೆಯ ಹೆಸರೇನು?

ಭಟ್ಟರ ಧ್ವನಿ : "ವಾರ ನಾಮ ನಂದಾ। ನಕ್ಷತ್ರ ನಾಮ ರಾಕ್ಷಸೀ ಜಾತಿಃ ಮೃಗ"

ಮೂರನೇ ಧ್ವನಿ : ಸರಿ ಹೋಯ್ತು ಬಿಡಿ. ಭಟ್ಟರ ಪಂಚಾಂಗದಲ್ಲಿ ಮಗಳ ಮಹಾತ್ಮ್ಯನೇ ಬರೆದ್ಹಂಗೆ ಕಾಣ್ಸತ್ತದೆ. ಅಂದರೆ ಈಕೆಯ ಹೆಸರು ನಂದಾ. ಯಾವ ಕೆಟ್ಟ ನಕ್ಷತ್ರಕ್ಕೆ ಹುಟ್ಟಿದಳೋ, ರಾಕ್ಷಸಿಯಂತೆ ಕೊಬ್ಬಿ ಬೆಳೆದಾಳೆ. ನನ್ನ ಮಾತು ಹದಿನಾರು ಆಣೆ ನಿಜ ನೋಡು ವೆಂಕಪ್ಪ !

ಒಂದನೇ ಧ್ವನಿ : ಅಲ್ಲದೇ ಮತ್ತೆ, ಭಟ್ಟರ ನಕ್ಷತ್ರಕ್ಕೆ ಇದೊಂದು ರಾಕ್ಷಸಿಯೇ ಅಂಟಿ ಕೊಂಡಿದ್ದಾಳೆ. ಪಂಚಾಂಗ ಹೊಗಳುವಂತೆಯೇ ಒಂದು ಜಾತಿ ಮೃಗ ಹುಟ್ಟುಮೃಗದ ಜಾತಿ !

ಎರಡನೇ ಧ್ವನಿ : ಹಂಗನ್ನ ಬೇಡ ವೆಂಕಪ್ಪ, ಅವರವರ ಸ್ಥಿತಿಗತಿ ಅವರವರ ದುಃಖ ಅವರಿಗೆ.

ಮೂರನೇ ಧ್ವನಿ : ಹೌದು, ಎಳ್ಳಪ್ಪನವರೇ, ನನಗೂ ಆಕೆಯ ಬಗ್ಗೆ ಏಕೋ ಕೊಂಚ ಕನಿಕರ ಹುಟ್ಟುತ್ತದೆ.

ಭಟ್ಟರ ಧ್ವನಿ : "ಷಷ್ಠಿ ಯೋಜನ ವಿಸ್ತೀರ್ಣ ಲಂಬೋಷ್ಠೀ ದೀರ್ಘ ನಾಸಿಕಾऽऽऽ

ಒಂದನೇ ಧ್ವನಿ : ಕೇಳಿದಿರಾ ಎಷ್ಟು ಯೋಜನೇ ವಿಸ್ತೀರ್ಣ ! ಎಷ್ಟೋ ಯೋಜನೆ ಮಾಡಿದರೂ ಈಕೆಯ ಪಾಡು ಬಗೆಹರಿಯುವುದೇ ಇಲ್ಲ, ಮದುವೆಯೇ ಆಗುವದಿಲ್ಲ. ಅದೋ ಇತ್ತ ಕಡೆಗನೇ ಬಂದು ಬಿಟ್ಟಳು ; ತಂದೆಯ ಮುಂದೆ ಹರಿವಾಣ ತಂದು ಇಟ್ಟಳು. ಲಂಬೋಷ್ಟಿ ಅಹುದು. ದೀರ್ಘ ನಾಸಿಕಾನೆ ಕಾಣಿಸುತ್ತದೆ.

ಮೂರನೇ ಧ್ವನಿ : ಹೌದು, ನಾಕಾಶ ತೋರಿಸೋ ಸುರುಳಿಯಂತೆ!

(ತನ್ನ ವಿನೋದಕ್ಕೆ ತಾನೇ ನಗುವನು)

ಎರಡನೇ ಧ್ವನಿ : ನೀ ಹುಟ್ಟ ಮೋಸ್ಟ್ರ ನಿಜ. ನೋಡು ಮಕಪ್ಪಾ. ಯಾವ ಲೋಕಕ್ಕೆ ಹೋದರೂ ನಕಾಶ ತೋರಿಸುವವನೇ.... ನಿನ್ನ ನಾಲಿಗೆ ಆ ಬಡ ನಂದಾಳ ಮೂಗಿಗಿಂತಲೂ ಉದ್ದ ಅದೆ! ಅವಳ ರೂಪ ಅವಳ ತಪ್ಪೇ?

ಭಟ್ಟರ ಧ್ವನಿ : ಏಕ ವಕ್ತ್ರಾ ವನ ಭುಜ ಸಂಕ್ರಾಂತಿಃ ಪುರುಷಾಕೃತಿಃ

ಒಂದನೇ ಧ್ವನಿ : ನೋಡಿ ಪಂಚಾಂಗ ಮೊಳಗುವ ಮುಂದಿನ ಮಾತನ್ನು ಕೇಳಿ

ಬರಿದೇ ವಕೀಲಿ ಮಾಡಬೇಡಿ ಎಳ್ಳಪ್ಪನವರೇ! ಎಷ್ಟೊಂದು ಆ ಹಿಡಿಂಬಿಯ ಪಕ್ಷ ಹಿಡಿದು ವಾದಿಸ್ತೀರಿ. ಯಾವ ಕಪ್ಪು ಎಳ್ಳಿಗೂ ಬಿಳಿ ಸಕ್ಕರೆ ಸವರಿ ಸವಿ ಮಾಡಿ ಕಾಣಿಸುವ ಈ ವಕೀಲಿಯ ಕಸುಬು ಎಂದು ಕಲ್ತಿರಿ?

ಮೂರನೇ ಧ್ವನಿ : ಆದಿರ್ಲಿ, ಇಂದು ಎಳ್ಳು ಸಕ್ಕರೆ ಹಂಚುವ ದಿನವೇ. ಪಂಚಾಂಗ ಯಾವ ಮಹಿಮೆ ಸಾರಿತು? ಆಕೆಗೆ ಒಂದೇ ಬಾಯಿಯಂತೆ!

ಒಂದನೇ ಧ್ವನಿ : ಎಲೋ ಶಾಲೋಪಯೋಗಿ ಪ್ರಾಣಿಯೇ! ಅರ್ಥ ತಿಳಿಯಲಿಲ್ಲವೇ? ಆಕೆಯ ಬಾಯಿ ಮೋಟಾರ ಸ್ಟೆಂಡಿನ ಎದುರು ಕೂಗುವ ಇರಾಣೀ ಹೊಟ್ಲಿನ ಫೋನೊ ಹಾರ್ನಿನಂತೆ! ಆಕೆಯ ಬಾಯಿ ಬೇರೆ ಯಾರ ಮಾತನ್ನು ನಡೆಯಗೊಡಸಲಿಕ್ಕಿಲ್ಲ.

ಎರಡನೇ ಧ್ವನಿ : ಅಂಥ ಬಾಯಿಯಿಂದಲೂ ಫಾಯಿದೆ ಇದೆ. ಇಂದಿನ ಯುಗವೇ ಬಾಯಿಯಿದ್ದವರದು, ಬಾಯಿಬಲವೆಂದರೆ ಬಾಯ್ಬಲ್ (Bible) ಇದ್ದಂತೆಯೇ! ಹೌದಲ್ಲರೀ ಶಾಲಾ ಮಾಸ್ತರ ಮಕ್ರಪ್ಪನವರೇ?

ಮೂರನೇ ಧ್ವನಿ : ಒಪ್ಪತಕ್ಕ ಮಾತು! ಶಾಲಾ ಮಾಸ್ತರರ ಬಾಯಿ ಸಂಸಾರ ಸಾಗರದಲ್ಲಿ ಈಸುಗುಂಬಳಗಾಯಿ. ನಾವಂತೂ ಕಂಠಗತ ಪ್ರಾಣರೇ! ಗಂಟಲಿರುವ ತನಕವೂ ನನಗೆ ಗಂಟು!

ಒಂದನೇ ಧ್ವನಿ : ಹಾಗಿದ್ದರೆ ಇವಳಿಗೆ ನಿಮ್ಮದೇ ಗಂಟು ಯೋಗ್ಯ. ಇವಳ ಕಂಠಕ್ಕೆ ಮಿಕ್ಕವರೆಲ್ಲ ಗತಪ್ರಾಣರೇ!

ಎರಡನೇ ಧ್ವನಿ : ಆದರೂ ಇವಳ ಗುಣ ಕೇಳಲಿಲ್ಲವೇ? ಈ ನಂದಾದೇವಿಯ....

ಮೂರನೇ ಧ್ವನಿ : (ಶಿಕ್ಷಕ ನಾಡಿ ಜಾಗೃತವಾದಂತೆ) ಇದು ಹಿಮಾಲಯದಲ್ಲಿಯ ಅತ್ಯುನ್ನತವಾದ ಶಿಖರ. ಸಮುದ್ರ ಸಪಾಟಿಯಿಂದ.... (ಅವನ ಜಾಜ್ವಲ್ಯ ಕಂಠವನ್ನು ಎರಡನೇ ಧ್ವನಿಯವನು ಮೆಚ್ಚುವನು)

ಎರಡನೇ ಧ್ವನಿ : ಆಯ್ತು ನಮ್ಮ ಬದ್ಧಿ ಸಪಾಟಾಯ್ತು! ನಿಮ್ಮ ಕಂಠಪಾಠಕ್ಕೆ ನಾವು ಶಿಖರದಿಂದ ಸಮುದ್ರಕ್ಕೆ ಬಿದ್ದಂತೆಯೇ! ನಂದಾದೇವಿ ಅಂದ್ರೆ ಈ ಭಟ್ಟರ ಹುಡುಗಿ ಉಪವರಳಾಗಿ....

ಭಟ್ಟರ ಧ್ವನಿ : "ಉಪವಾಹನ ಮುಪ್ಪ್ರ! ವಾಹನಂ ಮಹಿಷ!"

ಒಂದನೇ ಧ್ವನಿ : ಕೇಳಿದಿರಾ ಮೇಷ್ಟ್ರೆ! ಉಪವಾಹನ ಅಂದ್ರೆ ತಕ್ಕವಾಹನ ಆಕೆಗೆ ಮೇಷ್ಟ್ರೆ ಸರಿ ಎನಿಸುತ್ತದೆ–ಪಂಚಾಂಗ! ನೀವೆ ಈ ಮಹಿಷೆಗೆ ತಕ್ಕ ವಿವಾಹ ವಾಹನರಾದ ಮಹಿಷ!

ಎರಡನೇ ಧ್ವನಿ : ಅಂದರೆ? ಈ ಮಕ್ರಪ್ಪನವರಿಗೆ ಮದುವೆನೇ ಆಗಿಲ್ಲವೇನು?

ಮೂರನೇ ಧ್ವನಿ : (ದುಃಖದಿಂದ) ಅದೇನು ಹೇಳುವುದು ? ಯಾವುದೋ ಕವಿ ಏನೋ ಹೇಳಿದ್ದಾನಲ್ಲ....ಹಾಗಾಗಿದೆ. ಹೆಂಡತಿಯು ಸತ್ತು ಸಪ್ತಬ್ದಿ ಪೂರ್ತಿಯಾಯಿತು.

ಒಂದನೇ ಧ್ವನಿ : (ದೊಡ್ಡ ಧ್ವನಿಯಲ್ಲಿ ನಕ್ಕು) ಸಪ್ತಬ್ದಿಯೆಂದರೆ ಆರಲ್ಲ, ಅರವತ್ತು ಇಲಿ, ಎಳ್ಳಪ್ಪನವರೇ, ಮೇಷ್ಟ್ರು ಮಾತು ಸಹಜ. ಮನೆತುಂಬ ಮಕ್ಕಳು ಮಂಗನ ಮರಿಗಳಂತೆ ! ತುಂಟರು ಒಂಬತ್ತು ಮಂದಿ !

ಎರಡನೇ ಧ್ವನಿ : ಹಾಗಾದರೆ ಪರವಾ ಇಲ್ಲಾ, ಬಿಡಿ. ಭಟ್ಟರ ಪಂಚಾಂಗ ಹೇಳುಲ್ಲವೆ. ವಸಭುಜಾ ಎಂದು ! ಒಂಬತ್ತು ಮಂದಿ ಮಕ್ಕಳಿಗೆ ಆಕೆ ಭುಜಾ ಹಾಕುತ್ತಾಳೆ. ಭುಜಕ್ಕೆ ಒಂದೊಂದು ಮಗುವನ್ನು ಎತ್ತಿ ಆಡಿಸುತ್ತಾಳೆ ಮನೆಗೆಲಸಕ್ಕೆ ಒಂಬತ್ತು ತೋಳುಗಳಿದ್ದಂತೆ.

ಮೂರನೇ ಧ್ವನಿ : ಅಯ್ಯಪ್ಪಾ ತೋಳಗಳು ?

ಒಂದನೇ ಧ್ವನಿ : 'ಳ' ಅಲ್ಲಾ, 'ಳು' ಉಕಾರಾಂತ ನಪುಂಸಕ ಲಿಂಗ ಮೇಷ್ಟ್ರೆ ! ಸಂಕ್ರಾಂತಿ ಹಿ ಪುರುಷಾಕೃತಿ ಎಂದು ಬೇರೆ ಸಾರಿದೆ ಪಂಚಾಂಗ !

ಮೂರನೇ ಧ್ವನಿ : ಅದು ಅನರ್ಥಕವಾಗಿ ಅಲ್ಲಾರೀ ಅನ್ವರ್ಥಕವಾಗಿ. ಕಂಡರೆ ಗೊತ್ತಾಗುತ್ತದೆ ಗಂಡಾಳ್ವಿ ಇರುತ್ತಾಳೆ.

ಎರಡನೇ ಧ್ವನಿ : ನಮ್ಮಂಥ ಹೆಣ್ಣು ರಾಮಣ್ಣ ಗಂಡಿಗೆ ಗಂಡಾಳ್ವಿ ಹೆಂಡತಿಯೇ ಒಪ್ಪುತ್ತಾಳೆ. ನಿಮ್ಮ ಹಳ್ಳಿಯ ಶಾಲೆಗೆ ಇನ್‌ಸ್ಪೆಕ್ಟರ ದೊರೆಗಳು ಬಂದರು....

ಮೂರನೇ ಧ್ವನಿ : (ಹೌಹಾರಿ) ಆs ಬಂದರೆ !.... ಎಂದು ? ಎಲ್ಲಿ ಇದ್ದಾರೆ ? ಗೊಂಡೆ ಟೊಪ್ಪಿಗೆಯವರೋ ?

ಎರಡನೇ ಧ್ವನಿ : ಬಂದರು....ಎಂತಾ ತಿ .... ಳಿ .... ಯಿ .... ರಿ ! ಹೀಗೆ ಹೆದರಿ ಹೌಹಾರಿ ನೀವು ಹಾಸಿಗೆ ಹಿಡಿದಿರೋ . ಈ ಪುರುಷಾಕೃತಿ ಹೆಂಡತಿ ಹೋಗಿ ಶಾಲೆ ಸಾಗಿಸಬಹುದು.

ಒಂದನೇ ಧ್ವನಿ : ನಿಮ್ಮ ಪುರುಷಾರ್ಥ ಸಿದ್ಧಿಗೆ ಇವಳೇ ಯೋಗ್ಯ ! ಬುದ್ಧಿವಂತದಿಟ್ಟಳು !

ಭಟ್ಟರು : "ವಯಸಾ ಪ್ರಗಲ್ಭಾ ! ನೀಲಾ ಭೂಷಣಂ । ಭಕ್ಷಣಂ ದಧಿಃ !"

ಒಂದನೇ ಧ್ವನಿ : ಸರಿ, ಕೇಳಿದಿರಾ ನಿಮ್ಮ ಭಾಗ್ಯ ! ಈಕೆಯು ನೀಲ ಬಣ್ಣ ನಮ್ಮ ಮನೆಗೆ ಭೂಷಣ ! ಪ್ರಗಲ್ಭಳಾಗಿ ಬೆಳೆದಿದ್ದಾಳೆ. ಯಾವಾಗಲೂ ಮುಕ್ಕಲಿಕ್ಕೆ ಮೊಸರೇ ಮೊಸರು !

ಮೂರನೇ ಧ್ವನಿ : ಹೌದು ಕವಿ ಬೆಂಗರೆ ಹಾಡಿದ್ದಾರೆ! "ಹಾಲೇಹಾಲು, ಮೊಸರೇ

ಮೊಸರು ! ಯಾರಿಗೂ ಹೇಳೋಣು ಬ್ಯಾಡSSS" (ಹಾಡಲು ಹೆಣಗುವನು)

ಎರಡನೇ ಧ್ವನಿ : ಸಾಕು ಬಿಡಿ. ಬರಿದೇ ಹಾಡು ತ್ರಾಸೇಕೆ ? ಆಯ್ತಲ್ಲ, ಮತ್ತೆ ಬೇರೆ ವಿಚಾರವೇಕೆ ? ಮೇಷ್ಟ್ರೇ ನಿಮಗಾಗಿಯೇ ಹುಟ್ಟಿ ಬೆಳೆದು ಕಾಯುತ್ತಾ ನಿಂತಿದ್ದಾಳೆ

ಭಟ್ಟರ ಧ್ವನಿ : ಆಗಮೇಚ ಭವೇತ್ ಸೌಖ್ಯಂ ಗಮನೇ ದುಃಖ ದಾಯಕಂ !

ಮೂರನೇ ಧ್ವನಿ : (ಗಾಬರಿಯಾಗಿ) ಗಂಡನ ಮನೆಗೆ ದುಃಖದಾಯಕವಂತೆ ವೆಂಕಪ್ಪನವರೇ !

ಒಂದನೇ ಧ್ವನಿ : ಅಲ್ಲ, ವೆಂಕಪ್ಪನವರೆ, ಆಕೆ ಬಂದದ್ದೇ ನಿಮ್ಮ ಸೌಖ್ಯಕ್ಕೆ, ಹೋಗಲು ಬಿಟ್ಟರೆ ದುಃಖದಾಯಕವೇ ಸರಿ.

ಮೂರನೇ ಧ್ವನಿ : (ಕೃತಜ್ಞತೆಯಿಂದ) ಆಯಿತು ವೆಂಕಪ್ಪನವರೇ, ಎಳ್ಳಪ್ಪನವರೇ, ನಿಮ್ಮ ಮಾತೇ ಆಗಲಿ ನನ್ನ ಮನೆ ತುಂಬಲಿ ! ಯಾರೊ ಏನೋ.........

ಎರಡನೇ ಧ್ವನಿ : ಯಾರೂ ಏನೂ ಹೇಳಿಲ್ಲ ! ಅದೋ ಭಟ್ಟರೇ ಸಂಕ್ರಮಣ ಫಲ ಹೇಳಿ ಮುಗಿಸುತ್ತಿದ್ದಾರೆ. ನೀವಿಲ್ಲೆ ಇರಿ. ನನ್ನ ಹತ್ತಿರ ಒಂದು ಖೊಟ್ಟಿ ಆಣೆ ಇದೆ.

ಭಟ್ಟರ ಧ್ವನಿ : "ಇತೀದಂ ಸಂಕ್ರಮಣ ಫಲಂ. ಶ್ರುತ್ವಾಲೋಕೋ ಸುಖೀ ಭವೇ ತ್" (ಆರತಿಯ ಗಂಟೆಯ ಸದ್ದು ಗದ್ದಲ)

ಮೂರನೇ ಧ್ವನಿ : ನಡೀರಿ ವೆಂಕಪ್ಪನವರೇ, ಭಟ್ಟರನ್ನು ಮಾತಾಡಿಸೋಣ ! ರೂಪ ತಕೊಂಡು ಮಾಡುವುದೇನು ನಾನು ? ತಾನು ಕಾಮನಲ್ಲದವನು ರತಿಯನ್ನು ಬಯಸುವುದು ತಪ್ಪಲ್ಲವೆ ?

ಒಂದನೇ ಧ್ವನಿ : ಹದಿನಾರಾಣೆ ಸತ್ಯ. ಕಂಗೆಟ್ಟ ಮೇಷ್ಟ್ರಿಗೆ ಗಟ್ಟಿಮುಟ್ಟು ಹೆಂಡತಿಯೇ ಯೋಗ್ಯ ! ಇಂದೇ ಮಕರ ಸಂಕ್ರಾಂತಿ ಕೂಡಲಿ.

ನ್ಯೂಟನ್‌ನ ಮೂರನೆಯ ನಿಯಮ

(ಬಾನುಲಿ ರೂಪಕ)

—: ಪಾತ್ರ ಪರಿಚಯ :—

ಹೆಣ್ಣು—

ಲೀಲಾ (ಸ್ತ್ರೀ ಸ್ವಾತಂತ್ರ್ಯವಾದಿನಿ ಪದವೀಧರ ಯುವತಿ)
ಲೈಲಾ (ಲೀಲಾಳ ಆಫೀಸ ಗೆಳತಿ)
ಲಲ್ಲೂ (ಮಗು, ನಾಲ್ಕು ವರ್ಷ)

ಗಂಡು—

ಕಾಮೇಶ್ವರರಾವ್ (ಬಾಸ)
ಜವಾನ
ಬಸ್ ಕಂಡಕ್ಟರ
ಪ್ರಯಾಣಿಕರು
ಸದ್ದುಗಳು–ಬಸ್ಸಿನ ಬೀದಿಯ ಸದ್ದುಗದ್ದಲಗಳು.

೧

ಶ್ರೀಮತಿ : ಇದೇನೇ ಸಿಂಥೆಟಿಕ್ ಫೈಬರ್ಸ ಸಿಂಡಿಕೇಟ ಆಫೀಸು ?

ಲೀಲಾ : ಮ್ಯಾನೇಜಿಂಗ್ ಡೈರೆಕ್ಟರ ಶ್ರೀ ಕಾಮೇಶ್ವರರಾವ್ ಇದಾರೆಯೇ ಒಳಗೆ ? ....ಏನಯ್ಯ ಸುಮ್ಮನಿದ್ದೀ ?

ಜವಾನ : ಅಲ್ಲಿ ಬೋರ್ಡು ತೂಗ್ತಾ ಇದೆ. ಕಾಣೋಲ್ವೇ ? ಬಾಸ ಒಳಗಡೆ ಇದ್ದಾರ ಅದೋ 'IN' ಎಂದಿದೆ.

ಲೀಲಾ : Sorry ಗಮನಿಸ್ಲಿಲ್ಲ. ಒಳಗೆ ಹೋಗಲೇ ?

ಜವಾನ : ತಡೀರಿ. ತಮ್ಮ ಹೆಸರು ಕೆಲಸ ಬರೆದು ಕೊಡಿ.

ಲೀಲಾ : ಸರಿ. ಇಕೋ ನನ್ನ ಕಾರ್ಡು. ಲಗು ಒಳಗೆ ಕೊಡು.

ಜವಾನ : ಇಲ್ಲೇ ನಿಲ್ಲಿ. ಒಳಗೆ ಹೋಗಿ ಬರ್ತೀನೆ. (ಒಳಗಿನ ಬೆಲ್ಲು. ಒಳಗಿಂದ yes, come in ಒಳಗೆ ಹೋಗಿ ಕೂಡಲೇ ಮರಳುತ್ತಾನೆ. ಆ ತನಕ ಹಾಡಿಯ ಟ್ಯಾಕ್ಸಿ, ಕಾರು, ಸ್ಕೂಟರ ಸೈಕಲ್ ಸಾರಿಗೆ ಸದ್ದು)
ಅಮ್ಮ ಒಳಗೆ ನಡೆಯಿರಿ. (ಒಳಗಡೆ ಬೆಲ್ಲು ಬಾರಿಸುತ್ತದೆ)

ಕಾಮೇಶ್ವರರಾವ್ : Yes come in (ಬಾಗಿಲು ತೆರೆದು ಮುಚ್ಚುವ ಸದ್ದು)

ಲೀಲಾ : ನಮಸ್ಕಾರ ಸರ್.

ಕಾಮೇಶ್ವರರಾವ್ : (ಕೃತಕ ವಿನಯ) ನಮಸ್ಕಾರ ಮೇಡಂ. ಬನ್ನಿ. ನೀವು ಮಿಸೆಸ್ ಲೀಲಾರಾವ್ B.A.? ನಿಂತಿರೇಕೆ ಕುಳಿತುಕೊಳ್ಳಿ. ನೀವು ಪದವೀಧರೆ ಜತೆಗೆ ವಿವಾಹಿತೆ ಕೂಡ.

ಲೀಲಾ : ಪದವೀಧರೆ ವಿವಾಹಿತೆ ಆಗುವುದು ತಪ್ಪೇ ? ಅಥವಾ ವಿವಾಹಿತೆ ಪದವೀಧರೆ ಆಗಬಾರದೇ ? (ತುಸು ಗಾಬರಿಯಿಂದ)

ಕಾಮೇಶ್ವ : (ದೊಡ್ಡದಾಗಿ ನಕ್ಕು) ಛೇ, ಛೇ, ಹೇ. ಹೇ. ವಿವಾಹಿತ ಅವಿವಾಹಿತ ಇದು ನಮ್ಮ ಪ್ರಾಯ್ವೇಟ್ ಅಫೇರ್. ನಮಗೆ ನಿಮ್ಮ ತಾರುಣ್ಯ ಮುಖ್ಯ ಅಂದರೆ (ಕೆಮ್ಮಿ)

ಲೀಲಾ : ತಿಳಿಯಿತು ಸರ್. ನಿಮಗಿಂದು ಯುವಶಕ್ತಿ ಬೇಕು.

ಕಾಮೇಶ್ವರ : ಹಾಗೆ ನೋಡಿದ್ರೆ ನಾನು ಮ್ಯಾರಿಡ್ ಲೇಡೀಜನ್ನೆ ಹೆಚ್ಚು ಪ್ರಿಫರ ಮಾಡೋದು ನನ್ನ ಲೆಕ್ಕಕ್ಕೆ ಅವಿವಾಹಿತಳಿರೋದು ಒಂದು ಹ್ಯಾಂಡಿ ಕ್ಯಾಪು ? ಯಾಕೆ ಗೊತ್ತೆ ?

ಲೀಲಾ : ಗೊತ್ತಾಗಲಿಲ್ಲ ಸರ್.

ಕಾಮೇಶ್ವರ : ಅದು ಹೀಗೆ. ಈ ಅನ್‌ಮ್ಯಾರಿಡ ಹೆಣ್ಣುಮಕ್ಕಳು ಕೆಲಸ ಚೆನ್ನಾಗಿಯೇ ಮಾಡ್ತಾರೆ ಕೆಲವರು ಚೆನ್ನಾಗಿ ಕೆಲಸ ಮಾಡ್ತಾರೆ. ಕೆಲವರು ಕೆಲಸ ಮಾಡೋರು ಚೆನ್ನಾಗಿ ಇರ್ತಾರೆ. (ತನ್ನ ಜೋಕಿಗೆ ತಾನೇ ನಕ್ಕು) ಆದರೆ ಮುಂದೆ ಅವರು ಅಫೀಸಿನಲ್ಲಿಯೇ ತಮ್ಮ ಕಲೀಗರನ್ನು ಮದುವೆಯಾಗುತ್ತಾರೆ ಆಮೇಲೆ ಇಬ್ಬರದೂ ಒಂದು ಕ್ಲಿಕ್ ಆಗಿ ಬಿಡುತ್ತದೆ. ಬೇರೆ ಬ್ರಾಂಚಿಗೆ ಟ್ರಾನ್ಸ್‌ಫರ ಮಾಡುವಾಗ ತೊಂದರೆ ಕೊಡ್ತಾರೆ. ಇಂಥ ಸ್ಟಾಫ್ ದಾಂಪತ್ಯ ನಮಗೊಂದು ಹೆಡೇಕ

ಲೀಲಾ : (ಆಶೆಯಿಂದ) ಹಾಗಾದ್ರೆ ಸರ್ ತಮ್ಮಲ್ಲಿ ವಿವಾಹಿತ ತರುಣಿಗೇ ಪ್ರಿಫರೆನ್ಸ್ ತಾನೇ !

ಕಾಮೇಶ್ವರ : ಆಫಕೋರ್ಸ್, ಮಿಸೆಸ್‌ರಾವ್. ನೀವು ವಿವಾಹಿತರಿದ್ದರೂ ತುಂಬ young ಇದ್ದೀರಿ. ಸ್ಮಾರ್ಟ ಇದ್ದೀರಿ ನಿಮ್ಮ ಇತರ ಕ್ವಾಲಿಫಿಕೇಶನ್ನು ಚೆನ್ನಾಗಿದೆ. ಮಿಸ್–ಆಐ ಎಮ್ ಸೊರಿ-ಮಿಸೆಸರಾವ್.

ಲೀಲಾ : (ಹರ್ಷ, ಕೃತಜ್ಞತೆ) ಮಿಸ್ ಎಂತಲೇ ಭಾವಿಸಿ, ಪರವಾ ಇಲ್ಲ. ಮಿಸ್ ಲೀಲಾ ಎಂತಾನೇ ಕರೀರಿ

ಕಾಮೇಶ್ವರ : ಅಯ್ಯೋ ಹಾಗೇಕಂತೀರಾ ?

ಲೀಲಾ : (ನಿಟ್ಟುಸಿರು) ಇದು ಒಂದು ಹೊಸ ಅಧ್ಯಾಯ ನಮ್ಮ ಬಾಳಿನಲ್ಲಿ. ನನ್ನ ದಾಂಪತ್ಯ ಮುಗಿದಂತೆ. (ತುಂಬ ಖಿನ್ನಳಾಗಿ)

ಕಾಮೇಶ್ವರ : ಹೀಗೇನು ಹೇಳ್ತೀರಿ. ಏನು ವಿರಸ ಬಂತು ?

ಲೀಲಾ : ನಾ ಮದುವೆ ಆದದ್ದನ್ನೇ ಮರೆಯಬೇಕೆಂದು ಮಾಡಿದ್ದೇನೆ. ಹಿನ್ನೆಲೆಯಲ್ಲಿ ಪಿಟೀಲಿನ ಕರುಣಸ್ವರ ಆರಂಭ)

ಕಾಮೇಶ್ವರ : ಪಾಸ ಪಸ ! ಯಾಕೆ ? ಹೇಳಿ ಸಂಕೋಚಬೇಡ. (ಅವಳು ಬಿಕ್ಕುವಳು) ಹೇಳು ಲೀಲಾ, ಇನ್ನು ನಾನೇ ನಿನ್ನ ಬಾಸ–ಯಜಮಾನ. (ಅವಳ ಮೈದಡವುತ್ತ) ಅದೆಷ್ಟು ಹೆದರ್ತೀಯಾ ? ಬೆನ್ನೆಲ್ಲ ಬೆವೆತು ಹೋಗಿದೆ. ಹಣೆ ತುಂಬಾ ಬೆವರು. ತಾಳು ಒರೆಸ್ತೀನಿ. ಹಾಂ, ಈಗ ಹೇಳು. (ಬೆಲ್)

ಏ ಬಾಯ್ ಎರಡು ಕಾಫಿ, ಬಿಸ್ಕೀಟು ತಾ. (ಟೇಬಲ್ಲಾದನ ಮುಂದರಿಯು ತ್ತದೆ.)

ಲೀಲಾ : ಏನು ಹೇಳಲಿ ? ಅದೊಂದು ದೊಡ್ಡ ರಾದ್ಧಾಂತ. (ಒರಟು ದನಿ ಬಿರು ಸಾಗುತ್ತಾ ಹಿನ್ನಲೆ ಸಂಗೀತ ಉತ್ಕಟ) ನಾನೇನು ಹಳೆಗಾಲದ ಗರತಿ ಅಲ್ಲ. ಹೊಸಕಾಲದ ಕಲಿತ ಹೆಣ್ಣು ಪದವೀಧರೆ. ಆತ್ಮಾಭಿಮಾನಿ. ಗಂಡನ ಕೈಗೊಂಬೆ ಆಗಲಾರೆ ನನ್ನ ಅಸ್ತಿತ್ವ ಕರ್ತೃತ್ವ ನನ್ನದೇ. ನಾನು ಸ್ವತಂತ್ರ ವಾಗಿ ಬಾಳಬೇಕೆಂದು ಬಂದೆ

ಕಾಮೇಶ್ವರ : ಸರಿ, ಸರಿ. ಆದರೆ, ಹೀಗೆ ಮನೆ ಬಿಟ್ಟುಬರಲು ಏನುಕಾರಣ ?

ಲೀಲಾ : ಅದು ಹೀಗಾಯ್ತು ಸರ್. (Flash back)

೨

ಲೀಲಾ : (ಅದೇ ಬಿರುಸುದನಿಯಲ್ಲಿ ಗಂಡನೊಂದಿಗೆ ಜಗಳಾಡುತ್ತಿದ್ದಾಳೆ. ನಡು ನಡುವೆ ಅವರ ಪುಟ್ಟ ನಾಲ್ಕು ವರ್ಷ ಪ್ರಾಯದ ಮಗು 'ಅಮ್ಮಾ' 'ಅಮ್ಮಾ' ಎಂದು ಮರುಗುತ್ತ ಹಿನ್ನೆಲೆಯಲ್ಲಿ ಅಳುತ್ತದೆ. ಅದಕ್ಕೆ ಸಕ್ತ ಕಾಯಿಲೆ) ನಾನು ಹಳೆಯಕಾಲದ ಮುತ್ತೈದೆ ಗರತಿ ಅಲ್ಲ. ೨೦ನೆಯ ಶತಮಾನದ ಪದವೀಧರೆ. ಆಧುನಿಕ ಹೆಣ್ಣು. ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಡುವವಳು. ಪುರು ಷಾರ್ಥ ಮಾಡಿತೋರಿಸುವವಳು

ಗಂಡ : (ನಕ್ಕು) ಅಲ್ಲೇ, ಹೆಣ್ಣಿಗೆಲ್ಲಿಂದ ಬಂತು ಪುರುಷಾರ್ಥ ?

ಲೀಲಾ : ಹಾಗೆಲ್ಲ ಲೇವಡಿ ಮಾಡಬೇಡಿ ಅದಕ್ಕೆ ನಾನು ಮಣಿಯೋಳಲ್ಲ. ನಿಮ್ಮ ಹಟಕ್ಕೆ ನಾ ಬಗ್ಗೋದಿಲ್ಲ (ಒಳಗೆ ಮಗುವಿನ ಅಳು)

ಗಂಡ : ನನ್ನ ಹಟಕ್ಕೆ ಅಲ್ವೆ, ಅಕೋ ಅಲ್ಲಿ ಮಗು ಕೂಗಿಕೊಳ್ತಾ ಇದೆ. 'ಅಮ್ಮಾ' 'ಅಮ್ಮಾ' ಎಂದು. ಅದಕ್ಕೆ ಸಕ್ತ ಜ್ವರ. ನೀ ಹೀಗೆ ಹಗಲೆಲ್ಲ ಹೋಗೆ ಮೆರೆದಾಡಿದರೆ....

ಲೀಲಾ : ಮೆರೆದಾಡೋದು ಏನು ಬಂತು ! ನಾನು ಪದವೀಧರೆ, ಸುಧಾರಿಸಿ ದವಳು. ಇದು ಮಹಿಳಾವರ್ಷ. ಅಲ್ಲಲ್ಲಿ ಸಭೆ ಸಮ್ಮೇಲನಗಳಲ್ಲಿ ಕರೀತಾರೆ ಭಾಷಣಕ್ಕೆ. ಇದೀಗ ನಾನು ಹೋಗಬೇಕು. ಟೌನ್‌ಹಾಲಿನಲ್ಲಿ ಬ್ಲಾಕ್

ಮಟ್ಟದ ಮಹಿಳಾ ಸಮ್ಮೇಲನ. ನಾನು ಅಲ್ಲಿ ಭಾಷಣ....

ಗಂಡ : ಸರಿ ಮಾರಾಯ್ತೀ, ನೀನು ಅಲ್ಲಿ ಭಾಷಣ ಬಿಗಿಯಬೇಕು. ಆದರೆ, ಇಲ್ಲಿ ಈ ಬಿಕ್ಕಟ್ಟೇನುಮಾಡ್ತಿ ? ಊರಿಗೆ ನೀನು ಮಹಿಳಾ ಧುರೀಣೆ ಒಪ್ತೇನೆ. ಆದರೆ ಇಲ್ಲಿ ಮನೇಲಿ ? ನೀನು ನನ್ನ ಹೆಂಡತಿ. ಈ ಮಗುವಿನ ತಾಯಿ

ಲೀಲಾ : ತಾಯಿ ಆದರೇನಂತೆ ? ನೀವೂ ತಂದೆ ಅಲ್ವೇ ? ಕೂಸನ್ನ ಜೋಪಾನ ಮಾಡೋ ಭಾರ ನಿಮ್ಮದ್ದೂ ಹೊಣೆ. ನೀವು ನೋಡಿಕೊಳ್ಳಿ. ನಾ ಹೊರಟೆ.... ಇದು ಮಹಿಳಾವರ್ಷದ ಕೊನೆಯ ಸಭೆ.

ಗಂಡ : ಎಲ್ಲಿಯ ವರ್ಷವೇ ? ವರ್ಷ ಮುಗಿದು ಇದು ಎರಡನೆಯ ತಿಂಗಳು. ೧೯೭೬ ಫೆಬ್ರವರಿ

ಲೀಲಾ : ವರ್ಷ ಮುಗಿದರೂ ದಶಕ ಇನ್ನೂ ಶುರು. ಇನ್ನೂ ಒಂಭತ್ತು ವರ್ಷವಿದೆ. ನೀವು ಏನು ಮಣ್ಣು ಪೇಪರ ಓತ್ತೀರೋ 'ಯುನೋ' ಸಂಸ್ಥೆ.

ಗಂಡ : I know. I know. ಈ ಕುಟುಂಬ ಸಂಸ್ಥೆಯ ಕೇಂದ್ರ ನಮ್ಮ ಮಗು. ಅದರ ಗತಿ ? ಅಲ್ಲ ಲೀಲಾ, ಇಂದಿನ ಸಭೆ ನೀನಿಲ್ಲದೆ ನಡೆಯೋ ಹಾಗೇ ಇಲ್ಲವೇ ? ನಾ ಫೋನ ಮಾಡಿ ಅವರಿಗೆ ತಿಳಿಸ್ತೀನಿ. ಮಗೂ ಪೈ ಕಾದ ಕೆಂಡ. ನೀನು ಅದರ ಹತ್ತಿರ ಉಳಿಯಲೇ ಬೇಕು. 'ಅಮ್ಮಾ' 'ಅಮ್ಮಾ' ಎಂತ ಕೂಗ್ತಾ ಇದೆ. (ಕೂಸಿನ ಅಳಲ ದನಿ)

ಲೀಲಾ : ಅಮ್ಮನಷ್ಟೇ ಅಪ್ಪಂದೂ ಅಧಿಕಾರ ಈ ಮನೇಲಿ.

ಗಂಡ : (ಸಿಡುಕಿ) ಅಧಿಕಾರದ ಪ್ರಶ್ನೆ ಏನ್ ಬಂತೇ ಮಗುವಿನ ಆರೈಕೆಗೆ ?

ಲೀಲಾ : ನೀವೂ ಅದರ ಆರೈಕೆಯ ಅರ್ಧ ಭಾರ ಹೊರಲು ಅರ್ಹರು ಮರೀಬೇಡಿ.

ಗಂಡ : ಅಲ್ವೇ ಮಾರಾಯ್ತೀ. ಮಕ್ಕಳ ಆರೈಕೆ ಹೆತ್ತ ತಾಯಿಗೇ ಗೊತ್ತು. ನೀ ಅದನ್ನು ಹೊತ್ತು ಹೆತ್ತು ಮೊಲೆಯುಣಿಸಿ....

ಲೀಲಾ : ಶೀಶೀಶೀ ಇದೇನು ಪ್ರಾಣಿ ಶಾಸ್ತ್ರ ಬಿಚಾತ್ತ ಇದೀರಿ. ನಾ ಎಲ್ಲಿ ಹಾಲು ಣಿಸಿದ್ದೆ ? ಮಗು ಬೆಳೆದಿದ್ದು ಪೌಡರ ಹಾಲಿನ ಮೇಲೆ. ನಾ ಏನು ಹಳ್ಳಿಹೈದೆ ಯಲ್ಲ. ಮಗೂನ ಹಾಲುಣಿಸಿ ನೈಮಾಟ ಕಳೆದುಕೊಳ್ಳಲಿಕ್ಕೆ. ಹ್ಣಾ, ಸಾಕು ಸುಮ್ನಿರಿ ಹೊತ್ತಾಯ್ತು. (ಒಳಗೆ ಮಗುವಿನ ಆಕ್ರೋಶ ಹೆಚ್ಚುತ್ತ ಹೋಗು ತ್ತದೆ.)

ಗಂಡ : ಕೇಳೆ, ಸ್ವಲ್ಪ ಕೇಳೆ. ನೀನೇನು ತಾಯೋ, ಹೆಣ್ಣು ಪಿಶಾಚಿಯೊ?

ಲೀಲಾ : ಸುಮಸುಮ್ನೆ ರೇಗಿಸಬೇಡಿ ನನ್ನ ಈ ಕಾಯಿಲೆ ಬಿದ್ದ ಮಗು ಇಲ್ಲಿ ಇರೋದೇ ಬೇಡ. ನಾ ಹೋಗ್ತಾ ಆಸ್ಪತ್ರೆಗೆ ಫೋನ ಮಾಡಿ ಹೋಗ್ತೇನೆ

ಆಂಬ್ಯೂಲನ್ಸ್, ಒಬ್ಬ ನರ್ಸ್‌ ಕಳಿಸಿ ಒಯ್ಯಲಿಕ್ಕೆ. (ಒಳಗೆ ಮಗುವಿನ ಅಳು.)

ಗಂಡ : ಲೀಲಾ. ನೀ ಹೋಗಕೂಡದು. ನೀ ಇಂದು ಮನೆ ಬಿಟ್ಟು ಹೊರಗೆ ಹೋಗಕೂಡದು. ಪ್ಲೀಜ್ ನಿಲ್ಲು. ಒಳಗೆ ಹೋಗಿ ಮಗೂನ ನೋಡ್ಕೋ.

ಲೀಲಾ : ನೀವು ನೋಡಿಕೊಳ್ಳಿ ಈಗಾಗಲೇ Late ಆಯ್ತು.

ಗಂಡ : (ಗಡುಸಾಗಿ) ಲೀಲಾ ನಿಲ್ಲು. ಹೊರಗೆ ಕಾಲಿಡ ಬೇಡ, ಇಟ್ಟರೇ........

ಲೀಲಾ : ಇಟ್ಟರೇನು ಮಾಡ್ತೀರಿ ? ಇದೇನು ನಿಮ್ಮ ಜುಲ್ಮಿ ! ಗಂಡನ ದಬ್ಬಾಳಿಕೆ ? ನಾ ಕೇಳೋಲ್ಲ. ನನಗೆ ನನ್ನ ಸ್ವಾತಂತ್ರ್ಯವಿಲ್ಲವೆ ?

ಗಂಡ : ಇಲ್ಲಿ ಸ್ವಾತಂತ್ರ್ಯವೇನು ಬಂತು ಮಣ್ಣು ? ಇದು ಮನುಷ್ಯತ್ವದ ಪ್ರಶ್ನೆ. ಮಗುವಿಗೆ ನೀನು ಬೇಕು.

ಲೀಲಾ : ನನಗೆ ಮೀಟಿಂಗಿಗೆ ಹೋಗಲೇ ಬೇಕು. ನನ್ನ ಹಕ್ಕು ನನಗೆ ಬೇಕು. ಮಗವಿನ ಆರೈಕೆ ನಿಮ್ಮ ಹೊಣೆ. ಆದರ ವ್ಯವಸ್ಥೆ ನಾನು ಸೂಚಿಸಿದ್ದೇನೆ. ಇನ್ನು ನಾ ಹೊರಟೆ.

ಗಂಡ : ಇದೇನು ಹುಚ್ಚು ಹಟ, ಲೀಲಾ ! ನಿನ್ನ ಮಗು.

ಲೀಲಾ : ಮತ್ತೆ ಮತ್ತೆ ನನ್ನ ಮಗು, ನನ್ನ ಮಗು. ಅದು ನಿಮ್ಮದೇ ಮಗು. ನಾನೇನು ಮಗು ಬೇಡಿ ಪಡೆದಿದ್ನೇ ?

ಗಂಡ : ಅಯ್ಯೋ ಲೀಲಾ, ಇದೆಂಥ ಮಾತು ಆಡ್ತೀಯೇ ?

ಲೀಲಾ : ಇದು ಮಾತಿಗೆ ಮಾತು ನಿಮಗೆ ಪ್ರತ್ಯುತ್ತರ ನೀವು M.Sc. ಅಂತೆ ನ್ಯೂಟನ್‌ನ ಮೂರನೆಯ ನಿಯಮ ಮರೆತಿರಾ ?

ಗಂಡ : ಏ ಮಹಾಪಂಡಿತೇ ಅದೇಕೆ ಇಲ್ಲಿ ನೆನಪಾಯ್ತು.

ಲೀಲಾ : ಗಂಡುಹೆಣ್ಣು action and reaction ಇದ್ದಂತೆ equal and opposits

ಗಂಡ : ಇಲ್ಲಿ ಯಾರು action ನ್ನು ? ಯಾರ. Reaction ನ್ನು ?

ಲೀಲಾ : (ಆವೇಶ) ನಾವು Action ನೀವು reaction ಗಂಡ ಯಾವಾಗಲೂ ರೀಎಕ್ಶನರಿ, ಪ್ರತಿಗಾಮಿ. ನಾವು ಪುರೋಗಾಮಿ.

ಗಂಡ : ಯಾರು ಗಾಮಿ, ಯಾರು ಗಾಮಿ ? ಈ ಹುಗಾಮಿ ಹಟ ಈಗ ಬೇಡ. ನೀ ಈಗ ಮನೆಬಿಟ್ಟು ಹೊರಬೀಳಕೂಡದು ಅಕೋ, ಮಗು ಕಿರುಚಿಕೊಂಡು ಒಮ್ಮೆಲೆ ಕಾರಿಕೊಳ್ತು. (ಅಂಥ ಸದ್ದು) ನೋಡಿಕೋ. ನಾ ಹೋಗಿ ಡಾಕ್ಟರರ ಕರದು ತರ್ತೇನೆ.

ಲೀಲಾ : ನಾನೇ ಕಳಿಸಿಕೊಡ್ತೇನೆ. ನೀವು ಇಲ್ಲೆ ನಿಲ್ಲಿ. ನಾ ಹೊಂಟೆ.

ಗಂಡ : ಹೊರಟೆಯಾ, ಹೋಟೇ ಬಿಟ್ಟೆಯಾ ?

ಲೀಲಾ : ಹುಂ

ಗಂಡ : ಹಾಗಾದರೆ ಹೋಗು. ಹೊರಟೇ ಹೋಗು. ಮತ್ತೆ ಈ ಮನೆಯಲ್ಲಿ ಕಾಲಿಡ ಬೇಡ. ನಿನ್ನ ಸ್ವಾತಂತ್ರ್ಯ ನಿನಗೆ. ನನ್ನ ಜವಾಬ್ದಾರಿ ನನಗೆ. ನನ್ನ ಮಗು, ನನ್ನ ಮನೆ ನಾನೇ ನೋಡಿ ಕೊಳ್ತೇನೆ.

[ಲೀಲಾ ಬಿಕ್ಕುತ್ತ ಬಿಕ್ಕುತ್ತ ಮಾತು ಮುಗಿಸುತ್ತಾಳೆ.]

ಲೀಲಾ : ಹೀಗಿದೆ ನನ್ನ ಕರ್ಮ ಕಥೆ. ಈಗ ನಾನು ಬೇರೆ ಇದ್ದೇನೆ. ನನಗೀಗ ನೀವೇ ಗತಿ ಮಿಸ್ಟರ್ ಕಾಮೇಶ್ವರರಾವ್.

ಕಾಮೇಶ್ವರ : Dont you worry. ನಿನ್ನ ಎಲ್ಲ ಚಿಂತೆಗೆ ಇನ್ನು ಇಲ್ಲಿ ಪೂರ್ಣ ವಿರಾಮ. I welcome you with open arms. ಇಂದಿನಿಂದ ನೀವು ನನ್ನ ಪರ್ಸನಲ್ ಸೆಕ್ರೆಟರಿ. ಹೂಂ ಇನ್ನು ಈ ಅಳುಮೋರೆ ಬೇಡ. ಮುಖ ತೊಳೆದುಕೊಂಡು ಮೇಕಪ್ ತಿದ್ದಿಕೊಂಡು ಬನ್ನಿ. oh what a girl. ಲೀಲಾ, ನಿನ್ನ ಸ್ವತಂತ್ರ ಸ್ವಚ್ಛಂದ ಬಾಳಿಗೆ ಇಂದೇ ನಾಂದಿ.

೩

[ಸಿಟಿ ಬಸ್ ಸ್ಟಾಪ್. ಲೀಲಾ ಬಸ್ ಏರುವಳು. ಕಂಡಕ್ಟರನ ಗೊಣಗು]

ಕಂಡಕ್ಟರ : ಅಮ್ಮಾ, ಸೀಟು ಫುಲ್. ನಿಂತು ಹೋಗಬೇಕಾದೀತು.

ಲೀಲಾ : ಅಡ್ಡಿ ಇಲ್ಲಪ್ಪ. ನಮ್ಮ ಸಭೆ ಮುಗಿಯಲಿಕ್ಕೆ ತಡವಾಯ್ತು. ಈಗ ಮನೆ ಸೇರಲೇಬೇಕು.

ಕಂಡಕ್ಟರ : ಹಾಂ ಕೊಳ್ಳಿ ಟಿಕೇಟು. (ಗಂಟೆ) ಮುಂದಾಗಿ. ಮುಂದನೋರ ಸರೀರಿ ಹೆಣ್ಣು ಮಕ್ಕಳಿಗೆ ಜಾಗಕೊಡಿ. ಹಾಂ ಮುಂದೆ ಸರೀರಪ್ಪಾ.

೧ನೇ ಪ್ರಯಾಣಿಕ : ಇವಳಾರು ?

೨ನೇ ಪ್ರಯಾಣಿಕ : ಗೊತ್ತಿಲ್ವೇ ? ಇವರು ಮಿಸೆಸ್ ಲೀಲಾರಾವ್. ಪ್ರಸಿದ್ಧ ಮಹಿಳಾ ಕಾರ್ಯಕರ್ತೆ. ಉತ್ತಮ ಮಾತುಗಾರ್ತಿ.

ಲೀಲಾ : ಏನು ಧಗೆ ? ತುಂಬಾ ಸುಸ್ತು ಬಳಲಿಕೆ ಹುಶ್ ss

ಕಂಡಕ್ಟರ : ಓ ರಾಯ್ರೆ, ನಿಮಗಿವ್ರು ಗೊತ್ತು. ಅಂದ್ಹಾಂಗ ಇವರಿಗೆ ತುಸು ಜಾಗ ಬಿಟ್ಕೊಡ್ರಲ್ಲ !

೨ನೇ ಪ್ರಯಾಣಿಕ : ಅಲ್ರೀ, ಇದೊಳ್ಳೆ ನ್ಯಾಯ! ಇದೀಗ ಇವರು ಹೆಂಗಸರ ಸಮಾನ ಹಕ್ಕುಗಳ ಬಗ್ಗೆ ಭಾಷಣ ಮಾಡಿ ಬಂದವರು. ನಾವಲ್ಲಿ ಸ್ಟಾಪಿನಾಗ ನಿಂತಾಗ ಕೇಳಿದ್ವಿ ಅಲ್ಲ? ನಾವೂ ನಿಂತಿದ್ದೀವಿ, ಅವರೂ ನಿಂತ್ಕೊಳ್ಳಿ. ನಮ್ಮಿಬ್ಬರಿಗೂ ನಿಲ್ಲಲಿಕ್ಕೆ ಸಮಾನ ಹಕ್ಕು (ಎಲ್ಲರ ನಗು)

ಹೆಣ್ಣುದನಿ : ಅಲ್ರೀ, ಹೆಣ್ಣು ಹೆಂಗಸು ತುಂಬಾ ಬಳಲಿದ್ದರೆ ತುಸು ಸರಿದು ಜಾಗ ಕೊಡ್ರಲ್ಲಾ. ನಿಮಗ ಸ್ತ್ರೀ ದಾಕ್ಷಿಣ್ಯವೇ ಇಲ್ಲ!

೧ನೇ ಪ್ರಯಾಣಿಕ : ದಾಕ್ಷಿಣ್ಯ ಗೀಕ್ಷಿಣ್ಯ ಏನೂ ಇಲ್ರವ್ವಾ ಇಲ್ಲಿ. ಇದು ಶುದ್ಧ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ! (ಎಲ್ಲರ ನಗು)

೩ನೇ ಪ್ರಯಾಣಿಕ : ಅದೂ ಸರೀನೇ. ಹಕ್ಕಿಗೆ ಹೋರಾಡೋರು ದಾಕ್ಷಿಣ್ಯಾನೂ ಬಯಸಬಾರದು (ಎಲ್ಲರ ನಗು)

೪ನೇ ದನಿ : ಹೌದು, you can't have it both ways ಏನಂತೀರಿ.

(ಎಲ್ಲರೂ "ಹೌದಪ್ಪ ಹೌದು" ಎಂದು ನಗುತ್ತಾರೆ)

ಲೀಲಾ : ಸಾಕು ಬಿಡಿ. ನಿಮ್ಮ ಗಂಡು ಗುಂಡರ ಗೊಡ್ಡುಸೊಕ್ಕು. (ಗಂಟೆಬಾರಿಸಿ) ಕಂಡಕ್ಟರ ನಾ ಇಲ್ಲೇ ಇಳೀತೀನಿ. ನಡೆದೇ ಹೋಗ್ತೀನಿ.

(ಅವಳು ಧಢಧಡ ಇಳಿದು ಹೋಗುತ್ತಾಳೆ ಆಗ ಪ್ರಯಾಣಿಕರು:-)

೧ನೇ : ಇನ್ನು ಹೆಂಗಸರದೇ ಬಸ್ ಓಡಾಡಬೇಕಾತು!

೨ನೇ : ಅರೇರೇ ಹೋಗೇಬಿಟ್ಟಳು!

೩ನೇ : ಎಂಥ ಗಂಡು ಬೀರಿ!

೪ನೇ : ಅಲ್ಲ, ಹೆಣ್ಣುಬೀರಿ! (ಎಲ್ಲರ ನಗೆ)

[ಮೇಲಿನ ಮಾತುಕತೆ ನಡೆದಾಗ ಬಸ್ಸು ಹೋಗುತ್ತಲೇ ಇರುವ ಸದ್ದು. ಲೀಲಾ ಇಳಿದ ಮೇಲೆ ಮತ್ತೆ ಗಂಟೆ ಆಗಿ ಬಸ್ ಓಡುವುದು.]

೪

ಶೈಲಾ : ನಿಲ್ಲಿ ಲೀಲಾರಾವ್, ನಾನೂ ಬಂದೆ. ನಿಮ್ಮ ಜೊತೇ ನಡೆದೇ ಹೋಗ್ತೇನೆ.

ಲೀಲಾ : ನೀವು? ಆಗ ಬಸ್ಸಿನಲ್ಲಿ ಸ್ತ್ರೀದಾಕ್ಷಿಣ್ಯದ ಮಾತು....

ಲೈಲಾ : ಹೌದು, ಆಡಿದವಳು ನಾನೇ. ನನ್ನ ಹೆಸರು ಲೈಲಾ ಪಿಂಟೋ. ನಿಮ್ಮ ಫರ್ಮಿನಲ್ಲಿಯೆ ನಾನೂ ದುಡೀತೇನೆ. ಆದರೆ ನಮ್ಮ ಸೆಕ್ಶನ್ ಬೇರೆ.

ಲೀಲಾ : ತುಂಬ ಥೆಂಕ್ಸ. ಹೇಗೆ ಜೀವ ತಿಂದಬಿಟ್ರೂ ಆ ಗಂಡಸ್ರೂ.

ಲೈಲಾ : ಹೆಣ್ಣಿನ ಜೀವ ತಿಂದೇ ಇದ್ರೇ ಅವರು ಗಂಡಸ್ರೇ ? ಒಬ್ಬೊಬ್ರು ಒಂದೊಂದು ತರಾ ! ಅಲ್ಲ ನೀವೇಕೆ ಇಂದು ಫಜೀತಿಗೆ ಸಿಕ್ಕಿಸಿ ಕೊಂಡ್ರಿ? ಯಾವಾಗಲೂ ನೀವು ನಮ್ಮ Bossರ ಕಾರಲ್ಲೇ ಓಡಾಡೋರು !

ಲೀಲಾ : (ಸಿಟ್ಟುಸಿರು) ಅದೂ ನಿಜ. ಆದರೆ ಈಚೆಗೆ ನಾನು ಅವರ ಕಾರಲ್ಲಿ ಹೋಗೋದು ತಪ್ಪಿಸಿಕೊಳ್ತಾ ಇದ್ದೇನೆ. ಅವರ ಈ ಚಾಕರಿಗೂ ರಾಜೀ ನಾಮೆ ನಿನ್ನೇನೆ ಸಲ್ಲಿಸಿದ್ದೇನೆ.

ಲೈಲಾ : ಓ ಆಯ್ ಸೀ.... ಅದೇಕೋ ?

ಲೀಲಾ : ಅದೊಂದು ಕರ್ಮಾಂತರ. ಇನ್ನೊಮ್ಮೆ ಹೇಳ್ತೇನೆ. ಆದರೆ ಇಷ್ಟೆಲ್ಲ ತಿಂಗಳು ಒಂದೇ ಆಫೀಸಿನಲ್ಲಿದ್ದು ನಿಮ್ಮ ಭೆಟ್ಟೀನೇ ಇಲ್ಲ ಲೈಲಾ.

ಲೈಲಾ : ಅದಕ್ಕೇನಂತೀರಿ. ನಾನು ಬಾನಾಡಿ ಹಕ್ಕಿ. ನನಗೆ boy friends ಬಹಳ. ಆಫೀಸಿನಲ್ಲಿ ಇದೊಂದೆ ಕಡಿಮೆ. ಆದರೆ ಹೊರಗೆ ನಾ free ! ಕೆಲಸಕ್ಕೆ ಕಳ್ಳ ಬೀಳೋ ಹಾಂಗಿಲ್ಲ. (ನಗು) ಆದರೂ ನಿಮ್ಮ ಬೀಡಾರಕ್ಕೇ ಹೋಗೋಣ ಆಫೀಸಿಗೆ late ಆದ್ರೆ ಆಗಲಿ. ನಿಮ್ಮ ಕಥೆ ಈಗಲೇ ಕೇಳ ಬೇಕೆಂದು ಬಲವಾದ ಆಸೆ !

ಜ

ಲೀಲಾ : ಬನ್ನಿ ಇದೇ ನನ್ನ ಬಿಡಾರ. ಒಳಗೆ ಹೋಗೋಣ. (ಒಳಗೆ ಹೋಗಿ ಕೂತ ಸದ್ದು) ಆ ಸೋಫಾದಲ್ಲಿ ಕೂತಿರಿ ಕಾಫಿಗೆ ಹಾಕ್ತೇನೆ

ಲೈಲಾ : ಬೇಡ. ನೀವೇ ಕೂತು ಹೇಳಿ. ನಾ ಕೇಳ್ತೇನೆ. ಆಮೇಲೆ ಕಾಫಿ.

ಲೀಲಾ : ಏನು ಹೇಳಲಿ ?

ಲೈಲಾ: ನೀವು ನನ್ನಂತೆ ಅಲ್ಲ. ಸ್ತ್ರೀ ಸ್ವಾಂತಂತ್ರ್ಯದ ಪ್ರತಿಪಾದಕರು. ಆದರೂ ನಮ್ಮ ಬಾಸರ ಕೋಣೆ ಬಿಟ್ಟು ಹೊರಗೆ ಬರ್‍ತಾ ಇದ್ದಿಲ್ಲ ! ಅವರ ಬಿಟ್ಟರೋದೆ ಅಪರೂಪ !

ಲೀಲಾ : ಏನು ಮಾಡಲಿ ? ಅವರದು ಭಾರೀ ಕೋಪ. ಅವರೇ ನನ್ನನ್ನ ಬಿಡ್ತಾ ಇದ್ದಿಲ್ಲ.

ಲೈಲಾ ಅವರು ಯಾರನ್ನೂ ಬಿಟ್ಟವರೇ ಅಲ್ಲ, ಲೀಲಾ. ನೀ ಹೊಸ ಹಸು ಸಿಕ್ಕಿ ಈ ಹಳೇ ಹುಲಿಗೆ He is a wolf. ಅರೇ ಅಳುವಿಯೇಕೆ ? ಏನಾಯ್ತು

ಲೀಲಾ : (ಅಳುತ್ತ) ಆಗೋದೆಲ್ಲ ಆಗೇಹೋಯ್ತು !

ಲೈಲಾ : ಗೊತ್ತಾಯ್ತು ಬಿಡು (ನಿಟ್ಟುಸಿರು)

ಲೀಲಾ : (ಇನ್ನೂ ಬಿಕ್ಕಿ) ಅಗಬಾರದ್ದು ಆಗಿಹೋಯ್ತು. ನಾನು ಮದುವೆ ಆದವಳು.

ಲೈಲಾ : ಹಾಗಿದ್ದರೆ ಯೋಚನೆ ಏಕೆ ?

ಲೀಲಾ : ನಾನು ಬೇರೆ ಇದ್ದೇನೆ, ಗಂಡನ ದಬ್ಬಾಕೆ ಪ್ರತಿಭಟಿಸಿ, ಅವರ ಹಂಗು ಹರಿದೊಗೆದು.

ಲೈಲಾ : ಓಹೋ, ಸ್ವಾತಂತ್ರ್ಯ ಸಮಾನಾಧಿಕಾರಕ್ಕಾಗಿ ಗಂಡನ್ನ ಬಿಟ್ಟು ಬಂದ್ರಾ ? ಅವರೇನು ಕುಡುಕರಾ ?

ಲೀಲಾ : ಊಹೂಂ.

ಲೈಲಾ : ಕಟ್ಟೋರಾ ?

ಲೀಲಾ : ಛೇ, ಛೇ, ಹಾಗೆ ಅವರು ತುಂಬ ಒಳ್ಳೆಯವರು. ಆದರೆ ನಮ್ಮ ಮಗೂನ ಕಾಳಜಿ ಎಲ್ಲ ನನ್ನ ಮೇಲೆ ಹೋರಿಸ್ತಾರೆ! ತಮ್ಮ ಪಾಲಿನ ಹೊರೆ ಹೊರೋಲ್ಲಾ.

ಲೈಲಾ : ಮಗು ಬೇರೆ ಇದೆಯಾ ?

ಲೀಲಾ : (ಬಿಕ್ಕು) ಹೂಂ ನಾಲ್ಕು. ವರ್ಷದ್ದು ಮುದ್ದುಮುದ್ದಾಗಿದೆ. ಗಂಡು ಮಗು ಅಲ್ಲಾ ಎಂದು ಕರೀತೇವೆ. (ಅಳು ಉಕ್ಕಿ) ಈಗ ಮತ್ತೆ... ....

ಲೈಲಾ : ಬೇರೆ ಮಗು. ಬೇಡಾದ ಮಗು! ಛೇ ಛೇ.

ಲೀಲಾ : ಆ ಮಗೂನ ಕಾಳಜಿ ಬಗ್ಗೆ ಜಗಳವಾಯ್ತು.

ಲೈಲಾ : ಹಾಗಾದರೆ ಈ ಹೊಸಮಗೂನ ಭಾರ ನಮ್ಮ boss ಹೊರಲು ಸಿದ್ಧವೊ?

ಲೀಲಾ : ಅವರ ಬಣ್ಣ ಈಗ ಬಯಲಾಯ್ತು. ಅವರ ಬಣ್ಣಕ್ಕೆ ನಾನು ಮೈಸುಟ್ಟು ಕೊಂಡೆ.

ಲೈಲಾ : ಮುಂದೇನು ಹಾಗಾದರೇ ?

ಲೀಲಾ : (ಬಿಗಿಸಾಗಿ) ನಮ್ಮ ಈ ಕಂದನನ್ನು ನಾ ಹೊತ್ತು ಸಾಕ್ತೇನೆ. ಶಕುಂತಲೆ ಭರತನನ್ನು ಬೆಳೆಸಿದಂತೆ

ಲೈಲಾ : ಶಕುಂತಲೆಗೆ ಮರೀಚಿ ಋಷಿಯ ರಕ್ಷಣೆ ಕವಚವಿತ್ತು. ನಿನಗೆ? ಲೀಲಾ, ಒಂದು ಮಾತು ಹೇಳಲೇ? ನಾ ನಿನ್ನಷ್ಟು ಓದಿದವಳಲ್ಲ. ಆದ್ರೂ....

ಲೀಲಾ : ಹೇಳು ಲೈಲಾ, ನನಗಿಂತ ನೀನು ಅನುಭವಸ್ಥೆ.

ಲೈಲಾ : ಲೀಲಾ, ಈ ಗಂಡಸರೆಲ್ಲ ಒಂದೇ ರೀತಿ. ಮನೆಯ ಗಂಡನ ಹಂಗು ಬೇಡಾದರೆ ಹೊರಗೆ boss ನ ಹಂಗಿಗೆ ಬಲಿ! ಪುರುಷಪ್ರಧಾನ ಸಮಾಜ ದಲ್ಲಿ ಹೆಣ್ಣಿಗೆ ದಾಸ್ಯ ತಪ್ಪಿದ್ದಲ್ಲ.

ಲೀಲಾ : ಆದರೂ ಹೊರಗಿನ ಗಂಡಿನ ಹಂಗು ನಮ್ಮದೇ ಆಯ್ಕೆ. ಮನೆಯಲ್ಲಿ ಹಾಗಲ್ಲ.

ಲೈಲಾ : ಆದರೆ ಇಲ್ಲಿ ಮತ್ತೆ ಈ ತಾಯ್ತನದ ತೊಡಕು ಉಂಟಲ್ಲ!

ಲೀಲಾ : ಹೌದು, ಅದು ತಪ್ಪುವಂತೆ ಇಲ್ಲ.

ಲೈಲಾ : ಛೀ, ಅದನ್ನು ತಪ್ಪಿಸಿಕೊಳ್ಳುವುದೂ ಹೆಣ್ಣಿನ ಧರ್ಮವಲ್ಲ. ಹೆಣ್ಣು ತಾತ್ಕಾಲಿಕ ಕಾಂತೇ, ಯಾವಕಾಲಕ್ಕೂ ಮಾತೆಯೇ.

ಲೀಲಾ : ಸರಿ ಒಪ್ಪಿದೆ. ಆದರೆ ಅವಳ ಸ್ವಾತಂತ್ರ್ಯ?

ಲೈಲಾ : ಹೆಣ್ಣು ನಿಜವಾದ ಅರ್ಥದಲ್ಲಿ ಸ್ವತಂತ್ರಳಾಗಬೇಕೋ? ಹಾಗಾದರೆ ಎಂಥ ಪರಿಸ್ಥಿತಿಯಲ್ಲಿಯೂ ಅವಳ ತಾಯ್ತನವನ್ನು ಸಮಾಜ ಒಪ್ಪಬೇಕು, ಮನ್ನಿಸಬೇಕು. ಹುಟ್ಟಿದ ಕೂಸು - ಹೇಗೂ ಎಲ್ಲೂ ಹುಟ್ಟಿರಲಿ, ಅದು ಸಮಾಜದ ಘಟಕ. ರಾಷ್ಟ್ರದ ಸಂಪತ್ತು, ಶಕ್ತಿ, ಭಾವೀಜನಾಂಗ. ಅವರ ಪೋಷಣೆ ರಕ್ಷಣೆ ಎಲ್ಲ ರಾಷ್ಟ್ರದ ಹೊಣೆ ಆಗಬೇಕು. ಇವನ್ನು ಒಪ್ಪಿದಾಗಲೇ ಹೆಣ್ಣಿಗೆ ನಿಜವಾದ ಸ್ವಾತಂತ್ರ್ಯ ಸಮಾನಾಧಿಕಾರ.

ಲೀಲಾ : ಈಗೇನು ಮಾಡಂತೀಯ

ಲೈಲಾ : ಮರಳಿ ಮನೆಗೆ. ನಿನ್ನ ಮುದ್ದು ಲಲ್ಲು ಇದ್ದಲ್ಲಿ. ನಾನೂ ಬರ್ತೀನೆ. ನಿನ್ನ ಯಜಮಾನರನ್ನು ಕಾಣೋಣ. ಆದದ್ದೆಲ್ಲ ಅವರಲ್ಲಿ ತೋಡಿಕೊಳ್ಳೋಣ. ಮಮತೆ ಇದ್ದಲ್ಲಿ ಸಮತೆ ಮುಖ್ಯವಲ್ಲ. ಪರಸ್ಪರಾವಲಂಬನವೇ ನಿಜವಾದ ಸ್ವಾವಲಂಬನ, ಸ್ವಾತಂತ್ರ್ಯ. (ಹೊರಗೆ ಕಾರಿನ ಸದ್ದು. ಬಂದು ನಿಂತದ್ದು. ಹಾರ್ನ್) ಅಕೋ ಲೀಲಾ, ನಮ್ಮ bossಏ ಬಂದಂತಿದೆ ನಿನ್ನ ಭೆಟ್ಟಿಗೆ.

ಲೀಲಾ : ನಾ ಬಲ್ಲೆ, ಅವರನ್ನು ಅಟ್ಟಿಬಿಡು. ಕುರಿದೊಗಲಲ್ಲಿ ಕೆಟ್ಟ ತೋಳ! ಅಟ್ಟಿಬಿಡು. ಹೊರಗೆ!

(ಅಷ್ಟರಲ್ಲಿ ಅವಳ ಗಂಡನು ಮಗು ಲಲ್ಲೂ ಜೊತೆ ಒಳಬರುತ್ತಾನೆ.)

ಗಂಡ : ಓಹೋ‌ಹೋ! ಮತ್ತೆ ನಮಗೆ ಹೊರಗೆ ಹಾಕುವುದೊ? ಏನಪ್ಪಾ ಈ

ಹೆಣ್ಣಿನ ಹಟ! ನೋಡು ಮಗೂ ನಿಮ್ಮಮ್ಮ ನಂಗೆ ದೊಡ್ಡ ಗುಮ್ಮ ಆಗಿ ಬಿಟ್ಟಿದ್ದಾಳೆ!

ಲಲ್ಲೂ : ಅವ್ವಾ, ಬಾ ಹೋಗೋಣ. ನಿನ್ನ ಕರೀಲಿಕ್ಕೆ ಬಂದೀನಿ.

ಲೀಲಾ : ನಿಮ್ಮ ದಮ್ಮಯ್ಯ. ಹಾಗೆ ಅನ್ನಬೇಡಿ. ಮಗೂ ನಾ (ಅಳುತ್ತ) ಹೇಗೆ ಬರಲಿ?

ಲಲ್ಲೂ : ಹೇಗಂದ್ರೆ? ಕಾರಲ್ಲಿ. ನಿನ್ನ ಬಗ್ಗೆ ಅಪ್ಪ ಕಾರು ಕೊಂಡಾನೆ. ಸಭೆಗಿಭೆ ಎಂತ ಓಡಾಡಲಿಕ್ಕೆ. ನನಗೂ ಒಯ್ತೀಯಾ ಕಾರಲ್ಲಿ?

ಲೀಲಾ : ಇದೇನೂ ಅಂದ್ರಿ. ನಾನೇನೋ ತೋಡಿಕೊಳ್ಳೋದಿದೆ. (ಬಿಕ್ಕಿ) ಲೈಲಾ ನೀನೆ ಹೇಳು.

ಗಂಡ : ಯಾರೂ ಏನೂ ಹೇಳಬೇಕಾಗಿಲ್ಲ. ಎಲ್ಲ ನಂಗೆ ಗೊತ್ತು. ಈ ಪತ್ರ ನೋಡು....

ಲೈಲಾ : ಲೀಲಾ; ಯಾವ ಪತ್ರ? ಯಾರ ಪತ್ರ?

ಗಂಡ : ಯಾರೋ ಪರೋಪಕಾರಿಗಳು ಬರೆದ ಬೇನಾಮಿ ಪತ್ರ. ಇದು ನಿನ್ನ ಕಥೆ ಎಲ್ಲ ಬಣ್ಣಿಸಿ ಬಣ್ಣಿಸಿ ಹೇಳಿದೆ. ನೀವೇನು ಮತ್ತೆ ಹೇಳಬಲ್ಲಿರಿ. ಹೂಂ ಈಗ ಹೊರಡಿ ಲೀಲಾ ನಿನ್ನ ಗೆಳತೀನೂ ಬರಲಿ.

ಲೀಲಾ : ಅಂದರೆ? ಈ ಪತ್ರ ಓದಿದ ಮೇಲೂ?

ಗಂಡ : ಓದಿದ ಮೇಲೆ ಇಕೋ ನಿನ್ನ ಎದುರಿಗೇ ಹರಿದು ಹಾಕ್ತೇನೆ. ಯಾರು ಏನೇ ಹೇಳಲಿ ನೀನು ನನ್ನವಳಲ್ಲ. ನಾವಿಬ್ಬರೂ ಈ ಲಲ್ಲೂ ಸೊತ್ತು. ಯಾರು ಏನೇ ಮಾಡಲಿ, ಏನೇ ಆಡಲಿ, ಹೆಣ್ಣು ಕೆಡುವುದಿಲ್ಲ. ಕೆಡಲಾರಳು. ಈಗ ನಡೆ ಹೋಗೋಣ.

ಮನೆತುಂಬ ಮಕ್ಕಳು

(ಬಾನುಲಿ ರೂಪಕ)

—: ಪಾತ್ರ ಪರಿಚಯ :—

ಹಿರಿಯರು—

ಶ್ಯಾಮಣ್ಣ : ತಂದೆ
ಡಾ. ಭೀಮರಾವ್ : ಗೆಳೆಯ
ಕಾವೇರಮ್ಮ : ತಾಯಿ

ಮಕ್ಕಳು—

ರಂಗ : ೧೪ ವರ್ಷ
ಗುಂಡ : ೭ ,,
ಪಲ್ಯ : ೩ ,,
ಚಂದ್ರಿ : ೧೨ ,,
ಗಂಗಿ : ೯ ,,
ಪುಟ್ಟಿ : ೧ ೧/೨ ,,
ಕಿಟ್ಟು, ಬಾಪೂ : ಬರೀ ಉಲ್ಲೇಖ

ಆಗಂತುಕರು—

ಕಂಡಕ್ಟರ, ಫೌಜದಾರ, ಬೀದಿಜನ ೧, ೨

ಸದ್ದುಗಳು—

ಬಸ್‌ಸ್ಟ್ಯಾಂಡ ಧ್ವನಿಗಳು
ಬರಹೋಗುವ ಬಸ್ಸುಗಳ ಸದ್ದು
ಕಾರಿನ ಸದ್ದು, ಹಾರ್ನ್
ಸಿಲೋನ್ ರೇಡಿಯೊ 'ಜಗಹ ನಹೀಹೈ....' ಇತ್ಯಾದಿ

ಚಂದ್ರಿಯ ಹಾಡು ಸಹಜ ಮನೆಯಲ್ಲಿ ಮೆಲುದನಿಯಲ್ಲಿ ಹಾಡಿದಂತೆ ಇರಬೇಕು. ಅದಕ್ಕೆ ವಾದ್ಯಮೇಳ ಬೇಡ.

೧

[ಬಸ್ ಸ್ಟಾಪ್. ಕಾದುನಿಂತ ಪ್ರವಾಸಿಗಳ ಗಲಾಟೆ. ಹಣ್ಣು ಚಾಕಲೇಟು ಸೋಡಾ ಐಸ್ ಕ್ರೀಂ ಕ್ಯಾಂಡಿ ಮಾರುವವರ ಗದ್ದಲದ ಹಿನ್ನೆಲೆ. ಒಂದು ಬಸ್ಸು ಬಂದು ನಿಧಾನವಾಗಿ ಹೊರಟುಹೋಗುತ್ತದೆ. ಸಿಲ್ಲದೆ, 'ಹಾಂ, ತಡೀರಿ, ತಡೀರಿ! ಓ ಮಿಸ್ಟರ ಕಂಡಕ್ಟರ ಸಾಬ್', 'ಎಲಾ ಈ ಮುಂಡೆಮಗಂಗೇನು ಸೊಕ್ಕು' 'ಹೋಗಲಿ ಬಿಡಿ, ಅಂವಾದರೂ ಏನ್ ಮಾಡ್ತಾನ್' 'ಬಸ್ಸಿನೊಳಗೆ ಜಡಿದು ತುಂಬಿದಾರ ಪ್ಯಾಸಂಜೆರ್ರು!' ಇತ್ಯಾದಿ ಸದ್ದುಗಳು.]

ಹೆಂಡತಿ : ಅಯ್ಯೊ! ನಮ್ಮ ಪ್ರಾರಬ್ಧ! ಬಸ್ಸು ಬಿಟ್ಟೇ ಹೋಯ್ತು. ಆ ಪಾಪಿ ಕಂಡಕ್ಟರ ನಿಲ್ಲಿಸಲೇ ಇಲ್ಲ! ಈಗೇನ್ ಮಾಡೋದು? ಈ ನಾಲ್ಕು ಮಕ್ಕಳನ್ನು ಬೇರೆ ಕಟ್ಕೊಂಡು?

[ಹತ್ತಿರದ ಹಾಟೇಲಿನಿಂದ ಸಿಲೋನ ರೇಡಿಯೋ ದನಿ 'ಜಗಹ ನಹೀಹೈ....' ಇತ್ಯಾದಿ]

ಗಂಡ : ಕೇಳ್ತಿಯೇನೇ ಆಕಾಶವಾಣಿ? ಅದು ಆ ಕಂಡಕ್ಟರಂದೇ ಮಾತು ತಿಳೀತೆ. ಆ ಬಸ್ಸಿನಲ್ಲಿ ನಮಗೆಲ್ಲ ಜಾಗ? ಕೊರಳಿಗೊಂದು, ಸೊಂಟಕ್ಕೊಂದು, ಹಿಂದೊಂದು ಮುಂದೊಂದು!

ಹೆಂಡತಿ : ಸಾಕು ಬಿಡಿ, (ಪುಟ್ಟಿ ಅಳುತ್ತಾಳೆ) ಹಾಂ ಹಾಂ ಸುಮ್ಕಿರು ನನ ಪುಟಾಣಿ! ಪಾಪ, ಪುಟ್ಟಿ ನಿದ್ದೆಮಾಡ್ದೆ ಹಾಲಿಲ್ದೆ ಎಷ್ಟು ತ್ರಾಸು ಆಯ್ತೋ!

ಗಂಡ : ಮತ್ತೆ ಇಂವೇನು ಕಲಿ ಪುರುಷ. ನನ್ನ ಸೊಂಟ ಏರಿ ಕೂತಾನೆ. ಸ್ವಲ್ಪ ಸುಮ್ನಿರೊ. ಹಾಗೆ ಒದಿಬೇಡ ಏ ಪಲ್ಯಾ.

ಪಲ್ಯ : (ಚಂಡಿ ಬಂದಂತೆ) ಊಂ ಊಂ ಊಂ, ನಾ ಒಲ್ಲೆ. ನಂಗೆ ಜರಬೊತ್ತು, ನಂಗೆ ಜರಬತ್ತು!

ಗಂಡ : ಜರಬತ್ತು! ಎಲ್ಲಿ ಬಂತು ಜ್ವರ? ಬಾಯಿಮುಚ್ಚು. ಹಳೇ ಹುಚ್ಚಾಟ ಬಸ್ ಬಂತು. ಮನೆಗೆ ಹೋಗಿ ಮಲಗು ಜರ ಬಂದ್ರೆ. ಜರಬತ್ತಂತೆ! ಹೆಂ, ಕೇಳ್ದಿಯೇನೇ!

ಹೆಂಡತಿ : ಹಾಗಲ್ಲಾಂದ್ರೆ. ಅವಂಗೆ ಶರಬತ್ತು ಬೇಕಂತೆ.

ಗಂಡ : ಶರಬತ್ತೇ, ಮತ್ತೆ ಜರಬತ್ತು ಅಂದಾನೆ ಮಂಗ್ಯಾ.

ಗುಂಡ : ಅಪ್ಪಾ, ಅವಂಗೆ ಶ ಕಾರದ ಬದಲು ಜ ಕಾರವೇ ಬಾಯಿಗೆ ಬರೋದು.

ಗಂಡ : ನೀ ಚಕಾರ ಮಾತೆತ್ತ ಬೇಡ. ಅಪ್ಪಂಗೆ ಬುದ್ಧಿ ಹೇಳ್ತಾನೆ. ಮಂಗ್ಯಾನ ಮಗ ತಂದು.

ಹೆಂಡತಿ : (ನಗು ತಡೆಯದೆ) ಅಂದರೆ ಮಂಗ್ಯಾ ಯಾರು— ಅಂದೆ? ಪುಟ್ಟೀ, ಹೂಂ ಅಳಬ್ಯಾಡ ಮರಿ. ಸಾಯಲಿ ಈ ಬಸ್ಸು ಎಷ್ಟು ಹೊತ್ತು ಕಾಯೋದು.

ಗಂಡ : ಅಲ್ನೋಡು. ನೀ ಕೈಹಿಡಿದು ನಿಂತ ಗಂಗಾ–ನಿಂತಲ್ಲೆ ತೂಕಡಿಸುತ್ತಾಳೆ, ಬಿದ್ದಗಿದ್ದಾಳು.

ಹೆಂಡತಿ : ಮತ್ತೆ ನಿಮ್ಮ ಪಲ್ಯಾ ಏನು? ಒದ್ದಾಡ್ತಾ ಇದ್ದಾನೆ ಟೊಂಕದಮೇಲೆ.

ಗಂಡ : ಏ ಸುಮ್ಕಿರೋ. (ದನಿ ಬದಲಿಸಿ) ನಿಂಗೆ ಶರಬತ್ತು ಕುಡಿಸ್ತೀನಿ. ಏ ಗಂಗಿ, ಕಣ್ಣು ತೆರೆ. ನಿಂಗೆ ಐಸ್ ಕ್ಯಾಂಡೀ.

ಗಂಗಿ : ಎಲ್ಲಿ ಎಲ್ಲಿ ಕ್ಯಾಂಡಿ? ನಂಗೆ ಕೊಡು, ಕೊಡು ನಂಗೆ.

ಹೆಂಡತಿ : ಏ ಓಡಬ್ಯಾಡ ಅಪ್ಪನ ಕಡೆ. ಅಕೋ ಮತ್ತೊಂದು ಬಸ್ಸು ಬಂತು. ಗುಂಡಾ ತಡಿ, ಅವನ್ ಹಿಡಿ–

ಗಂಡ : ನಿನ್ನ ಗುಂಡ ದೊಡ್ಡ ಪೈಲವಾನ-ಬಸ್ ಹಿಡಿದಿಡ್ತಾನ. ಈ ಬಸ್ಸು ನಿಲ್ಲಲೇ ಇಲ್ಲ.

ಹೆಂಡತಿ : ನಮ್ಮ ಅದೃಷ್ಟ.

ಗಂಡ : ಅದೃಷ್ಟ ಏನು ಬಂತೇ? ಈ ಇದ್ದಾರಲ್ಲ ಈ ನತದೃಷ್ಟರು. ನಾವಿಬ್ಬರೇ ಇದ್ದರೆ ಆ ಬಸ್ ನಮ್ಮನ್ನ ಬಿಟ್ಟುಹೋಗ್ತಿದ್ದಿಲ್ಲ. ಈ ಪಟಾಲಂ ಬೇರೆ.

ಹೆಂಡತಿ : ಸಾಕು ಸುಮ್ನಿರಿ. ನೀವೇ ಅವರಿಗೆ ಸರ್ಕಸ್ ತೋರಿಸ್ತಿನಿ ಎಂತ ಕರ ಕೊಂಡು ಬಂದ್ರಿ–ಮ್ಯಾಟನಿ ಶೋಗ.

ಗಂಡ : ಹೂಂ ತಂದೆ ತಂದೆ ಆದ ತಪ್ಪಿಗೆ. ಬೇರೆ ಏನಿದೆ ಅವರಿಗೆ ಮನರಂಜನೇ?

ಗುಂಡ : ಅಪ್ಪಾ ಕಾಲು ಸೋತು ಬಂದ್ವು.

ಗಂಗಿ : ಅವ್ವಾ ಮನಗೆ ಹೋಗ್ವಾ.

ಹೆಂಡತಿ : ಅದಕ್ಕೇ ನಿಂತೀವಿ ಬಸ್ ಕಾಯ್ತಾ.

ಗಂಡ : ಅಲ್ಲೋ ಮುಳ್ಯಾ, ನಿಂತಲ್ಲೆ ಕಾಲು ಸೋತು ಬಂದ್ವು. ಅಂದಾಗ ಮನೆ ತನಕ ಹೇಗೆ ಹೋಗಾಂವ ನೀನು?

ಗುಂಡ : ಆ ಬೆಂಚಿನ ಮ್ಯಾಲ ಕೂಡ್ರೋಣ.

ಗಂಗಿ : ಹೂಂ ನಡಿ ಅಮ್ಮಾ, ಅಲ್ಲಿ ಕೂತು ಐಸ್‌ಕ್ಯಾಂಡೀ....

ಗಂಡ : ಎಲಾ ಇವಳಾ ! ಮರೀಲೇ ಇಲ್ಲ ಕ್ಯಾಂಡಿ,

ಹೆಂಡತಿ : ಮರೆಯೋರು ನೀವು. ನಿನ್ನೆ ನಮ್ಮ ಕಿಟ್ಟ್ಯಾನ್ ಬಸ್ಸಿನಲ್ಲೇ ಬಿಟ್ಟು ಬಂದಿದ್ರಿ !

ಗಂಡ : ಇಲ್ಲೇ, ಕೈಹಿಡಿದು ಬಂದಿದ್ನಲ್ಲಾ.

ಗುಂಡ : ಅಂವ ನೆರೆಮನೆ ದತ್ತೂ.

ಗಂಡ : (ಗಾಬರಿ) ಅಯ್ಯೋ ! ಹಾಗಾದ್ರೆ ಕಿಟ್ಟ್ಯ ? ಕಿಟ್ಟ್ಯ ಬರಲಿಲ್ವೆ ? ಪೋಲಿಸರಿಗಾದ್ರೂ....

ಹೆಂಡತಿ : ಸಾಕು ಸುಮ್ನಿರಿ. ಇದು ನಿನ್ನೆ ಸುದ್ದಿ. ಕಿಟ್ಟ್ಯ ಹಿಂದಾಗಡೆ ಬಂದ ಮುಟ್ಟಿದಾ.

ಗಂಡ : ಮುಟ್ಟಿದ್ನೆS ! ಆರಾಮಃ ಆತುಬಿಡು. ಆದರೆ ನಮ್ಮ ಬಸ್ಸು ? ಇನ್ನೂ ಬಂದು ಮುಟ್ಟೀ ಇಲ್ಲಾ.

ಗಂಗಿ : ಅಮ್ಮಾ. (ಅಳಲು ಆರಂಭ) ಕಾಲು ಸೋತವು. ಅಲ್ಲಿ ಹಾಟೀಲಗೆ ಹೋಗೋಣು

ಗಂಡ : ಅಲ್ಲೇ ಸರ್ಕಸ್ ನೋಡಿಬಂದಿ ಮತ್ತೆ. ಅವರ್ಹಾಂಗೆ ಕಸರತ್ತ ಕಲೀಬೇಕಃ. ಆ ರಿಂಗಿನಾಗ ಹೆಣಮಕ್ಳು ಒಂಟಿ ಕಾಲ ಮೇಲೆ ಏನೆಲ್ಲ ಮಾಡಿ ಕಾಣಸ್ತಾರ !

ಗಂಗಿ : ಅಪಾ, ಅಪಾ ! ನಾಃ ಸರ್ಕಸ್ ಸೇರ್ತೀನಿ-ಬರೋ ಮೇ ಸೂಟ್ಯಾಗ.

ಗಂಡ : (ದೊಡ್ಡ ಶ್ವಾಸ) ಸದ್ಯಕ್ಕಿಲ್ಲವಲ್ಲೋ ! ಆಯ್ತು ಹಾಂಗಾರ.

ಹೆಂಡತಿ : ಸದ್ಯ ಇಕೊ ಬಸ್ ಬಂತು.

[ಬಸ್ಸು ನಿಲ್ಲುವ ಸದ್ದು]

ಗಂಡ : ಬಂದೇ ಬಿಡ್ತು. ಬನ್ನಿ ಮಕ್ಕಳೀ. ಮನೆಗೆ ಹೋಗ್ವಾ.

ಕಂಡಕ್ಟರ : ಹಾಂ ತಡೀರಿ, ತಡೀರಿ. ನುಗ್ಗಬೇಡ್ರಿ. ಜನಾ ಇಳೀಲಿ. ಹಾಂ ಇಳೀರಿ ಕೆಳಗೆ. ಇನ್ನೂ ಯಾರಾದರೂ ಇದ್ರೆ ಹತ್ತಿ. ಇಬ್ಬರಿಗೇ ಜಾಗ ಐತಿ. ಏ ಇಳೀ ಕೆಳಗೆ. ಇಬ್ರಂದ್ರೆ ಇಬ್ರು ! (ಗದರಿಸುತ್ತಾನೆ)

ಗಂಡ : ಅಲ್ರೀ ಕಂಡಕ್ಟರ ಸಾಬ್ರೆ! ನಾವು ಈ ನಮ್ಮ ಮಕ್ಕಳನ್ನು ಬಿಟ್ಟು ಹ್ಯಾಂಗ ಹತ್ತೋದ್ರಿ ?

ಕಂಡಕ್ಟರ : (ಅಣಕಿಸುತ್ತ) ಅಲ್ರಿ ರಾಯರೇ, ಮತ್ತೆ ಈ ಮಕ್ಕಳನ್ನು ಕಟ್ಕೊಂಡು ಯಾಕೆ ತಿರುಗಾಡಬೇಕ್ರಿ ? ಬಸ್ ಫುಲ್. ಹಿಂದಾಗಡೆ ಬನ್ನಿ. ಕ್ಷಮಿಸಿ. (ಗಂಟೆ ಬಾರಿಸುತ್ತಾನೆ. ಬಸ್ ಹೊರಡುತ್ತದೆ.)

ಹೆಂಡತಿ : ನಮ್ಮ ಪ್ರಾರಬ್ಧ ! ನಾವು ಮನೆ ಬಿಟ್ಟ ಮುಹೂರ್ತನೇ ಕೆಟ್ಟಿರ ಬೇಕು.

ಗಂಡ : ಅಲ್ಲೇ ಹುಚ್ಚಿ, ಹಾಂಗ ನಾವು ರಾಹುಕಾಲ ತಪ್ಪಿಸಿಕೊಂಡೇ ಹೋಗಿದ್ವಿ. ಇರಲಿಬಿಡು. ಆದದ್ದಾಯ್ತು. ನಾ ಒಂದು ಹೇಳಲೇ ? ನಾವು ಮನೆ ಬಿಟ್ಟದ್ದಲ್ಲ. ನೀ ತವರಮನೆ ಬಿಟ್ಟ ಮುಹೂರ್ತನೇ ತಪ್ಪಿತ್ತು.

ಹೆಂಡತಿ : ಅಂದ್ರೆ, ಇದೇನು ಕೆಟ್ಟ ಮಾತು (ಬಿಕ್ಕು).

ಗಂಡ : ಛೀ ಛೀ ಅಳಬ್ಯಾಡ ಮತ್ತೆ. ಕಣ್ಣು ಒರ್ಸಕೊ. ಬರೆ ತಮಾಷೆ ಮಾಡ್ದೆ ಇಲ್ಲಿ ನೋಡು. ನಮ್ಮ ಮದುವೆ ಆಗದಿದ್ದರ ಈ ಮಕ್ಕಳು ಹುಟ್ಟತಿದ್ವೆ ? ಈ ಮಕ್ಕಳಿಂದಲ್ವೆ ನಮಗೀಗ ಬಸ್ ತಪ್ಪಿದ್ದು.

ಹೆಂಡತಿ : ಸಾಕು ಸುಮ್ನಿರಿ. ಈ ಮದುವೆ ಏನು ? ನೀವು ಯಾರನ್ನೇ ಮದುವೆ ಆದ್ರೂ ಈ ಮಕ್ಕಳ ಕಾಟ ತಾಳಿ ಕರಿಮಣಿಗಳ ಹಾಂಗೇ ಕೊರಳಿಗೆ ಬರೂದೆ !

ಗಂಡ : (ನಕ್ಕು) ಇದು ಸರಿ ಅಂದಿ ನೋಡು. ಜಾಣೆ ಮಾತು. ಈ ಮಕ್ಕಳನ್ನ ನೋಡು. ಎಲ್ಲ ಕರಿ ಕರಿ ಮಣಿಗಳೇ.

ಹೆಂಡತಿ : ಇರ್ಲಿಬಿಡಿ. ಬಸ್ಸಂತೂ ಹೋತು. ಈಗ ಮಕ್ಕಳಿಗೆ–

ಗಂಡ : ಹೂಂ ಬನ್ನಿ ಮಕ್ಕಳೇ. ಹಾಟೇಲಿಗೆ ಹೋಗಿ ಊಂಡಿನೋ ಕ್ಯಾಂಡಿನೋ ಶರಬತ್ತೋ ತಕೊಳ್ಳನ ಆಮೇಲೆ ನಡಕೊಂಡೆ ಹಾದಿ ಹಿಡಿಯೋಣು ನಡಿ ಗಂಗಿ, ನಡಿ ಗುಂಡ.

ಗಂಗಿ, ಗುಂಡ : ರೈಟ್ ಲೆಫ್ಟ, ರೈಟ್ ಲೆಫ್ಟ ಓಂಡಿಕ್ಯಾಂಡಿ. (ಕೇಕೆ ಹಾಕ್ತಾ) ಥಂಡಾ ಶರ್ಬತ್ ರೀ.

ಹೆಂಡತಿ : ಸುಮ್ಮನಿರ್ರಿ, ಏನ್ ಕೂಗ್ತೀರಿ ! ಅಲ್ರೀ ಇವರದಂತೂ ಆತು. ನಾವು ನಿಧಾನವಾಗಿ ನಡಕೊಂಡು ಹೋಗೋತನಕ ಅಲ್ಲಿ ರಂಗ, ಚಂದ್ರಿ ಶಾಲೆ ಯಿಂದ ಬಂದು ಕಾದಿರ್ತಾರೆ. ಪಾಪ ! ಅವು ಹೊಟ್ಟೆಗೆ —ಹೋಗೇ ಕಾದಿ ರ್ತಾರೆ.

ಗಂಡ : ಕಾದಿರ್ಲಿ. ಕಾದಾಡ್ತಾ ಇರ್ಲಿ, ಸದ್ಯ ಅವರ ಚಿಂತಿ ಬ್ಯಾಡ. ದಾಸರೇ ಹೇಳ್ಯಾರ ಅದೇನೋ ಗುಂಡ, –'ಪುಟ್ಟಿಸಿದ ಸ್ವಾಮಿ'—

ಗುಂಡ : ಅಪ್ಪಾ ನಂಗೆ ಬರ್ತದ ಆ ಪದ, ಚಂದ್ರಿ ಕಲಸ್ಯಾಳ. ನಾ ಹೇಳ್ತೀ.
(ದೊಡ್ಡ ದನಿ ತೆಗೆದು ಸರಾಗವಾಗಿ)
"ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಮತ್ತೆ ರಕ್ಷಿಸನೆದಕೆ ಸಂದೇಹ ಬ್ಯಾಡಾ".

ಹೆಂಡತಿ : ಏ ಮೂಳಾ ಮುಚ್ಚು ಬಾಯಿ. ಯಾರಾದರೂ ಕೈಗೆ ಕಾಸು ಇಟ್ಟಾರು. ಬಸ್ ಸ್ಟ್ಯಾಂಡಿನಲ್ಲಿ ಸದಾ ಹಾಡ್ತಾ ಬಿಕ್ಕೆ ಬೇಡೋಂವಾ-ಅಂತ.

ಗಂಡ : ಇರಲಿ ಬಿಡು. ಆದ್ರೆ ಇಲ್ಲಿ ಈ ಮಕ್ಕಳ ರಕ್ಷಣೆ ಚಿಂತೆ ನಂದು ಇವರ ಪುಟ್ಟಿಸಿದವ ಆ ಸ್ವಾಮಿ ಅಲ್ಲ, ಈ ಅಸಾಮಿ ಅಲ್ವೇನೇ ಯಜಮಾನಿ?

ಹೆಂಡತಿ : (ನಾಚಿ ನಕ್ಕು) ಇಶ್ಶಿ ಇವೇನು? ಭಂಡ ಮಾತು ಬಸ್‌ಸ್ಟಾಂಡಿನಾಗ? ಸುಮ್ನಿರಿ. ಹೊಟೆಲ್ ಬ್ಯಾಡ ಮನಿಗೇ ನಡೀರಿ ಮಕ್ಕಳ ರಕ್ಷಣೆ ಚಿಂತಿ ಹೊತ್ತಾವರು ನೀವು!

ಗಂಡ : ಆಯ್ತು ಮ್ಯಾಡಂರಾಯ್ತು! ಅಕೋ ಆ ಮುಂದಿನ ಸ್ಟಾಪಿಗೆ ಹೋಗೋಣ. ಅಲ್ಲಾದರೂ ನಮ್ಮ ಅದೃಷ್ಟ ನಿನ್ನ ಪ್ರಾರಬ್ಧ ಖುಲಾಯಿಸ್ತದೋ, ಬನ್ನಿ ಮಕ್ಕಳೇ

(ಮಕ್ಕಳ ಗೊಣಗಾಟ, ಕಿರುಚಾಟ, 'ನಾ ಒಲ್ಲೆ', 'ನಂಗೆ ಕ್ಯಾಂಡಿ' 'ಶರ ಬತ್ತು'. 'ನಾ ನಡೆಯೊಲ್ಲಾ'-ಇತ್ಯಾದಿ)

ಹೆಂಡತಿ : ಹೂಂ ನಡೀರಿ ಮಕ್ಕಳೆ, ಶಾಣೆ ಮಕ್ಕಳು. ಅಲ್ಲದೆ ಹಾಟೇಲು ಇದಕೂ ದೊಡ್ಡದು. ಅಲ್ಲೇ ತಿನಿಸೋಣ, ಕುಡಿಸೋಣ. ಬಸ್ಸು ಸಿಗಭೌದು. ನಡೆಯೋದು ತಪ್ಪೀತು. ಒಂದು ಚಾನ್ಸು....

(ಹಿಂದಿನಿಂದ ಒಂದು ಕಾರು ಬಂದು ಅವರ ಬಳಿ ನಿಲ್ಲುವ ಸದ್ದು)

ಕಾರಿನಿಂದ ದನಿ : ಯಾರು, ಶಾಮಣ್ಣೋರೇ? ಮತ್ತೆ ಕಾವೇರಮ್ಮ? ಬನ್ನಿ. ಅರೇ ಗಂಗಾ ತುಂಗಾ ಗುಂಡಾ ಪುಂಡಾ-ಎಲ್ಲ ಇದಾರಲ್ಲ. ಎಲ್ಲಿಗೆ ಹೊಂಟಿತ್ತು ನಿಮ್ಮ ಸರ್ಕಸ್ಸು?

ಗುಂಡ-ಗಂಗಿ : ಸರ್ಕಸ್ ನೋಡಲಿಕ್ಕೆ. ನೋಡಿ ಬಂದ್ವಿ.

ಶಾಮಣ್ಣ : ನಮಸ್ಕಾರ ಡಾ. ಭೀಮರಾವ್.

ಕಾವೇರಮ್ಮ : ನಮಸ್ತೆ ಡಾಕ್ಟರ್ರೇ, ಉಪಕಾರ ಆಯ್ತು. ಗಂಟೆಗಟ್ಲೆ ಬಸ್ಸಿಗಾಗಿ ಕಾದು ಕಾದು ಕೈಕಾಲೇ ಹೋದ್ವು.

ಶಾಮಣ್ಣ : ಈ ಮಕ್ಕಳ ಕಾಟ ಬೇರೆ!

ಡಾಕ್ಟರ : ಅದನ್ಯಾಕೆ ಹೇಳ್ತೀರಿ? ಯಾರಿಗೆ ಹೇಳ್ತೀರಿ. ಮಕ್ಕಳು ಆಗೋ ಮೊದಲು ಆಟ. ಆದಮೇಲೆ ಕಾಟ (ಎಲ್ಲ ನಗು)

ಶಾಮಣ್ಣ : ಏ ಮಕ್ಕಳೆ ಗದ್ಲ ಮಾಡಬೇಡಿ. ಸರಿಯಾಗಿ ಕೂಡ್ರಿ. ನುಗ್ಗ ಬೇಡ್ರಿ. ಯಜಮಾನಿ ಹೂಂ ನಿಂತೆ ಏನು. ನೀ ಮುಂದಾಗು.

ಕಾವೇರಮ್ಮ : ನಾ ಒಲ್ಲೆ, ನೀವೇ ಮುಂದಾಗಿ.

ಡಾಕ್ಟರ: ಇಬ್ಬರೂ ಕೂಡೇ ಒಳ ನುಗ್ಗಿ (ನಗು) ಇಲ್ಲವಾದ್ರೆ ಇಬ್ಬರೂ ನಡ ಕೊಂಡು ಬನ್ನಿ. ನಾ ಹೊರಟೆ. ಈ ಮಕ್ಕಳ ಲಗೇಜು ಹೊತ್ಕೊಂಡು. ಏ ಗುಂಡಾ, ಗಂಗಿ ಬನ್ನಿ ಮುಂದೆ.

(ಮಕ್ಕಳ ಗಲಾಟೆ–'ನಾ ಮುಂದು,' 'ನಾ ಮುಂದೆ' ಕೇಕೆ)

ಕಾವೇರಮ್ಮ: ಇಲ್ಲಿ ತನ್ನಿ ಪಲ್ಯಾನ.

ಡಾಕ್ಟರ: ಪಲ್ಯಾ, ಪಲ್ಯಾ ಬೇರೆ ಕಟ್ಕೊಂಡು ಬಂದ್ರೇನು ಹೋಟೆಲಿನಿಂದ–ರಾತ್ರಿ ಊಟಕ್ಕೆ?

ಶಾಮಣ್ಣ: (ನಗು) ಅಲ್ರೀ, ನಮ್ಮ ಪಲ್ಯಾ ಈ ಆರನೇ.....

ಕಾವೇರಮ್ಮ: ಅಲ್ರೀ, ಐದನೇದುವ.

ಡಾಕ್ಟರ (ಗಟ್ಟಿಯಾಗಿ ನಕ್ಕು) ಏನ್ರೀ, ನಿಮ್ಮ ಮಕ್ಕಳ ಸಂಖ್ಯೆ ಗೊತ್ತಿಲ್ಲ!

ಶಾಮಣ್ಣ: ಅದೇನಂತೀರಿ ಡಾಕ್ಟರ್ರೀ! ಬಡವರ ಮಕ್ಕಳ ಲೆಕ್ಕ ಆ ಚಿತ್ರಗುಪ್ತ ನಿಗೂ ಸಿಕ್ಕಾ!

ಡಾಕ್ಟರ: ಇರ್ಲಿ ಬಿಡಿ. ಸರಿಯಾಗಿ ಕೂತ್ಕೊ, ರ್‍ಯಾಟ. ಏ ಗಂಗೀ ಸ್ವಿಚ್ ಮುಟ್ಟ ಬೇಡ. ಎಲೇ ಗುಂಡಾ ಸ್ಟೇರಿಂಗ್ ನನಗಿರಲಿ. ಗುಂಡಿನ ಹಾಂಗೆ ಕೂತಿರು. ಓ. ಕೇ.

ಕಾವೇರಮ್ಮ: ಬ್ಹಾಳ ಉಪಕಾರ ಆತ್ರಿ. ಇವರನ್ನೆಲ್ಲ ಕಟ್ಕೊಂಡು ನಡೆದು ಹೋಗೋದು. ಜೀವಕ್ಕೇ ಬಂದಿತ್ತು.

ಡಾಕ್ಟರ: (ಗಾಡಿ ಚಾಲೂ ಮಾಡಿ) ಉಪಕಾರ ಏನು ಬಂತು? ನಿಮ್ಮ ಮನೆ ಹಾದೀಲೆ ಹೊರಟವ ನಾನು. ನೀವೂ ನಮ್ಮ ಪೇಶೆಂಟು. ನಿಮ್ಮನ್ನ ಮನೆ ಮುಂದೆ ಇಳಿಸಿ ಹೋಗ್ತೇನೆ ಆತು.

(ಗಾಡಿ ಹೊರಡುತ್ತದೆ).

ಗುಂಡಾ: ಡಾಕ್ಟರ ಮಾಮಾ, ಹಾರ್ನು ಮಾಡ್ರೀ.

ಡಾಕ್ಟರ: ಎಲಾ ಚೋಟೀ (ಹಾರ್ನ ಮಾಡ್ತಾನೆ)

ಕಾವೇರಮ್ಮ: ಪೇಶಂಟ ಅಂದ್ಹಾಂಗ....ಸಂಜೆಗಡೆ ನಮ್ಮ ಮನೆಗೊಮ್ಮೆ ಬಂದು ಹೋಗಿ–ಮತ್ತೇನಿಲ್ಲ ಕಾಫಿಗೆ.

ಡಾಕ್ಟರ: ಬರೇ ಕಾಫೀ ಒಂದೇ ಅಲ್ಲ, ವಿಜಟ ಫೀನೂ ಬೇಕು.

ಶಾಮಣ್ಣ: ಹೌದು ಭೀಮರಾವ್. ನಮ್ಮ ಕಾವೇರಿ ಅದೇಕೊ ಇತ್ತಲಾಗಿ ಬಹಳ ನಿಶ್ಶಕ್ತಿ ಅಂತಾಳ. ಬಂದು ಒಮ್ಮೆ ಅವಳನ್ನು ತಪಾಸ ಮಾಡಿದ್ರೆ ನೆಟ್ಟಗಿತ್ತು.

ಡಾಕ್ಟರ: ಆಲ್ ರೈಟ. ಸಂಜೆಗೆ ನೋಡೋಣ. (ಕಾರು ವೇಗದಿಂದ ಓಡುವುದು).

೨

[ಸಂಜೆ ಶಾಮಣ್ಣನ ಮನೆಯಲ್ಲಿ ಮಕ್ಕಳ ಭಜನೆ ನಡೆದಿದೆ. 'ರಘುಗತಿ ರಾಘವ ರಾಜಾರಾಮ! ಪತಿತ ಪಾವನ ಸೀತಾರಾಮ!']

ಶಾಮೇಲಮ್ಮ : ಮಕ್ಕಳೆ ಇನ್ನು ಸಾಕು ನಿಮ್ಮ ಭಜನೆ. ಹೂಂ ಬೇಗ ಮುಗಿಸಿ.
(ಅವರು ಜೋರಾಗಿ ಹಾಗೆಯೇ ಅದನ್ನು ಮುಂದುವರಿಸುತ್ತಾರೆ)
["ಈಶ್ವರ ಅಲ್ಲಾ ತೇರೇನಾಮ! ಸಬಕೊ ಸಂತತಿ ದೇ ಭಗವಾನ್"]

ಶಾಮಣ್ಣ : (ನುಗ್ಗಿ ಬಂದು) ಲೇ, ಲೇ! ಏ ಮುಠ್ಠಾಳರೇ, ಇದೇನು ಹಲಬುತ್ತೀರಿ? ಇದೇನ ಭಜನೆಯೋ, ಅಧ್ವಾನವೊ? ಬಾಯಿ ಮುಚ್ಚಿ. ಲೇ ನೀನೂ ಕೇಳ್ತಾ ನಿಂತು ಬಿಟ್ಟಿದ್ದಿಯೇನೇ?

ಶಾಮೇಲಮ್ಮ : ಮಕ್ಕಳು ಮುದ್ದಾಗಿ ಹಾಡ್ತಾರೆ!

ಶಾಮಣ್ಣ : ಏನು ಹಾಡ್ತಾರೇ ಸರಿ ಕೇಳೋದಿಲ್ವೇ? ನಿನ್ನ ಕಿವೀನೂ ನಿಶ್ಯಕ್ತ ಆಗಿರಬೇಕು "ಸಬಕೋ 'ಸಂತತಿ' ದೇ ಭಗವಾನ್" ಅಂತಿದ್ದಾರಲ್ವೇ!

ರಂಗ, ಗಂಗಾ : ಮತ್ತೇನು ಸಾಬಕೋ ಸಂತತಿ ಅನ್ನಬೇಕೇ? ಹಾಗೇ ಅಂತಿದ್ದೆ. ಅಮ್ಮನೇ 'ಸಬಕೊ' ಅಂತ ಕಲಿಸಿದರು.

ಶಾಮಣ್ಣ : ಮುಗ್ದೇ ಹೋಯ್ತು! ನಮಗೆ ಸಂತತಿ ಆದದ್ದೇ ರಗಡ ಆಯ್ತು. ಇನ್ನು ಆ ಸಾಬನಿಗೂ ಈ ಶಾಪ ಬೇಡ. 'ಸಂತತಿ' ಅಲ್ರೊ, 'ಸನ್ಮತಿ'

ಗುಂ 'ಸಣ್ಮತಿ' ಅಂದ್ರೆ ಸಣ್ಣ ಬುದ್ಧಿಯೋ ಅಪ್ಪಾ?

ಶಾಮೇಲಮ್ಮ : (ನಕ್ಕು) ಅಲ್ಲ ಮರಿ. ಸನ್ಮತಿ ಅಂದರೆ ಒಳ್ಳೆ ಬುದ್ಧಿ. ಸಂತತಿ ಅಲ್ಲ ಕಣ್ರೋ, ಸಣ್ಮತಿನೂ ಅಲ್ಲ. ನಾ ಹೇಳ್ತೀನಿ ಜತೇಲಿ ಕೇಳಿ ಹೇಳ್ರಿ.
(ಅವಳು 'ರಾಮಧುನ' ಸರಿಯಾಗಿ ಹೇಳಿ ಹಾಡಿಸುತ್ತಾಳೆ.)
(ಡಾ. ಭೀಮರಾವ್ ಪ್ರವೇಶ)

ಡಾಕ್ಟರ : ಏನ್ ಚೆಂದ. ಏನ್ ಇಂಪು! ಮನೆಯಲ್ಲೇ ಸೊಗಸಾದ ಬಾಲವಾಡಿ!

ಶಾಮೇಲಮ್ಮ : ಅರೆ ಡಾಕ್ಟರು ಬಂದೇ ಬಿಟ್ಟರು. ಬಂದದ್ದೇ ಗೊತ್ತಾಗಲಿಲ್ಲ ಸಾರಿ

ಡಾಕ್ಟರ : ಬಂದ ಬಗ್ಗೆ ಸಾರೀನೋ! (ನಕ್ಕು) ನಿಮ್ಮ ಭಜನೆ ಬ್ರಹ್ಮಾನಂದದಲ್ಲಿ ನಮ್ಮ ಕಾರಿನ ಸದ್ದು ಎಲ್ಲಿ ಕೇಳಿಸ ಬೇಕು? ನಡೀಲಿ, ನಡೀಲಿ. ಕೈಲಾಸಂ

ಅಂದಿದ್ರು ಮಕ್ಕಳ ಶಾಲೆ ಮನೇಲಿ–ಎಂತ.

ಶಾಮಣ್ಣ : ಸರಿ ಹೋಯ್ತು. ಅದಕ್ಕಾಗಿ ಒಂದು ಶಾಲೆಗೆ ಆಗುವಷ್ಟು ಮನೆತುಂಬ ಮಕ್ಕಳ ಹಡೆದರಾಯಿತು.

ಕಾವೇರಮ್ಮ : ಇನ್ನು ಭಜನೆ ಸಾಕು ಹೋಗಿ ಮಕ್ಕಳೆ, ಹೊರಗೆ ಆಡಿ.

(ದೊಡ್ಡ ಮಕ್ಕಳು 'ಗುಡ್ ಈವ್ನಿಂಗ್ ಡಾಕ್ಟರ ಮಾಮಾ!' ಎಂದು ಹೇಳಿ ಹೊರಡುತ್ತಾರೆ.)

ಡಾಕ್ಟರ : ಗುಡ್ ಈವ್ನಿಂಗ್ ರಂಗs!

ರಂಗ : ಸ್ವೀರಿ ಗುಡ್ ಈವ್ನಿಂಗ

ಗುಂಡ : ಸ್ವೀರಿ ಸ್ವೀರಿ ಗುಡ್ ಈವ್ನಿಂಗ

ಡಾಕ್ಟರ : ಮತ್ತೆ ನೀನ್ ಗಂಗೀ–ಸ್ವೀರಿ ಸ್ವೀರಿ ಸ್ವೀರಿ?

ಕಾವೇರಮ್ಮ : ನಮ್ಮ ಗಂಗೀ ಇನ್ನೂ ಕಾನ್ವೆಂಟ್ ಕಟ್ಟೆ ಹತ್ತಿಲ್ಲ. ರಂಗ ಹೋಗ್ತಾನೆ ಕಾನ್ವೆಂಟಿಗೆ. ಅಲ್ಲಿ ಎಲ್ಲಾ ಇಂಗ್ಲೀಷೆ.

ಡಾಕ್ಟರ : ಹೌದೆ? ಹಾಗಾದ್ರೆ ಹೇಳು ರಂಗ ನಿಂಗೆ ಇಂಗ್ಲೀಷ ಮಾತಾಡಲು ಬತ್ತದೇನೋ?

ರಂಗ : (ನಾಚಿ) ಸ್ವಲ್ಪ ಸ್ವಲ್ಪ ಬರ್ತದೆ.

ಶಾಮಣ್ಣ : ಹಾಂಗಾದರೆ ಅದನ್ನೇ ಹೇಳು ಮತ್ತೆ ಇಂಗ್ಲೀಷಿನಲ್ಲೇ! ಹೂಂ

ರಂಗ : ಲಿಟ್ಲ ಲಿಟ್ಲ ಇಂಗ್ಲಿಷ ಕಂ ಟು ಮಿ!

ಕಾವೇರಮ್ಮ : ಏ ಮಳ್ಳಾ, 'ಕಂ' ಅಲ್ಲ, 'ಕಮಿಂಗ್' ಅನ್ನು.

ಡಾಕ್ಟರ : ಓ ಗಾಡ್! ಇದು ನಮ್ಮ ಮಕ್ಕಳ ಇಂಗ್ಲೀಷು ಶ್ಯಾಮಣ್ಣ. ನಾ ಹೇಳ್ತೀನಿ. ಬ್ರಿಟಿಷರು ಸ್ವರಾಜ್ಯ ಕೊಟ್ಟು ದೇಶ ಬಿಟ್ಟು ಹೋದದ್ದು ನಮ್ಮ ಮಕ್ಕಳ ಇಂಗ್ಲಿಷಿಗೆ ಹೆದರಿಕೊಂಡೇ! (ಎಲ್ಲರೂ ನಗುತ್ತಾರೆ.)

ಶಾಮಣ್ಣ : ಇನ್ನು ಮಕ್ಕಳೇ ಹೊರಗೆ ಓಡಿ ಆಡಿ.

ಕಾವೇರಮ್ಮ : ಡಾಕ್ಟರ, ಈ ಮಕ್ಕಳನ್ನು ಒಮ್ಮೆ ಪರೀಕ್ಷಿಸ್ತೀರಾ?

ಡಾಕ್ಟರ : ಓ ಅದೇನು ದೊಡ್ಡ ಮಾತು? ಆದರೆ ವ್ಹಾಟ ಈಜ ರಾಂಗ?

ಶಾಮಣ್ಣ : ರಾಂಗೇನು, ಬಹಳ ಮಕ್ಕಳಾಗಿದ್ದೇ ರಾಂಗ–ಅನ್ನೋರು ನೀವು! ಒಬ್ಬನಿಗೆ ಉಚ್ಚಾರ ಚಲೋ ಇಲ್ಲ, ಒಬ್ಬನಿಗೆ ಲಿವ್ಹರ ಕೆಟ್ಟಿದೆ. ಪುಟ್ಟ್ಯಾಗೆ ರಿಕೆಟ್ಸ.

ಡಾಕ್ಟರ : ಅಲ್ವೆ ಮತ್ತೆ ಕರೀರಿ ಅವರನ್ನು.

ಶಾಮಣ್ಣ : ಏ ರಂಗಾ, ಗುಂಡಾ, ಗಂಗೀ, ಕಲ್ಯಾ, ಪುಟ್ಟೀ

ಕಾವೇರಮ್ಮ : ಶೀ ಷಷ್ಟಿ ಬರ್ತಾಳೆ, ಆ ಮಗು ಹೊಟ್ಟೆಲಲ್ಲಿದೆ.

ಶಾಮಣ್ಣ : ಉಳಿದವರೆಲ್ಲ ಬನ್ನಿ.

ಕಾವೇರಮ್ಮ : ಅಂದರೆ ನಮ್ಮ ಮಕ್ಕಳು ಇಷ್ಟೇನಾ ? ಚಂದ್ರಿ ಇದಾಳೆ, ಕಿಟ್ಟೂ ಇದ್ದಾನೆ ಬಾಪ್ಪೂ.

ಶಾಮಣ್ಣ : ಹಾಂ ಹಾಂ ಬಾಪೂ ಗೋಖಲೆ ಟಿಳಕ ಲಾಲ ಪಾಲ ಘೋಷ (ಗಂಡಸರ ನಗು)

ಕಾವೇರಮ್ಮ : ಸಾಕು ಬಿಡಿ ನಿಮ್ಮ ಹಾಸ್ಯ.

ಡಾಕ್ಟರ : ಅಲ್ಲಾ ಶ್ಯಾಮಣ್ಣಾ, ಇದೆಂಥಾ ಮರೆವೋ, ಹೆತ್ತ ಮಕ್ಕಳ ತಂದೆಯಾಗಿ

ಶಾಮಣ್ಣ : ಹೆತ್ತವಳು ಇವಳು. ನಾನಲ್ಲ, ನಂಗೆ ಸಂಸಾರ ತಾಪತ್ರಯ. ಹೆತ್ತವಳಿಗೇ ಗೊತ್ತಿರಬೇಕು ಮಕ್ಕಳ ಲೆಕ್ಕ

ಡಾಕ್ಟರ : ನಮ್ಮ ಕವಿವರ್ಯರೇ ಹೇಳಿಲ್ವೇ-'ನಾ ಹೆತ್ತ ಡಿಂಭಗಳ ಲೆಕ್ಕ, ಯಮಾ ನೋಡಿ ನಕ್ಕ' (ನಗುತ್ತಾನೆ.)

ಶಾಮಣ್ಣ : ಅದು ಹಳೇ ಕತೆ ಆಯ್ತು. ಇಂದು ಯಮಾ ಅಳ್ತಾನ. ಯಮನ ಲೋಕದಲ್ಲಿ ನಮ್ಮ ಸತ್ತವರ ಗರ್ದಿ ವಿಪರೀತ. ಅಲ್ಲಿ ಹೊಸ ಬಡಾವಣೆ ಕಟ್ಟಲಿಕ್ಕೆ ಹೇಳ್ಯಾನಂತ ವಿಶ್ವಕರ್ಮಂಗೆ!

ಕಾವೇರಮ್ಮ : ಡಾಕ್ಟರೇ, ಕೇಳಿ ಕೇಳಿ ನಮ್ಮವರ ಮಾತು. ನೀವಾರೆ ತುಸು ಬುದ್ಧಿ ಹೇಳ್ರಿ.....

ಡಾಕ್ಟರ : ಬುದ್ಧಿ ಹೇಳಿ ಬರೋದಲ್ಲ. ಅದು ಹುಟ್ಟಾ ಬರಬೇಕು.

ಕಾವೇರಮ್ಮ : ಹಾಗಂದ್ರೆ. ಇವರು ಮತ್ತೆ ಹುಟ್ಟೇ ಬರಬೇಕಾತು.

ಶಾಮಣ್ಣ : ಹೂಂ ನಿಂದೆ ಹೊಟ್ಯಾಗ ಬರ್ತೇನೆ. (ಎಲ್ಲರೂ ನಗುತ್ತಾರೆ).

ಕಾವೇರಮ್ಮ : ಇಶ್ಶಿ ಇದೇನು ಭಂಡಮಾತು!

ಡಾಕ್ಟರ : ಭಂಡ ಗಿಂಡ-ಏನೂ ಅಲ್ಲ, ಕಾವೇರಮ್ಮ! ಶಾಮಣ್ಣ ಅಂದದ್ದು ಖರೇನೆ· ಮದುವೀ ಮಂತ್ರದಾಗೆs ಆ ಮಾತು ಇದೆ. ನಿಮಗೆ ಮರತೇ ಹೋತೇನೊ.

ಶಾಮಣ್ಣ : ಮದವಿ ಆದದಷ್ಟೇ ನಮಗೆ ನೆನಪಿದೆ. ಅಲ್ದೆ ಮದವೀಲಿ ಆ ಮಂತ್ರ ತಂತ್ರ ಎಲ್ಲ ಯಾರಿಗೆ ಗೊತ್ತಿರ್ತಾವ ? ಅವೆಲ್ಲ ಎರಡೂ ಕಡೆ ಭಟ್ಟರ ಬಾಯಲ್ಲೇ ವಟಗುಡ್ತಿರುತಾವ. ವಧೂವರರು ನಾವು ಬರೆ ಮಾಲಿ ಹಾಕ್ಕೊಳ್ತೀವಿ –ಹೋಮದ ಹೊಗೆಯಲ್ಲಿ ಕಣ್ಣು ಮುಚ್ಕೊಂಡು.

ಡಾಕ್ಟರ : ಹೌದು ಬಿಡು, ಅದು ಇನ್ನೊಂದು ಅವಾಂತರ. ನಮ್ಮ ಮದವೀ ಎಲ್ಲ ನಿಜಾನೂ ಭಟ್ಟ ಭಟ್ರ ನಡುವೇನೇ ನಡೆದು ಹೋಗ್ತದೆ.

ಕಾವೇರಮ್ಮ : ಇದಿರ್ಲಿ ಬಿಡಿ. ಆ ಮಂತ್ರ ಆದರೂ ಏನು?

ಡಾಕ್ಟರ : ವಧೂಗೆ ಇಂದ್ರ ಹೇಳ್ತಾನೆ-"ಪತಿಂ ಏಕಾಶಂ ಕೃಧಿ".

ಕಾವೇರಮ್ಮ : ಹಾಗಂದ್ರೆ?

ಶಾಮಣ್ಣ : ಹತ್ತು ಮಕ್ಕಳನ್ನು ಹಡಮು ಗಂಡನನ್ನೇ ಹನ್ನೊಂದನೇ ಮಗಾ ಎಂತ ತಿಳಿ.

ಕಾವೇರಮ್ಮ : ಈ ಮಾತು ಖರೇನ? ಹತ್ತು ಮಕ್ಕಳು ಆಗೋತನಕ ನನ್ನ ಯಜಮಾನ್ರಿಗೆ ಎರಡನೇ ಬಾಲ್ಯ ಶುರು ಆಗ್ತದ. ಅವರು ಮಕ್ಕಳ್ಹಾಂಗನ ಆಗ್ಬಿಡ್ತಾರೆ.

ಶಾಮಣ್ಣ : ಕೇಳ್ದಿರಾ ಭೀಮರಾವ್! ಇದಕ್ಕೇನಂತೀರಿ? ನನ್ನ ಪೀಸ್ ಕಿತ್ತು ಕೈಯಲ್ಲೇ ಕೊಟ್ಟುಬಿಟ್ಲು. ಹೆದರಬೇಡ ಕಾವೇರಿ. ನಾ ಹುಟ್ಟಿ ಬರೋ ಮುಂಚೆ ಹತ್ತು ಮಕ್ಕಳು ಹುಟ್ಟಿರಬೇಕು.

ಡಾಕ್ಟರ : ಅದೇ ಕ್ವಾಲಿಫಿಕೇಶನ್!

ಶಾಮಣ್ಣ : ನಮ್ಮ ಮಕ್ಕಳ ಸಂಖ್ಯಾ ಎಲ್ಲಿಗೆ ಬಂತು? (ಎಣಿಸುತ್ತಾನೆ) ರಂಗಾ, ಗಂಗಾ, ಗುಂಡಾ, ಪಲ್ಯಾ, ಪುಟ್ಟಿ.

ಕಾವೇರಮ್ಮ : ಮತ್ತೆ ಮಿತ್ರಿ-ಕಿಟ್ಟು, ಚಂದ್ರಿ, ಬಾಪೂ

ಶಾಮಣ್ಣ : ಹೋಗಲಿ ಬಿಡು, ತಲೆ ಚಿಟ್ಟು ಹಿಡಿದು ಹೋತು.

ಕಾವೇರಮ್ಮ : (ತಾಳ್ಮೆಗೆಟ್ಟು) ಬಿಡ್ತು ಅನ್ನಿ. ಹೋಗಲಿ ಅಂತ ಯಾರು ಹೋಗಲಿ, ಡಾಕ್ಟರೆ ನಾವೇನು ಮಾಡೋದ್ರೀ. ಹಿರಿಯರ ಹರಕೆ. ಅಷ್ಟ ಪುತ್ರ ಪಂಚಕನ್ಯಾ ಸೌಭಾಗ್ಯವತೀ ಭವ ಅಂತ.

ಡಾಕ್ಟರ : ಆ ಹುಂಡಿ ಒಟ್ಟೂ ಎಷ್ಟು ಮುರಿಸದ್ಹಾಂಗ ಆತು?

ಶಾಮಣ್ಣ : ಹೇಳ್ತೀನಿ. (ಪುಟಪುಟಿಸುತ್ತ) ಐದು ಗಂಡು. ಮೂರು ಹೆಣ್ಣು....

ಡಾಕ್ಟರ : ಆತು ಬಿಡು ಹಾಗಾದ್ರೆ, ಇನ್ನೂ ಬಜೆಟ ಪ್ರೊವಿಜನ್ ಇದೆ ಅನ್ನಿ. ಹೆದರಬೇಡಿ ಇನ್ನ ಎಂಟೇ ಮಕ್ಕಳು. ಶ್ರೀಕೃಷ್ಣ ಎಂಟನೇ ಗರ್ಭ, ಭೀಷ್ಮಾಚಾರ್ಯ ಎಂಟನೇ ಮಗ-ಎಂಥ ಪ್ರಭಾವಶಾಲಿ!

ಶಾಮಣ್ಣ : ಆದರೆ ಡಾಕ್ಟರ್ರೆ, ಅವರಿಬ್ಬರ ಪ್ರತಾಪದ ಹಿಂದೆ ಏಳೇಳು ಶಿಶುಗಳು ಸತ್ತವಲ್ರಿ. ಶಂತನು ಏನು, ವಸುದೇವ ಏನು ಎಂಟೂ ಮಕ್ಕಳನ್ನು ಸಾಕಿ ಬೆಳೆಸಲಿಲ್ಲ-ನಮ್ಮಂಗ-ಏನೇ ಯುಜಮಾನಿ ಹೌದಂತಿಯೋ ಇಲ್ಲೋ?

ಡಾಕ್ಟರ : ನಮ್ಮ ವೈದಿಕ ಪ್ರಾರ್ಥನಾನೇ ಇದೆ ಅಲ್ಲಾ. "ಧನಂ ಧಾನ್ಯಂ ಪಶುಂ ಬಹುಪುತ್ರ ಲಾಭಂ!

ಕಾವೇರಮ್ಮ : ಅದು ಸರಿ ಡಾಕ್ಟರರೇ, ಆದರೆ ಆ ಬಹುಪುತ್ರ ಲಾಭದ ಹಿಂದೆ ಧನ ಧಾನ್ಯಗಳ ಲಾಭದ ಬಲ ಉಂಟು.

ಶಾಮಣ್ಣ : ಡಾಕ್ಟರ್ರೇ, ಅಷ್ಟು ದೂರ ಏಕೆ? ನಿಮ್ಮದೇ ದಾಖಲೆ ಇದೆ ಅಲ್ಲ. ನಿಮಗೆ ಆರು ಗಂಡು, ನಾಲ್ಕು ಹೆಣ್ಣು. ಹೇಗಿದ್ದಾರೆ. ಒಬ್ಬೊಬ್ಬರೂ ಚಿನ್ನದ ಗುಂಡು, ಬೆಳ್ಳಿಯ ತುಂಡು.

ಡಾಕ್ಟರ : (ಖಿನ್ನ ಉಸಿರು ಬಿಟ್ಟು) ಹೌದ್ರೀ, ಶಾಮಣ್ಣ, ಆದರೆ ಅಷ್ಟು ಮಕ್ಕಳನ್ನು ಹೊತ್ತು ಹೆತ್ತ ನನ್ನ ಹಂಡತಿ ಈಗ ಹಾಸಿಗೆ ಹಿಡಿದಿದ್ದಾಳೆ–ರಕ್ತದ ಬಲವೇ ಇಲ್ಲ

ಶಾಮಣ್ಣ : ಕೇಳ್ತಿಯೇನೆ ಕಾವೇರಿ, ಅಂದಾಗ ಒರೇ ಧನ ಧಾನ್ಯದ ಬಲ ತಕ್ಕೊಂಡು ಏನು ಮಾಡಬೇಕು? ಹೇಳು ಆದರೂ ಬಹುಪುತ್ರಲಾಭದ ಜತೆ ನಮ್ಮ ಹಳೇರು ಧನ ಧಾನ್ಯನೂ ಬೇಡಿಕೊಳ್ತಿದ್ರು.

ಡಾಕ್ಟರ : ಇಂದು ಬೇಡಿಕೊಂಡು ತಿನ್ನೋರ್ಗೆ ಮಕ್ಕಳು ಹೆಚ್ಚು (ಹೊರಗೆ ಕೋಳಿ ಕೂಗ್ತದೆ). ಅಗೋ ಸತ್ಯ ಅಂತೂ ಆ ಕೋಳಿ. ಆ ಕೋಳಿ ಕತೇನೇ ಕೇಳಿ, ಬಹಾಳ ಮರಿ ಹಾಕ್ತದ. ಆದರೆ ಅವು ಸತ್ತು ಸತ್ತು ಉಳಿಯೋದೆಷ್ಟು?

ಶಾಮಣ್ಣ : ಹೌದಪ್ಪ ಬಡವರಿಗೆ ಅದಕ್ಕೇ ಮಕ್ಕಳು ಹೆಚ್ಚೇನೋ! (ನಿಟ್ಟುಸಿರು) ಇದೂ ಒಂದು ದೇವರ ನ್ಯಾಯ!

ಕಾವೇರಮ್ಮ : ಆದಿರಲಿ, ಕಟ್ಟೂ ಚಂದ್ರಿ ಇನ್ನೂ ಬಂದಿಲ್ಲ. ಸ್ಕೂಲ ಬಿಟ್ಟು ಬಹಳ ಹೊತ್ತಾಯ್ತು. ಈ ಮಕ್ಕಳು ಎಲ್ಲಿ ಹೋದ್ರುSS?

(ಚಂದ್ರಿ ಬರುತ್ತಾಳೆ)

ಚಂದ್ರಿ: (ಮೆಲುದನಿಯಲ್ಲಿ ಹಾಡುತಾ ಬರುತ್ತಾಳೆ) "ಮಕ್ಕಳಿವರೇನಮ್ಮ! ಮಕ್ಕಳಿವರೇನಮ್ಮ!

ಕಾವೇರಮ್ಮ : ಇದೇನೆ ಚಂದ್ರಿ. ಇಷ್ಟು ಹೊತ್ತು?

ಶಾಮಣ್ಣ : (ಗದ್ದರಿಸಿ) ಎಲ್ಲಿ ಹೋಗಿದ್ದೆ ಕತ್ತೆ ಮಕ್ಕಳ ಕೇಳಿಕೂತ?

ಚಂದ್ರಿ : ಇಲ್ಲ ಮಮ್ಮಿ, ಇಂದು ಶಾಲೇಲಿ ಕ್ಲಾಸ ಮುಗಿದ ಮೇಲೆ ನಮ್ಮ ...ಡಂ ಈ ಕವಿತಾ ಹೇಳಿ ಕೊಟ್ರು. ಬೇಂದ್ರೆ ಅವರ ಕವಿತಾ. ನಾ ಹಾಡ ...ಕಂತೆ —ನಾನೇ ಭಾರತಮಾತೆ— ನಾಳಿನ ಕಾರ್ಯಕ್ರಮದಲ್ಲಿ. ಓ ...ಕ್ಟರೇ, ನೋಡಲೇ ಇಲ್ಲ. ಬೆಗ್ ಪಾರ್ಡನ್.

ಡಾಕ್ಟರ : ನೆವ್ವರ್ ಮ್ಯೂಂಡ ಹಾಡಮ್ಮ ಆ ಪದ್ಯ.

ಚಂದ್ರಿ : ಮಕ್ಕಳಿವರೇನಮ್ಮ ಮಕ್ಕಳಿವರೇನಮ್ಮ

ನಾ ಪಡೆದ ಮೂವತ್ತು ಮೂರು ಕೋಟೀss !

ಡಾಕ್ಟರ : ಛೀ ಛೀ. ಈ ಲೆಕ್ಕ ಭಾರಿ ಹಳೇ ಜಮಾನೇಸುಮಾರಿ. ನಾಳೆ ಹಾಡ ಬೇಕಾದಾಗ 'ಅರವತ್ತು ಮೂರು ಕೋಟಿ' ಎಂದು ಹಾಡು –'ನಾ ಪಡೆದ ಅರವತ್ತು ಮೂರು ಕೋಟಿ'.

ಕಾವೇರಮ್ಮ : ಆದೀಲಿ ಚಂದ್ರಿ, ಒಳಗೆ ಹೋಗಿ ಕೈ ಕಾಲು ತೊಳಕೊಂಡು ಡಾಕ್ಟರಿಗೆ ಕಾಫಿಗಿಡು.

ಡಾಕ್ಟರ : ಸರಿ ಈಗ ಅಮ್ಮಾ, ನಿಮ್ಮ ಎಕ್ಸ್ಪ್ಲೈನ್ ಮಾಡ್ತೀನಿ. ತನಕ ಕಿಟ್ಟೂನೂ ಬರ್‍ತಾನೆ. ಆ ಮೇಲೆ ನಿಮ್ಮ ಬಾಲವಾಡಿ ತಪಾಸಣೆ (ನಗು)

[ಚಂದ್ರಿ ಒಳಗೆ ಹೋಗುವ ಸದ್ದು. ಒಳಗಿಂದ ನೀರಿ ಸದ್ದು ಅಕೆ ಅದೇ ಕವಿ ಹಾಡುವ ತುಂಡುಗಳ ಸಾಲುಗಳು 'ಅತ್ತೊಂದು ಹತ್ತು ಕೋಟಿ–ಹಲ ಕೆಲವು ಹುಚ್ಚು ಕುನ್ನಿ-ಲೆಕ್ಕಕ್ಕೆ ಏಷು ಸೊನ್ನೆ' ಕಪ್ಪ ಒಸಿ ಸಪ್ಪಳ ಇತ್ಯಾದಿ]

ಡಾಕ್ಟರ : ಆಲ್‌ರೈಟ್ ಕಾವೇರಮ್ಮ, ಸ್ವಲ್ಪ ವಿಶ್ರಾಂತಿ ತಕ್ಕೊಳ್ಳಿ.

ಶಾಮಣ್ಣ : ಡಾಕ್ಟರೇ, ಏನು ? ಹೇಗೆ ? ನಮ್ಮ ಯಜಮಾನಿ ಹೇಗಿದ್ದಾಳೆ ? ಚಂದ್ರಿ ಮದುವೆ, ರಂಗನ ಮುಂಜಿ ಎಲ್ಲ ಆಗಬೇಕು.

ಡಾಕ್ಟರ : ಅದಕ್ಕೂ ಮುಂಚೆ............

ಚಂದ್ರಿ: (ಬರುತ್ತಾಳೆ) ಮಮ್ಮಿ, ತಿಂಡಿ ಏನು ಇಡಲಿ ?

ಡಾಕ್ಟರ : ಇಡ್ಲಿ ಬೇಡ, ಈಗ ತಿಂಡಿನೇ ಬೇಡ. ಇನ್ನು ನಾಲ್ಕು ಐದು ತಿಂಗಳಲ್ಲಿ ಫೀಡೀನೆ ಕೊಡು, ಶಾಮಣ್ಣ

ಶಾಮಣ್ಣ : ಅಂದ್ರೇನು ಡಾಕ್ಟರ್ರೇ,

ಡಾಕ್ಟರ : ಅಂದ್ರೆ ಹೀಗೆ. ನಿಮ್ಮ ಸೌಭಾಗ್ಯವತಿ ಇಂದು ಗರ್ಭವತಿ–ಮುಂದೆ ಪುತ್ರವತಿ....ಇಲ್ನೋಡು. ಅರೇ, ಇದೇನು ಚಂದ್ರಿ, ಓಡು ನೀರು ತಾ, ಶಾಮಣ್ಣ, ಶಾಮಣ್ಣ.

ಕಾವೇರಮ್ಮ : ಅಯ್ಯೋ ದೇವರೇ ಅವರು. (ಅಳತೊಡಗುವಳು)

(ಮಕ್ಕಳೆಲ್ಲ ಒಳನುಗ್ಗಿ ಬಂದು ಕೂಗಾಡ ಹತ್ತುತ್ತಾರೆ-ಕಳವಳದಿಂದ. "ಅಪ್ಪಾ ಡ್ಯಾಡಿ, ಅಯ್ಯೋ ಅಪ್ಪ ಏಕೆ ಮಾತಾಡೊಲ್ಲ ?" ಇತ್ಯಾದಿ)

ಡಾಕ್ಟರ : ಏ ಮಕ್ಕಳೇ ಸುಮ್ನಿರಿ. ಅಪ್ಪಂಗೆ ಏನೂ ಆಗಿಲ್ಲ. ನಡೀರಿ ಹೋಗಿ ಹೂಂ, ಕಾವೇರಮ್ಮ, ನೋಡಿ. ಶಾಮಣ್ಣ ಚೇತರಿಸಿಕೊಂಡ, ಕಣ್ತೆರಿತಾ ಇದ್ದಾನೆ.

ಕಾವೇರಮ್ಮ : ದೇವರೇ ನಮೋ ನಮೊ. ಅಲ್ಲಾ ಇದೇನ್ರೀ ಪೂರಾ ಹೆದರಿ

ಬಿಟ್ರೆ ಕಣ್ತೆರಿ ಪೂರಾ.

ಶಾಮಣ್ಣ : (ಚೇತರಿಸಿಕೊಳ್ಳುತ್ತ) ಅಯೋ. ಪಾ! ಕಣ್ಣ ಮುಚ್ಚೇ ಹೋಗ ಬೇಕಿತ್ತು. ನಿಂಗೆ ತಿಂಗಳು ಹೋದದ್ದು ಕೇಳಿ, ಹೂಂ ನನ್ನ ಕೈಕಾಲೆ ತಣ್ಣ ಗಾದವು! ಮತ್ತೆ ಬಂತು ಗ್ರಹಚಾರ!

ಕಾವೇರಮ್ಮ : (ಆಕ್ಷೇಪಿಸಿ) ಹಾಗೆಲ್ಲ ಅನ್ನಬೇಡಿ ಅಂದ್ರೆ. ದೇವರಿದ್ದಾನೆ ಅವನ ಮೇಲೆ ಎಲ್ಲ ಭಾರ!

ಡಾಕ್ಟರ : ಅಮ್ಮಾ ಎಲ್ಲಾ ಆ ದೇವರ ಮೇಲೇ ಭಾರ ಹಾಕ್ತಾ ಹೋದರೆ ಆ ಬಡಪಾಯಿ ಆದರೂ ಏನೂ ಮಾಡ್ಯಾನು? ಆ ದೇವರೂ ನಮ್ಮ ಭಾರಾ ನಾಲ್ಕು ಮಂದಿ ಹೆಗಲಿಗೆ ಹೊತ್ತಾಕಿ ಕೈ ಬಿಡ್ತಾನೆ!

ಶಾಮಣ್ಣ : ನೀ ಮತ್ತೆ ಗರ್ಭಿಣಿ!

ಡಾಕ್ಟರ : ಯಾರೇನು ಮಾಡುವರು? ಯಾರಿಂದಲೇನಹುದು. ಆದರೆ ಇದು ಪೂರ್ವ ಜನ್ಮದ ಕರ್ಮ ಫಲ ಅಲ್ಲ. ಇದೇ ಜನ್ಮದ ಕರ್ಮ. ಇದೇ ಜನ್ಮದಾಗ ಇದರ ಫಲ! ಶಾಮಣ್ಣಾ ನಾ ನಿಂಗೆ ಹೇಳ್ತಾ ಬಂದೀನಿ. ನೀ ಎಲ್ಲಿ ಕೇಳ್ತಿದ್ದಿ? ಸೊಟ್ಟ ಶಾಣ್ಯಾತನ ಮಾತಾಡ್ತಿದ್ದಿ. ಇನ್ನಾದರೂ ಈಗಲಾದರೂ ಶಸ್ತ್ರಕ್ರಿಯೆ ಮಾಡಿಸ್ಕೊ ಒಪ್ಪಿಕೊ

ಕಾವೇರಮ್ಮ : ಅವರ ಬಿಡಿ ನಾನೇ ಮಾಡ್ಸಿಕೋತೀನಿ. ಆಯ್ತು ನೀವೆ ಮಾಡಿ ಬಿಡಿ ಪುಟ್ಟಿ ಹುಟ್ಟಿದಾಗಲೇ ಯಮ ತ್ರಾಸಾಯ್ತು.

ಡಾಕ್ಟರ : ನೋಡಿ, ಅದಕಿನ್ನೂ ಮೂರು ವರ್ಷ ಕಳೀಲಿಲ್ಲ ಮತ್ತೆ ಶ್ಯಾಮಣ್ಣನ ಈ ಉಪದ್ವ್ಯಾಪ! ಹೀಗೆ ಹತ್ತಾಗಿ ಶಿಶು ಹುಟ್ಟಿದ್ರೇ ಅವು ಮೈಯಲ್ಲಿ ನೆಟ್ಟ ಗಾಗೂದು ಅಷ್ಟೇ. ಹಡೆದವಳ ಗತಿನೂ ಅಷ್ಟೇ.

ಕಾವೇರಮ್ಮ : ಚಂದ್ರೀ, ಅಪ್ಪಂಗೆ ಇಷ್ಟು ಕಾಫಿ ತಂದು ಕೊಡು. ಈಗ ಹೇಗೆ? ಆರಾಂ ಅನಿಸ್ತದS ಇಲ್ಲದ ಚಿಂತಿ ಹಚ್ಚಿಕೊ ಬೇಡ್ರಿ.

(ಚಂದ್ರಿ ಎಲ್ಲರಿಗೂ ಕಾಫಿ ತಂದು ಕೊಡುತ್ತಾಳೆ. ಹಾಡುತ್ತಾ ಇದ್ದಾಳೆ. ನಾ ಹೆತ್ತ ಡಿಂಬಗಳ ಲೆಕ್ಕ ಯಮ ನೋಡಿ ನಕ್ಕ....)

ಡಾಕ್ಟರ : ಹೌದು ಚಂದ್ರಿ ಸತ್ಯ ಆಡಿದಿ. ಸತ್ತು ಸತ್ತು ಹುಟ್ಟೋದು, ಹುಟ್ಟಿ ಸಾಯೋದು.

(ಜೋರಾಗಿ ಬಾಗಿಲು ಬಡಿಯುವ ಸದ್ದು! "ಕದಾ ತೆಗೀರಿ, ಡಾಕ್ಟರ ಇದಾರೋ)

ಶಾಮಣ್ಣ : ಯಾರದು ಕೂಗೋರು?

(ಯಾರು ? ಶ್ಯಾಮಣ್ಣೋರೆ, ಬಾಗಿಲ ತೆಗೀರಿ. ನಾನು ಪೌಜದಾರ ಮಾತಾಡ್ತಿದೀನಿ)

ಶಾಮಣ್ಣ : ನಿಲ್ಲಿ ಬಂದೆ. (ಬಾಗಿಲ ತೆರೆದಾಗ ಹೊರಗಿನ ಗದ್ದಲ ಒಳ ನುಗ್ಗುತ್ತದೆ.)

ಫೌಜದಾರ : ಡಾಕ್ಟರ್ರೀ, ನಡೀರಿ ದವಾಖಾನಿಗೆ. ಶಾಮಣ್ಣೋರೇ ನೀವೂ

ಕಾವೇರಮ್ಮ : ಯಾಕೆ ಸಾಹೆಬ್ರೆ, ಅವರೇಕೆ ?

ಫೌಜದಾರ : ಏನಿಲ್ಲಮ್ಮ, ನಿಮ್ಮ ಮಗ ಬಿದ್ದು ಕೈ ಮುರ್ಕೊಂಡಾನ

ಇನ್ನೊಂದು ದನಿ : ಹೂನ್ರೀ ಡಾಕ್ಟರ್ರ ಆಸ್ಪತ್ರೆಗೆ ಒಯ್ದೀವಿ

ದನಿ ೨ : ಓಡುವ ಬಸ್ಸಿಗೆ ಹತ್ತತಿದ್ದನ್ರಿ, ಉಡಾಳ ಹುಡುಗ.

ಫೌಜದಾರ : ಅಲ್ರೀ ಶಾಮಣ್ಣೋರೇ ನೀವು ಕಾಯ್ತಂದೆ ಮಕ್ಕಳ ನಿಗಾ ಇಡಬೇಕ್ರಪ್ಪಾ.

ದನಿ ೧ : ಹೂನ್ರೀ ನಿಗಾ ಇಡಲಿಕ್ಕೆ ಆಗೋದರಿಗೆ ಇಷ್ಟು ಮಕ್ಕಳಾದ್ರೂ ಏಕೆ ಬೇಕು.

ದನಿ ೨ : ಇರ್ಲಿ ಬಿಡು ಲೇಟಾತು

ಡಾಕ್ಟರ : ಹಾಂ ರೆಡಿ ಬನ್ನಿ ಶಾಮಣ್ಣಾ, ನಾವು ಹೋಗೋಣ ಕಾವೇರಮ್ಮ ಡೊಂಟ್ ವರಿ ಇಟ್ಸ್ ಆಲ್ ರೈಟ. ನಾ ನೋಡಕೋತೇನಿ. ಕಿಟ್ಟೂನ ಇಲ್ಲಿ ತಂದು ಬಿಡ್ತೇನಿ. ಕಾಳಜಿ ತಕ್ಕೊಳ್ಳಿ. ಹೂಂ ಹೊರಡಿ. (ಬಾಗಿಲಿನಿಂದ) ಮತ್ತೆ ಅಕ್ಕಾ ನಾ ಕೊಟ್ಟ ಸೂಚನೆ ನೆನಪಿರಲಿ. ನಿಮ್ಮ ಯಜಮಾನರಿಗೆ ಮರವೇ ಹೆಚ್ಚು. (ನಗುತ್ತ ನಿರ್ಗಮನ)

ಕಾವೇರಮ್ಮ : ಅಯ್ಯೊ ಇನ್ನೆಲ್ಲಿ ಮರೀತೇವೆ. ನಮಸ್ಕಾರ. ಚಂದ್ರಿ ಬಾಗಿಲು ಇಕ್ಕಿ ಓದಿಕೊ. (ನಿಟ್ಟುಸಿರು) ಈ ಎಲ್ಲಾ ಮಕ್ಕಳನ್ನ ಎಲ್ಲಾ ಕಡೆ ಹೇಗೆ ನೋಡಿಕೊಳ್ಳೋದು ? ಯಾರು ನೋಡಿಕೊಳ್ಳೋದು ? ಅಯ್ಯೋ ದೇವರೇ. [ಬಿಕ್ಕಿ ಬಿಕ್ಕಿ ಅಳುವಳು. ಚಂದ್ರಿ ಓಡಿ ಬಂದು) ಅಮ್ಮಾ, ಅಮ್ಮಾ ಅಳತೀ ಏಕೆ ? ರಂಗಾ, ಗುಂಡಾ, ಗಂಗೀ ಇಲ್ಲಿ ಬನ್ರೀ. ಅಮ್ಮಂಗೆ ಏನೋ ಸಂಕಟ. (ಅವರು ಓಡಿ ಬರುತ್ತಾರೆ.) ಒಬ್ಬರ ಒಂದೊಂದು ದನಿ : "ಗಾಳಿಹಾಕಲೇ ?" "ಬೆನ್ನು ತಿಕ್ಕಲೆ" "ಅಳಬೇಡ ಅಮ್ಮಾ," "ನಮಗೂ ಅಳು ಬರ್ತದೆ"]

ಆಕಾಶ ನಾಟಕಗಳು ○ ○ ಗೌರೀಶ ಕಾಯ್ಕಿಣಿ

ಗೌರೀಶ ಕಾಯ್ಕಿಣಿಯವರ ಐದು ಬಾನುಲಿ ರೂಪಕಗಳ ಸಂಗ್ರಹ "ಆಕಾಶ ನಾಟಕಗಳು" ಈ ಯುಗದ ಅತಿ ಮುಖ್ಯ ಸಮೂಹ ಮಾಧ್ಯಮ ರೇಡಿಯೋದ ವಿಶಿಷ್ಟ ಪ್ರಸಾರ ತಂತ್ರಗಳನ್ನೂ, ಪರಂಪರಾಗತ ನಾಟಕ ಸಾಹಿತ್ಯದ ವಿವಿಧ ಸಾಧ್ಯತೆಗಳನ್ನೂ ಮೈಗೂಡಿಸಿಕೊಂಡಿರುವ ಅಪೂರ್ವ ಸೃಷ್ಟಿಗಳು. ನಾಟಕಗಳ ಬಗ್ಗೆಯಾಗಲೀ, ರೇಡಿಯೋ ನಾಟಕಗಳ ಬಗ್ಗೆಯಾಗಲೀ, ಏನೂ ತಿಳುವಳಿಕೆಯಿಲ್ಲದ ಅಪಕ್ವ ಹುಸಿ ಬರಹಗಳೇ ವಿಜೃಂಭಿಸುತ್ತಿರುವ ಈ ಕಾಲದಲ್ಲಿ ಕಾಯ್ಕಿಣಿಯವರ ಆಕಾಶ ನಾಟಕಗಳು ಈ ಕೊರತೆಯನ್ನು ಸ್ವಲ್ಪವಾದರೂ ತುಂಬಿಸಬಲ್ಲವು. ಶ್ರುತಿ ಪ್ರಧಾನವಾದ ಈ ರಚನೆಗಳು ತಾವು ಹೇಳಬೇಕಾದ್ದನ್ನೆಲ್ಲ ಧ್ವನಿಯ ಮೂಲಕವೇ ಹೇಳಬೇಕಾದುದರಿಂದ ಭಾಷೆಯ ಸೂಕ್ಷ್ಮ ಸಾಧ್ಯತೆಗಳನು ಅರ್ಥಪೂರ್ಣವಾಗಿ ದುಡಿಸಿಕೊಳ್ಳುತ್ತ ಒಂದು ಅರ್ಥದಲ್ಲಿ ಸ್ವಯಂ-ಸಂಪೂರ್ಣವಾಗಿವೆ. ಕೇಳುವುದಕ್ಕೆ ಎಷ್ಟು ಹಿತವೋ ಅಭಿನಯಿಸುವುದಕ್ಕೂ ಅಷ್ಟೇ ಸವಾಲಾಗಿವೆ. ಅಂದಿನ ಮಹಾಭಾರತದಿಂದ ಇಂದಿನ ಭಾರತದ ಜೀವಂತ ಸಮಸ್ಯೆಗಳ ವರೆಗೆ ಚಾಚಿಕೊಂಡಿರುವ ಈ ನಾಟಕಗಳ ಬೀಸು ನಮ್ಮ ಹಿರಿಯ ಲೇಖಕರೊಬ್ಬರು ಬದುಕನ್ನು ನೋಡುವ ಬಗೆಗೆ ಉತ್ತಮ ಉದಾಹರಣೆಗಳಾಗಿವೆ.

○

ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ

○

ಬೆಲೆ : ಐದು ರೂಪಾಯಿಗಳು